ಲಂಕೇಶರ ಕಾದಂಬರಿಗಳಲ್ಲಿ ಸ್ತ್ರೀ ಚಿತ್ರಣ

ಮಾಸ್ಟರ್ ಆಫ್ ಫಿಲಾಸಫಿ [ಎಂ.ಫಿಲ್] ಪದವಿಯ ಆಂಶಿಕ ಆವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಸಂಪ್ರಬಂಧ.

ಸಂಶೋಧನಾ ಅಭ್ಯರ್ಥಿ

ಶಶಿಕಲಾ. ಎನ್.

ಮಾರ್ಗದರ್ಶಕರು

ಡಾ. ಎಲ್.ಸಿ. ಸುಮಿತ್ರಾ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

೨೦೦೭-೦೮

301

ಂಕೇಶರ ಕಾದಂಬರಿಗಳಲ್ಲಿ ಸ್ತ್ರೀ ಚಿತ್ರಣ

ಾಸ್ಟರ್ ಆಫ್ ಫಿಲಾಸಫಿ [ಎಂ.ಫಿಲ್] ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಸಂಪ್ರಬಂಧ.

ಸಂಶೋಧನಾ ಅಭ್ಯರ್ಥಿ

ಶಶಿಕಲಾ. ಎನ್.

ಮಾರ್ಗದರ್ಶಕರು

ಡಾ. ಎಲ್.ಸಿ. ಸುಮಿತ್ರಾ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
೨೦೦೭-೦೮

ದೃಢೀಕರಣ ಪತ್ರ

ಶಶಿಕಲಾ ಎನ್. ರವರು 'ಲಂಕೇಶರ ಕಾದಂಬರಿಗಳಲ್ಲಿ ಸ್ತ್ರೀ ಚಿತ್ರಣ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ : 2 - [illegible] - ೨೦೦೮.

ಸ್ಥಳ : ತೀ. ಹಳ್ಳಿ.

Sumithra L.C.

ಡಾ. ಎಲ್.ಸಿ. ಸುಮಿತ್ರಾ
ಪ್ರಾಧ್ಯಾಪಕರು
ತುಂಗಾ ಮಹಾವಿದ್ಯಾಲಯ
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ

ಡಾ|| ಎಲ್.ಸಿ. ಸುಮಿತ್ರಾ,
ಕನ್ನಡ ಪ್ರಾಧ್ಯಾಪಕರು,
ತುಂಗಾ ಮಹಾವಿದ್ಯಾಲಯ,
ತೀರ್ಥಹಳ್ಳಿ-577432.

ಪ್ರಮಾಣ ಪತ್ರ

ಲಂಕೇಶರ ಕಾದಂಬರಿಗಳಲ್ಲಿ ಸ್ತ್ರೀ ಚಿತ್ರಣ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ **ಡಾ. ಎಲ್.ಸಿ. ಸುಮಿತ್ರಾ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಶಶಿಕಲಾ. ಎನ್.
ಬಪ್ಪುಂಜಿ ಕೈಮರ,
ಬೇರುಕೊಡಿಗೆ ಅಂಚೆ
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಪರಿವಿಡಿ

ಪ್ರಸ್ತಾವನೆ : ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ

ಶತಶತಮಾನಗಳಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶೋಷಣೆಗೆ ಒಳಗಾಗುತ್ತ ಬಂದಿರುವ ಎರಡು ಸಮುದಾಯಗಳಲ್ಲಿ ದಲಿತವರ್ಗ ಮತ್ತು ಸ್ತ್ರೀ ಸಮಾಜ ಮುಖ್ಯವಾದದ್ದು. ಜಾತಿಗಳಲ್ಲಿ ದಲಿತವರ್ಗ ಮೇಲ್‌ಜಾತಿಗಳಿಂದ ನಿರಂತರವಾಗಿ ತುಳಿತಕ್ಕೆ ಒಳಗಾಗುತ್ತ ಬಂದಿದ್ದರೆ ಸ್ತ್ರೀ ಸಮಾಜ ಯಾವ ಜಾತಿ ವರ್ಗಗಳ ಭೇದವು ಇಲ್ಲದೆ ವ್ಯವಸ್ಥೆಯಿಂದ ಶೋಷಣೆಗೆ ಒಳಗಾಗುತ್ತ ಬಂದಿದೆ. ಹೀಗೆ ಪುರುಷ ಪ್ರಧಾನ ಸಮುದಾಯದ ತುಳಿತಕ್ಕೆ ಒಳಗಾಗುತ್ತ ಬಂದಿರುವ ಸ್ತ್ರೀಗೆ ಸಾಹಿತ್ಯಿಕ ವಲಯ ನೀಡಿರುವ ಕೊಡುಗೆ ವಿಶಿಷ್ಟವಾದುದೇನೂ ಅಲ್ಲ. ಸಾಹಿತ್ಯದಲ್ಲಿಯೂ ಪುರುಷ ಸಮುದಾಯದ ಕಪಿಮುಷ್ಟಿಗೆ ಸಿಕ್ಕು ಸ್ತ್ರೀ ಶೋಷಣೆಗೆ ಒಳಗಾಗಿದ್ದಾಳೆ. ಸೌಂದರ್ಯದ ಗೊಂಬೆಯಾಗಿ ಪೋಷಣೆಗೆ ಪೂರಕವಾದ ಕೆಲವೊಂದು ಮೌಲ್ಯಗಳನ್ನು ಸಾಂಪ್ರದಾಯಿಕ ವ್ಯವಸ್ಥೆಯ ಮೂಲಕ ಪಡೆದು ಅದನ್ನು ಅನುಭವಿಸಿ ತನ್ನ ಮುಂದಿನ ಪೀಳಿಗೆಗೆ ಕೊಡುವಲ್ಲಿ ಉತ್ಸುಕತೆಯಿಂದಿದ್ದಾಳೆ. ಇಂತಹ ಸ್ತ್ರೀ ವಲಯಗಳನ್ನು ನಾವು ಹೆಚ್ಚಿನ ಸಾಹಿತ್ಯಕೃತಿಗಳಲ್ಲಿ ಕಾಣಲು ಸಾಧ್ಯವಾಗಿದೆ. ಆದರೆ ನವ್ಯ-ನವ್ಯೋತ್ತರದ ಲಂಕೇಶ್, ತೇಜಸ್ವಿಯವರ ಕಾದಂಬರಿಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೈಜವಾಗಿ ಕಂಡುಬರುವ ಬದುಕಿನ ಬಗ್ಗೆ ಅಗಾದ ಪ್ರೀತಿಯನ್ನು ಇಟ್ಟುಕೊಂಡಿರುವ ಬದುಕಿಗಾಗಿ ಎಲ್ಲವನ್ನು ಎದುರಿಸಬಲ್ಲ ಸ್ತ್ರೀ ಸಮೂಹಗಳನ್ನು ಕಾಣಬಹುದು.

ಹೀಗೆ ನಿರ್ದಿಷ್ಟ ಕಾಲಘಟ್ಟದಲ್ಲಿ ರಚಿತವಾದ ಸಾಹಿತ್ಯ ಕೃತಿಯ ಹಿಂದೆ ಚೈತನ್ಯ ಪೂರ್ಣವಾದ ಪರಂಪರೆಯೊಂದು ಇದೆ. ಈ ಪರಂಪರೆಯ ನಿರಂತರ ಹರಿಯುವಿಕೆಯು ನಿರ್ದಿಷ್ಟ ಬದುಕಿನ ಸಾರವನ್ನು ಹೀರಿ ಅರಗಿಸಿಕೊಂಡು, ಸಮಕಾಲೀನ ಸಾಮಾಜಿಕತೆಗೆ ಪ್ರತಿ ಸ್ಪಂದಿಸುತ್ತಾ ಹೊಸ-ಹೊಸ ಮೌಲ್ಯಗಳನ್ನು ಅಂತರ್ಗತಗೊಳಿಸುತ್ತಾ ಅದನ್ನು ವ್ಯಕ್ತಪಡಿಸಲು ಸಾಹಿತ್ಯವನ್ನು ಮಾಧ್ಯಮವಾಗಿಸಿಕೊಳ್ಳುತ್ತದೆ. ಹಾಗಾಗಿಯೆ ಪ್ರತಿಯೊಂದು ಸಾಹಿತ್ಯ ಕೃತಿಯ ಅಧ್ಯಯನವು ಮೌಲ್ಯ ಪರಂಪರೆಯ ಮತ್ತು ಆ ಕಾಲದ ಸಾಮಾಜಿಕತೆಯ ಅಧ್ಯಯನವೆ ಆಗಿರುತ್ತದೆ. ಇದರೊಂದಿಗೆ ಆ ಸಾಹಿತ್ಯದ ಒಳಗಿರುವ ಸಂಸ್ಕೃತಿ, ಸಾಮಾಜಿಕತೆ, ಸ್ತ್ರೀ ಬದುಕು ಮುಂತಾದವುಗಳ ಕ್ರಮಗತವಾದ

ಅಧ್ಯಯನ ನಡೆಸಬೇಕಾದರೆ ಆ ಸಾಹಿತ್ಯ ಕೃತಿ ರಚಿತವಾದ ಕಾಲಘಟ್ಟದ ಮೌಲ್ಯ ಪರಂಪರೆ ಅತ್ಯಗತ್ಯವಾದ ಸಾಮಾಗ್ರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಸಾಹಿತ್ಯವನ್ನು ಅಧ್ಯಯನ ಮಾಡಿದಾಗ ಪುರುಷ ಪ್ರಧಾನ ಸಮಾಜದ ಒಳಗೆಯೆ ಎಲ್ಲ ಶಕ್ತಿಗಳು ಅಡಗಿರುವಂತೆ ಸಾಹಿತ್ಯ ಕೃತಿಯ ನಿರ್ಮಿತಿಯ ಹಿಂದೆ ಪುರುಷರ ಹಿಡಿತಕ್ಕೆ ಸಿಕ್ಕು ಅವರ ಭಾವನೆಯಂತೆ ಬೆಳೆದಿರುವ ಸ್ತ್ರೀಯರನ್ನು ಕಾಣಬಹುದು.

ಸ್ತ್ರೀ ಪುರುಷರು ಭಿನ್ನ ಲಿಂಗ ಪ್ರಭೇದಕ್ಕೆ ಸೇರಿರುವುದು ನಿಸರ್ಗ ನಿಯಮ. "ಮನುಷ್ಯನ ಜೈವಿಕ ಸ್ವರೂಪದಿಂದಲೆ ಮನಸ್ಸಿನ ಸ್ವರೂಪವನ್ನು ನಿರ್ಧರಿಸಲಾಗಿದೆ. ಇದರಿಂದಾಗಿ ಸಂಸ್ಕೃತಿಯಲ್ಲಿ ಗಂಡಸಿನಲ್ಲಿರುವ ಗಂಡು ಗುಣಕ್ಕೂ, ಹೆಂಗಸಿನಲ್ಲಿರುವ ಹೆಣ್ಣು ಗುಣಕ್ಕೂ ಉತ್ತೇಜನ ಸಿಕ್ಕಿತು. ಗಂಡಸಿನಲ್ಲಿರುವ ಹೆಣ್ಣುಗುಣವನ್ನು ಹೆಂಗಸಿನಲ್ಲಿರುವ ಗಂಡು ಗುಣವನ್ನು ಉದ್ದೇಶಪೂರ್ವಕವಾಗಿ ಹತ್ತಿಕ್ಕಲಾಯಿತು. ವ್ಯಕ್ತಿತ್ವ ಸ್ವರೂಪದ ಭಿನ್ನತೆಯನ್ನು ಬದಿಗೆ ತಳ್ಳಿ ಸಿದ್ದವಾದ ಸೂತ್ರವನ್ನು ಎಲ್ಲರ ಮೇಲೂ ಹೇರಲಾಯಿತು. ವ್ಯಕ್ತಿತ್ವದ ಭಿನ್ನತೆಯನ್ನು ಭಿನ್ನತೆಯಾಗಿ ನೋಡದೆ, 'ಹೆಣ್ಣಿಗ' ಮತ್ತು 'ಗಂಡುಬೀರಿ' ಗಳೆಂದು ಅವರನ್ನು ಕರೆದು, ಅಂಥವರು ಅವರ ಲಿಂಗಜಾತಿಗೆ ಸೇರಲು ಅಯೋಗ್ಯರು ಎಂಬಂತೆ ನಡೆಸಿಕೊಳ್ಳಲಾಯಿತು. ಮಾನ್ಯತೆ ಪಡೆದ ಸಂಸ್ಕೃತಿಯ ಮಜಲಿನ ನಿರ್ಮಾಣವನ್ನು ಗಂಡಸರು ಮಾತ್ರ ಪ್ರಭಾವಿಸಬಲ್ಲವರಾಗಿದ್ದರಿಂದ ಸಂಸ್ಕೃತಿಯಲ್ಲೂ 'ಗಂಡು ಗುಣಕ್ಕೆ' ಆದ್ಯತೆ ದೊರೆಯಿತು. ಹೆಂಗಸು ಮತ್ತು ಹೆಂಗಸಿನ ಗುಣ ಹಿಂದಕ್ಕೆ ತಳ್ಳಲ್ಪಟ್ಟಿತು".[೧] [ಪು.ಸಂ.೬೨-೬೩]

ಇದು ಸಾಹಿತ್ಯದಲ್ಲಿ ಮುಂದುವರಿದು ಅಲ್ಲಿಯೂ ಕೂಡ ಪುರುಷಾಧಿಕಾರದ ಮೌಲ್ಯಗಳು ತಲೆ ಎತ್ತಿದವು. ಇವು ಸ್ತ್ರೀ ಪುರುಷರನ್ನು ಭಿನ್ನವಾಗಿ ಚಿತ್ರಿಸುತ್ತಾ ಸಾಗಿತು. ಪ್ರಾಚೀನ ಕನ್ನಡ ಸಾಹಿತ್ಯಕ್ಕಿಂತಲೂ ಮೊದಲು ಕಂಡುಬರುವ ಜನಪದ ಸಾಹಿತ್ಯದಲ್ಲಿಯೂ ಸ್ತ್ರೀ ಪುರುಷನ ಅಧೀನದಲ್ಲಿಯೆ ಅಸ್ತಿತ್ವವನ್ನು ಕಂಡುಕೊಂಡಿದ್ದಳು. ನಂತರ ಆಕೆ ಲಿಖಿತ ಸಾಹಿತ್ಯದಲ್ಲಿ ಸೌಂದರ್ಯದ ಮೂರ್ತಿಯಾಗಿ, ಗಂಡಿನ ಮನಸ್ಸಿಗೆ ತೃಪ್ತಿಯಾಗಿ ಕಾಣುವ ರೀತಿಯಲ್ಲಿ ಶೃಂಗರಿಸಿಕೊಂಡು ಬದುಕುತ್ತಾಳೆ. "ಸ್ತ್ರೀ ವರ್ಣನೆಗಳಲ್ಲಿ ರಸ ಸೂಸುವ ವರ್ಣನೆಗಳಿರುತ್ತವೆ.

ಇನ್ನೇನನ್ನು ಅವರ ವಿಷಯದಲ್ಲಿ ಹೇಳಲಾಗುವುದಿಲ್ಲವೇನೋ ಎಂಬಷ್ಟು ರಂಜಕ ಆ ವರ್ಣನೆಗಳು ಪ್ರತಿಯೊಂದು ಹೆಣ್ಣು ಜೀವವೂ ತನ್ನದೇ ಆದ ಭಾವಪ್ರಪಂಚ ನಡತೆ ಕಾಣಿಸುವ ಸ್ವಾತಂತ್ರ್ಯ, ಜೀವ, ಆಕಾಂಕ್ಷೆಯುಳ್ಳ ವ್ಯಕ್ತಿಯಾಗಿ ಕಾಣಿಸುವಂತಿದ್ದರೆ ಚೆನ್ನಾಗಿತ್ತು. ಅದು ನಮ್ಮ ಸಾಹಿತ್ಯದ ಪಾಲಿಗೆ ಫಲಿಸಲಿಲ್ಲ."[೨] [ಪು.ಸಂ.೨೯೭]

ಹೀಗೆ ಪ್ರಾಚೀನ ಸಾಹಿತ್ಯ ಕೃತಿಗಳಲ್ಲೂ ಸ್ತ್ರೀ ಪುರುಷರ ಮನಸ್ಥಿತಿಯಂತೆ ಚಿತ್ರಿತಗೊಂಡಿದ್ದಾಳೆ.

ಆಧುನಿಕ ಸಾಹಿತ್ಯದಲ್ಲಿ ಹೆಚ್ಚಾಗಿ ಹೆಣ್ಣನ್ನು ಗಂಡಿನ ಅಧೀನವಾಗಿಸುವ ಕೃತಿಗಳೆ ಕಂಡು ಬರತೊಡಗಿದವು. ಆದರೆ, ಯಾವಾಗ ಬ್ರಿಟಿಷರ ಆಗಮನದಿಂದ ನವ ನಾಗರಿಕತೆ ಸ್ಥಾಪಿತವಾಯಿತೊ ಈ ಮೂಲಕ ಸಾರ್ವತ್ರಿಕ ಶಿಕ್ಷಣ ಎಲ್ಲರಿಗೂ ದೊರೆಯಲು ಪ್ರಾರಂಭವಾಯಿತು. ಆಗ ನಾಲ್ಕು ಗೋಡೆಯ ಮಧ್ಯೆ ಬಂದಿಯಾಗಿದ್ದ ಸ್ತ್ರೀ ಅಲ್ಲಿಂದ ಹೊರ ಬಂದು ಹೊರ ಆವರಣವನ್ನು ನೋಡಲು ಪ್ರಾರಂಭಿಸಿದಳು. ವಿದ್ಯೆ ಕಲಿತು ಹೊರಗೆ ಹೋಗಿ ದುಡಿದು ನಿಜ ಬದುಕನ್ನು ಕಲಿಯಲು ಪ್ರಾರಂಭಿಸಿದಾಗ ತಾನು ಪುರುಷನ ಬಂಧನಕ್ಕೊಳಗಾಗಿರುವುದು ಅರಿವಾಯಿತು. ಈ ಬಂಧನದಿಂದ ಹೊರಬರಲು ಅನೇಕ ಹೋರಾಟ ಮಾಡುವುದು ಅನಿವಾರ್ಯವಾಯಿತು. ಈ ಹಿನ್ನೆಲೆಯಲ್ಲಿ ಸ್ತ್ರೀ ವಾದವು ಹುಟ್ಟಿಕೊಂಡಿತು. ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರದಲ್ಲಿ ಪುರುಷರ ಬಂಧನದಲ್ಲಿರುವ ಸ್ತ್ರೀಯು ಸಾಹಿತ್ಯ ವಲಯದಲ್ಲಿಯೂ ಕೂಡ ಬಂಧನಕ್ಕೊಳಗಾಗಿರುವುದು ಅರಿವಾಯಿತು. ಆಗ ಸ್ತ್ರೀಯು ತನ್ನ ಸಂವೇದನೆಯನ್ನು ಸಾಹಿತ್ಯದ ಮೂಲಕ ಹೊರಗೆಡಹಲು ಪ್ರಾರಂಭಿಸಿದಳು. ಸಾಹಿತ್ಯದಲ್ಲಿ ಶಿವರಾಮ ಕಾರಂತರನ್ನು ಬಿಟ್ಟರೆ ಹೆಚ್ಚಿನವರು ಸ್ತ್ರೀಯನ್ನು ಜಡವಸ್ತುವಾಗಿ ಚಿತ್ರಿಸಿದ್ದರು. ಆದರೆ ನವ್ಯ-ನವ್ಯೋತ್ತರದ ನಂತರ ಪುರುಷರು ಸ್ತ್ರೀಯ ಮೇಲೆ ಆಗುತ್ತಿರುವ ಶೋಷಣೆಯನ್ನು ಮನಗಂಡು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಸಾಹಿತ್ಯ ರಚಿಸಲು ಪ್ರಾರಂಭಿಸಿದರು. ಇವರಲ್ಲಿ ಲಂಕೇಶ್, ತೇಜಸ್ವಿ, ದೇವನೂರು ಮುಖ್ಯರಾಗುತ್ತಾರೆ. ಇವರ ಸಾಹಿತ್ಯ ಕೃತಿಗಳಲ್ಲಿ ಸ್ತ್ರೀ ವಿಭಿನ್ನ ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಂಡಿದ್ದಾಳೆ. ನಮ್ಮ ದೇಶದಲ್ಲಿ ಹಳ್ಳಿಗಳೆ ಹೆಚ್ಚಾಗಿದೆ. ಆದರೆ ನಮ್ಮ ಸಾಹಿತ್ಯ ಕೃತಿಗಳಲ್ಲಿ

ಹೆಚ್ಚಾಗಿ ನಗರದಲ್ಲಿ ಬದುಕುತ್ತಿರುವ, ಅದರಲ್ಲಿಯೂ ಶ್ರೀಮಂತ ಮನೆಗಳ ಸ್ತ್ರೀಯರನ್ನು ಕಾಣಬಹುದೆ ಹೊರತು ಗ್ರಾಮೀಣ ಪ್ರದೇಶದ ಸ್ತ್ರೀಯರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಹೀಗಾಗಿ ಸಾಹಿತ್ಯದಲ್ಲಿ ಗ್ರಾಮೀಣ ಪ್ರದೇಶದ ಸ್ತ್ರೀ ಹೆಚ್ಚಾಗಿ ಕಂಡು ಬರುವುದಿಲ್ಲ. ದೇವನೂರರ 'ಒಡಲಾಳ', 'ಕುಸುಮಬಾಲೆ', ತೇಜಸ್ವಿಯವರ 'ಕಿರುಗೂರಿನ ಗಯ್ಯಾಳಿಗಳು', ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಮುಂತಾದ ಸಾಹಿತ್ಯ ಕೃತಿಗಳು ಗ್ರಾಮೀಣ ಮಹಿಳೆಯನ್ನು ಚಿತ್ರಿಸುತ್ತದೆ. ಹಾಗಾಗಿಯೆ ಈ ಲೇಖಕರ ಕೆಲವು ಸಾಹಿತ್ಯಕೃತಿಗಳು ಗಮನಾರ್ಹವಾದುದು.

ಪಿ.ಲಂಕೇಶ್ ಹಳ್ಳಿಯಲ್ಲಿಯೆ ಹುಟ್ಟಿ ಹಳ್ಳಿಯಲ್ಲಿಯೆ ಬೆಳೆದು ಬಂದ ಸಾಹಿತಿ ಹಾಗಾಗಿ ಅವರ ಹೆಚ್ಚಿನ ಸಾಹಿತ್ಯ ಕೃತಿಗಳು ಗ್ರಾಮೀಣ ಪರಿಸರದಲ್ಲಿಯೆ ಸೃಷ್ಟಿಗೊಳ್ಳುತ್ತವೆ. ಅಲ್ಲಿನ ಮಹಿಳೆಯರೆ ಅದರ ಕೇಂದ್ರಗಳಾಗುತ್ತಾರೆ. ಈ ನಿಟ್ಟಿನಲ್ಲಿ ಲಂಕೇಶರ ಸಾಹಿತ್ಯ ಗಮನಾರ್ಹವಾಗುತ್ತದೆ.

ಲಂಕೇಶರು ಕಥೆ, ಕಾವ್ಯ, ನಾಟಕ, ಪ್ರಬಂಧ, ಕಾದಂಬರಿ ಈ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದವರು. ಇವುಗಳಲ್ಲಿ ಲಂಕೇಶ್ ನಿರ್ಮಿಸಿರುವ ಸ್ತ್ರೀ ಮಾದರಿಗಳು ಹೆಚ್ಚು-ಕಡಿಮೆ ಒಂದೇ ರೀತಿಯವು ಜೊತೆಗೆ ಅವುಗಳ ಆಶಯವು ಒಂದೇ ಬಗೆಯದು. ಇವರ ಸಾಹಿತ್ಯದಲ್ಲಿ "ಸ್ತ್ರೀಯರ ಪ್ರವೇಶ ಯಾವುದೇ ಸಂದರ್ಭದಲ್ಲಿ ಕಂಡುಬರಲಿ ಅವರ ಅಂಗಾಗದ ವರ್ಣನೆಗಳು ಬಹು ಮುಖ್ಯ ಎನ್ನುವಂತೆ ಬರುತ್ತವೆ."[೩] [ಪು.ಸಂ.೧೨೫]

ಎಂಬುದು ಅಪವಾದವಾದರೂ ಕೂಡ ಅದನ್ನು ಒಂದು ಮಿತಿಯಾಗಿಸಿಕೊಂಡು ಅವರ ಸಾಹಿತ್ಯದ ಸ್ತ್ರೀಯರನ್ನು ಅಧ್ಯಯನ ಮಾಡಿದಾಗ ಸತ್ವಯುತ ಗಟ್ಟಿ ಸ್ತ್ರೀಯರು ಕಂಡು ಬರುತ್ತಾರೆ. ಲಂಕೇಶರು ಬರೆದಿರುವ ಕಾದಂಬರಿಗಳು ಮೂರು –

೧. ಬಿರುಕು

೨. ಮುಸ್ಸಂಜೆಯ ಕಥಾ ಪ್ರಸಂಗ

೩. ಅಕ್ಕ

ಮೊತ್ತ ಮೊದಲ ಬಾರಿಗೆ ಲಂಕೇಶರ 'ಅವ್ವ' ಕವನವನ್ನು ಓದಿದ ತಕ್ಷಣ ನನ್ನ ಅರಿವಿಗೆ ಬಂದಿದ್ದು, ಲಂಕೇಶರ ಅವ್ವನಂತಿರುವ ನಮ್ಮ ಸುತ್ತಣ ಪರಿಸರದಲ್ಲಿ ಬದುಕನ್ನು ಕಟ್ಟಿಕೊಂಡಿರುವ, ಕಟ್ಟಿಕೊಳ್ಳುತ್ತಿರುವ ಅವ್ವಂದಿರು. ಹಾಗಾಗಿ ಆ ಕವನ ನನ್ನೊಳಗೆ ಸ್ಥಿರವಾಯಿತು. ಅನೇಕ ಆಲೋಚನೆಗಳನ್ನು ಹುಟ್ಟುಹಾಕುತ್ತಾ ಸಾಗಿತ್ತು. ನಂತರ 'ಮುಸ್ಸಂಜೆಯ ಕಥಾ ಪ್ರಸಂಗದ' 'ರಂಗವ್ವನ' ವ್ಯಕ್ತಿತ್ವ, ಧೈರ್ಯ, ಜಗಳಗಂಟಿತನ ಇವೆಲ್ಲವು ಗಮನ ಸೆಳೆಯಿತು. 'ರಂಗವ್ವ' ಮುಸ್ಸಂಜೆಯ ಕಥಾ ಪ್ರಸಂಗ ಕಾದಂಬರಿಯ ಕೇಂದ್ರ ವ್ಯಕ್ತಿಯಾಗದೆ ದಿನನಿತ್ಯದ ಬದುಕಿನಲ್ಲಿ ನಾವು ಕಾಣುತ್ತಿರುವ ಗ್ರಾಮೀಣ ಸ್ತ್ರೀಯರ ಪ್ರತಿನಿಧಿಯಾಗಿದ್ದಾಳೆ. ಇಂತಹ ರಂಗವ್ವ ಬದುಕುತ್ತಿರುವ ಪರಿಸರ ಮುಖ್ಯವಾಗುತ್ತದೆ.

ಲಂಕೇಶರ ಸಾಹಿತ್ಯವು ಎಲ್ಲ ಪ್ರಕಾರಗಳಲ್ಲೂ ಹರಡಿಕೊಂಡಿದೆ. ಆದರೆ ಕೇವಲ ಕಾದಂಬರಿಗಳನ್ನು ಮಾತ್ರ ಇಟ್ಟುಕೊಂಡು ಈ ಕಾದಂಬರಿಯ ಒಳಗೆ 'ಸ್ತ್ರೀ ಹೇಗೆ ಪ್ರತಿನಿಧಿಸಲ್ಪಟ್ಟಿದ್ದಾಳೆ' ಎಂಬುದನ್ನು ನೋಡುವುದು ಈ ಪ್ರಬಂಧದ ಮುಖ್ಯ ಉದ್ದೇಶ. ಸ್ತ್ರೀಯೊಬ್ಬಳು ತಾನು ಬದುಕುತ್ತಿರುವ ಸಾಮಾಜಿಕ ಪರಿಸರದಲ್ಲಿ ಯಾರ ಬೆಂಗಾವಲು ಇಲ್ಲದೆ ಬದುಕನ್ನು ನಡೆಸಲು ಹೊರಟರೆ, ಅವಳನ್ನು ಸಾಮಾಜಿಕವಾಗಿ ನೈತಿಕವಾಗಿ ದಮನ ಮಾಡುವ ಯತ್ನ ಪುರುಷ ಸಮಾಜದಿಂದ ನಡೆಯುತ್ತಿರುತ್ತದೆ. ಅವರನ್ನು ಎದುರಿಸಿ ಧೈರ್ಯದಿಂದ ಎಲ್ಲ ಕಟ್ಟುಪಾಡುಗಳನ್ನು ಮುರಿದು ತಾನು ಆಯ್ಕೆ ಮಾಡಿಕೊಂಡ ದಾರಿಯಲ್ಲಿ ಕೆಲವು ಜೀವನ ಮೌಲ್ಯಗಳನ್ನು ಜೀವಂತವಾಗಿರಿಸಿಕೊಂಡು ಮುನ್ನಡೆಯುವ ಸ್ತ್ರೀಯರು ಮುಖ್ಯರಾಗುತ್ತಾರೆ. ಇಂತಹ ಸ್ತ್ರೀ ವಲಯ ಲಂಕೇಶ್ ಕಾದಂಬರಿಯಲ್ಲಿರುವ ಕಾರಣಕ್ಕಾಗಿ ನಾನು ಇದನ್ನೆ ನನ್ನ ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

ವಾಸ್ತವ ಬದುಕಿನಲ್ಲಿ 'ರಂಗವ್ವ', 'ಸಾವಂತ್ರಿ' ಯಂತೆ ಬದುಕು ನಡೆಸಲು ಹೊರಟರೆ, ಕಾದಂಬರಿಯಲ್ಲಿ ಬರುವ ಭರ್ಮಣ್ಣ, ಶಿವಾಜಿ, ಸಣ್ಣೀರಪ್ಪ ಈ ಪುರುಷ ವರ್ಗದವರಿಗಿಂತ ತೀವ್ರತರದ ದಮನಕಾರಿ ಶಕ್ತಿಗಳು ಅಂತಹ ಸ್ತ್ರೀಯನ್ನು ನಾಶಮಾಡಲು ಕಾಯುತ್ತಿರುವ ಸಾಮಾಜಿಕ ಪರಿಸರವೆ ನಮ್ಮ ಸುತ್ತಮುತ್ತ ಇದೆ. ಆದರೆ ಇಂತಹ ದುಷ್ಟಶಕ್ತಿಗಳನ್ನು ಎದುರಿಸಿ ಬದುಕು

[illegible]

ನಡೆಸಬೇಕಾದರೆ. 'ರಂಗವ್ವ'ನಂತಹ ಆತ್ಮಸ್ಥೈರ್ಯ ಸ್ತ್ರೀಯರಲ್ಲಿ ಇರಬೇಕಾದದ್ದು ಅಗತ್ಯ. ಲಂಕೇಶ್ ಕಾದಂಬರಿಯಲ್ಲಿ ಎರಡು ರೀತಿಯ ಸ್ತ್ರೀಯರನ್ನು ಗುರುತಿಸಿದ್ದೇನೆ. ಒಂದು ಧೈರ್ಯ, ಸ್ಥೈರ್ಯದಿಂದಾ ಬದುಕುವ ಸ್ತ್ರೀಯರಾದರೆ, ಎರಡು ಧೈರ್ಯವಿದ್ದರೂ ಕೂಡ ಪುರುಷರ ಮೌಲ್ಯಗಳಿಗೆ ಕಟ್ಟುಬಿದ್ದು ಬದುಕು ನಡೆಸುವ ಸ್ತ್ರೀಯರು. ಈ ಮೂಲಕ ಮಹಿಳೆಯರನ್ನು ಸ್ಥಿರವಾಗಿ ನಿಲ್ಲಲು ಬಿಡದ ಪುರುಷ ವರ್ಗಗಳು ಇರುವುದನ್ನು ಕಾಣಬಹುದು.

ಸಂಪ್ರದಾಯಬದ್ದ ಲಿಂಗಾಯಿತ ಜಾತಿಯಲ್ಲಿ ಹುಟ್ಟಿದ ರಂಗವ್ವ ಕೊನೆಗೆ ಬ್ಯಾಡನನ್ನು ತನ್ನ ಮಗಳಿಗೆ ಮದುವೆ ಮಾಡುವುದರ ಮೂಲಕ ಸಮಾಜದ ಅನಿಷ್ಟತೆಯಲ್ಲಿ ಒಂದಾದ ಜಾತಿಯತೆಯ ಪರದೆಯನ್ನು ಕಳಚುವ ಕಾರ್ಯನಡೆಸುತ್ತಾಳೆ. ಇಂತಹ ಸ್ತ್ರೀಯರು ನಮ್ಮಲ್ಲಿ ರೂಪುಗೊಳ್ಳಬೇಕು.

ಲಂಕೇಶರ 'ಬಿರುಕು', 'ಮುಸ್ಸಂಜೆಯ ಕಥಾ ಪ್ರಸಂಗ', 'ಅಕ್ಕ' ಈ ಮೂರು ಕಾದಂಬರಿಗಳನ್ನು ಕುರಿತು ಈಗಾಗಲೇ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಎಂ.ಜಿ.ಕೃಷ್ಣಮೂರ್ತಿ, ಜಿ.ಎಸ್.ಅಮೂರ, ರಾಜೇಂದ್ರ ಚೆನ್ನಿ, ಗಿರಡ್ಡಿಗೋವಿಂದ ರಾಜ, ಟಿ.ಪಿ.ಅಶೋಕ, ಕಿಕ್ಕೇರಿ ನಾರಾಯಣ, ಸಿ.ಎನ್.ರಾಮಚಂದ್ರನ್, ಡಾ.ಸಬಿಹಾ ಭೂಮಿಗೌಡ, ಸಿ.ವೆಂಕಟೇಶ ಮೂಂತಾದವರು ವಿಮರ್ಶೆ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಇದರಲ್ಲಿ ಮುಖ್ಯವಾಗಿ ಡಾ.ಸಬಿಹಾ ಭೂಮಿಗೌಡ, ಹಾಗೂ ಇನ್ನು ಅನೇಕ ವಿಮರ್ಶಕರು ಒಟ್ಟು ಲಂಕೇಶ್ ಕಾದಂಬರಿಗಳನ್ನು ವಿಮರ್ಶೆಗೊಳಪಡಿಸುವಾಗ ಅಲ್ಲಿ ಬರುವ ಸ್ತ್ರೀಯರ ಬದುಕಿನ ಮೇಲೂ ತಮ್ಮ ದೃಷ್ಟಿಯನ್ನು ಬೀರಿದ್ದಾರೆ ಅದನ್ನು ಸಂಕ್ಷಿಪ್ತವಾಗಿ ಮುಂದೆ ನೀಡಲಾಗಿದೆ.

ಡಾ.ಸಬಿಹಾ ಭೂಮಿಗೌಡ ತಮ್ಮ 'ನಿಲುಮೆ' ಕೃತಿಯಲ್ಲಿ 'ಲಂಕೇಶ್ ಕಾದಂಬರಿಗಳ ಅಧ್ಯಯನ೭೭' ಎಂಬ ಶೀರ್ಷಿಕೆಯಲ್ಲಿ ಮೂರು ಕಾದಂಬರಿಗಳನ್ನು ಒಟ್ಟಾಗಿ ಗ್ರಹಿಸಿ ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಕೆಲವು ವಿಶಿಷ್ಟ ಮತ್ತು ಅನನ್ಯ ಲಕ್ಷಣಗಳನ್ನು ಗುರುತಿಸಿದ್ದಾರೆ.

೧. ಕಾದಂಬರಿಗಳ ಕೇಂದ್ರ ಪಾತ್ರಗಳ ದ್ವಂಧ್ವ ಮನಸ್ಥಿತಿಯನ್ನು ಗುರುತಿಸುತ್ತಾ ಸಾವಂತ್ರಿ ತಾನು ಆಯ್ದುಕೊಂಡ ಬಾಳ ಸಂಗಾತಿಯ ಕುರಿತಂತೆಯೂ ದ್ವಂಧ್ವಗಳನ್ನು ಹೊಂದಿದ್ದಳು. ಕೊನೆಗೆ ಆಕೆ ಮಂಜನ ಬಗ್ಗೆ ಒಂದು ನಿರ್ದಿಷ್ಟ ನಿರ್ಧಾರಕ್ಕೆ ಬಂದಳು ಎನ್ನುವುದಕ್ಕಿಂತ ಪರಿಸ್ಥಿತಿಗಳೇ ಅವಳ ಆಯ್ಕೆಯನ್ನು ಒತ್ತಯಿಸುತ್ತವೆ.

೨. ಎರಡು ರೀತಿಯ ವಿಭಿನ್ನ ಸ್ತ್ರೀ ಪಾತ್ರಗಳನ್ನು ಗುರುತಿಸುತ್ತಾರೆ. ಒಂದು, ಸತ್ವಯುತ ಗಟ್ಟಿ ಸ್ತ್ರೀ ಪಾತ್ರಗಳು ಇದಕ್ಕೆ ರಂಗವ್ವ ಮತ್ತು ಸಾವಂತ್ರಿಯರು ನಿದರ್ಶನ, ಎರಡು ಭೋಗ ಸಂಸ್ಕೃತಿಗೆ ಒಗ್ಗಿ ಹೋದ ಸ್ತ್ರೀ ಪಾತ್ರಗಳು.

೩. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಗೂ, ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಗೂ ಇರುವ ವ್ಯತ್ಯಾಸವನ್ನು ಗುರುತಿಸುತ್ತಾರೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಲವಲವಿಕೆ, ಸ್ವಾತಂತ್ರ್ಯಗಳಿದ್ದರೆ, ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಏಕತಾನತೆ, ನಿಷ್ಕ್ರಿಯತೆ, ಹಾಗೂ ನಿರ್ದಯತೆಗಳು ಪ್ರಕಟಗೊಳ್ಳುತ್ತದೆ.

೪. ಲಂಕೇಶ್ ಕಾದಂಬರಿಯಲ್ಲಿ ಸ್ತ್ರೀಯರ ಮನದ ಹೊಯ್ದಾಟ ಪ್ರಧಾನವಾಗದೆ; ಅವರ ಅಂಗಾಂಗಗಳ ವರ್ಣನೆಯ ವಿವರಗಳೇ ಮುಖ್ಯವಾಗಿ ಕಂಡು ಬರುತ್ತದೆ. ಹೀಗೆ ಸ್ತ್ರೀಯರು ಗಂಡಿನ ಭೋಗಾಕಾಂಕ್ಷೆಯನ್ನು ಈಡೇರಿಸುವ ಸರಕುಗಳಾಗಿ ಕಂಡುಬರುತ್ತದೆ.

೫. ಪುರುಷ ಪ್ರಧಾನ ಸಮಾಜದ ಮೌಲ್ಯಗಳು ವ್ಯಕ್ತಿಗಳಲ್ಲಿ ಅಂತಸ್ಥವಾಗಿ ಪ್ರವಹಿಸುತ್ತಿರುತ್ತವೆ ಎಂಬುದನ್ನು ಲಂಕೇಶರು ಗುರುತಿಸಿದ್ದಾರೆ. ಕ್ಯಾತನಂತಹ ಎಳೆಯ ಹುಡುಗನ ಮನದಲ್ಲೂ ಮನೆಯ ಹೆಣ್ಣುಮಕ್ಕಳ ಮೇಲೆ ಲೈಂಗಿಕ ಬದುಕಿನ ಮೇಲೆ ನಿಯಂತ್ರಣ ಸ್ಥಾಪಿಸಬೇಕೆನ್ನುವ ಬಯಕೆ ಇರುತ್ತದೆ ಎಂಬುದನ್ನು ಗುರುತಿಸಿದ್ದಾರೆ.

೬. ಲೈಂಗಿಕ ಬದುಕಿನ ಅರಾಜಕತೆಯನ್ನು ಸಹಜವೆಂದು ಅನಿವಾರ್ಯವೆಂದು ತಿಳಿಸುವ ಪ್ರಯತ್ನ ಲಂಕೇಶರ ಕಾದಂಬರಿಯಲ್ಲಿ ಬರುತ್ತದೆ.

ಹೀಗೆ ಡಾ.ಸಬಿಹಾ ಭೂಮಿಗೌಡರು ವಿಭಿನ್ನ ನೆಲೆಯಲ್ಲಿ ಲಂಕೇಶರ ಕಾದಂಬರಿಯಲ್ಲಿ ಬರುವ ಸ್ತ್ರೀಯರನ್ನು ನೋಡುತ್ತಾರೆ.

ಪ್ರೊ. ಸಿ.ಎನ್.ರಾಮಚಂದ್ರನ್ 'ಬಯಲುರೂಪ' (ಆಯ್ದ ವಿಮರ್ಶಾ ಲೇಖನಗಳ ಸಂಗ್ರಹ) ಈ ಕೃತಿಯಲ್ಲಿ 'ಲಂಕೇಶರ ಕಾದಂಬರಿಗಳ ಮರುಓದು ಎಂಬ ಲೇಖನದಲ್ಲಿ ಮುಸ್ಸಂಜೆಯ ಕಥಾ ಪ್ರಸಂಗ ಕಾದಂಬರಿಯ 'ರಂಗವ್ವ' ಸಾವಂತ್ರಿಯಲ್ಲಿ ಕಂಡು ಬರುವ ಪ್ರೀತಿ-ಸ್ನೇಹ ಮುಂತಾದ ವೈಯಕ್ತಿಕ ಮೌಲ್ಯಗಳ ಮತ್ತು ಅದಮ್ಯ ಜೀವನೋತ್ಸಾಹ ಛಲ ಇವುಗಳಿಂದಾಗಿಯೆ ಅವರು ವಿಶಿಷ್ಟ ಸ್ತ್ರೀಯರಾಗಿ ಕಂಡು ಬರುತ್ತಾರೆ ಎಂದು ಗುರುತಿಸುತ್ತಾರೆ. ಆದರೆ ಸಂಪೂರ್ಣಮ್ಮ, ನಿಂಗವ್ವ, ಶಿವಿಯಲ್ಲಿ ಇಂತಹ ಮೌಲ್ಯಗಳು ಇಲ್ಲದೆ ಇರುವ ಕಾರಣಕ್ಕಾಗಿಯೆ ಅವರ ಬದುಕು ದುಸ್ತರವಾಗುತ್ತದೆ ಎಂಬುದನ್ನು ಗುರುತಿಸುತ್ತಾರೆ.

ರಾಘವೇಂದ್ರ ಪಾಟೀಲ ಸಂಪಾದಕರಾಗಿರುವ 'ಬೋದಿಲೇರನ ಸಖ-ಲಂಕೇಶ್ ನೆನಪಿನ ಸಂಪುಟ' ದಲ್ಲಿ 'ಬಿರುಕು' ಮತ್ತು 'ಅಕ್ಕ' 'ಚೆಲ್ಲಾಡಿದ ಒಂದಿಷ್ಟು ಟಿಪ್ಪಣಿಗಳು' ಎಂಬ ಲೇಖನದಲ್ಲಿ ರಾಘವೇದ್ರ ಪಾಟೀಲರು 'ಬಿರುಕು ಮತ್ತು ಅಕ್ಕ' ಕಾದಂಬರಿಯ ಬಗ್ಗೆ ವಿಮರ್ಶೆ ಮಾಡುತ್ತಾ, "ಲಂಕೇಶರು ತಮ್ಮ ಅಕ್ಕ ಕಾದಂಬರಿಯಲ್ಲಿ ಶೀಲ ಎನ್ನುವ ಮೌಲ್ಯವನ್ನು ಶೋಧಿಸಲು ತೊಡಗುತ್ತಾರೆನ್ನಿಸುತ್ತದೆ. ಎನ್ನುತ್ತಾ ಶೀಲ ಬರೀ ಹೆಣ್ಣಿನ ಲೈಂಗಿಕ ಪಾವಿತ್ರ್ಯ ಎನ್ನುವಂತೆ ನೋಡುವುದಲ್ಲ. ಅದು ವ್ಯಕ್ತಿಗಳಿಂದ ಹಿಡಿದು ಇಡಿ ಸಮಾಜವನ್ನೇ ವ್ಯಾಪಿಸುತ್ತದೆ" ಎನ್ನುತ್ತಾ ಪದ್ದಿ ಮತ್ತು ದೇವೀರಿಯ ಲೈಂಗಿಕ ಶೀಲದ ಬಗ್ಗೆಯೂ ಮಾತಾನಾಡುತ್ತಾರೆ.

ಡಾ. ಪ್ರಧಾನ್ ಗುರುದತ್ ಸಂಪಾದಕರಾಗಿರುವ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಪಿ.ಲಂಕೇಶ್ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು' ಕೃತಿಯಲ್ಲಿ 'ಲಂಕೇಶರ ಕಾದಂಬರಿ' ಎಂಬ ಲೇಖನದಲ್ಲಿ ಅಕ್ಕ ಕಾದಂಬರಿಯಲ್ಲಿನ ದೇವೀರಿ-ಕ್ಯಾತರ ನಡುವಿನ ಅಕ್ಕ-ತಮ್ಮರ ಸಂಬಂಧವನ್ನು ಹಾಗೂ ಸ್ತ್ರೀಯರ ಮೇಲೆ ನಡೆಯುವ ಲೈಂಗಿಕ ಶೋಷಣೆಯನ್ನು ವಿವರಿಸುತ್ತಾರೆ.

'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯ ಸಾವಂತ್ರಿಗೆ ಜಾತಿ-ಮತಗಳ ಹೊರಗಿನ ತತ್ವಗಳ ಗೋಜಲು ಅವಳಿಗೆ ಇಲ್ಲ ಎನ್ನುತ್ತಾ ಆಣೆಬಡ್ಡಿ ರಂಗವ್ವನ ಬದುಕಿನ ಹಂಬಲವನ್ನು ಗುರುತಿಸುತ್ತಾರೆ.

ಸಮಗ್ರ ಗ್ರಾಮ ಭಾರತದ ಕತೆಯಾಗಿ 'ಮುಸ್ಸಂಜೆಯ ಕಥಾ ಪ್ರಸಂಗ' ಎಂಬ ಲೇಖನದಲ್ಲಿ ಸಿ.ವೆಂಕಟೇಶ್ "ಮುಂದುವರಿಯುತ್ತಿದ್ದ ಸಾವಂತ್ರಿ-ಮಂಜರ ಪ್ರೇಮವನ್ನು ಸಹಿಸದ ಭರ್ಮಣ್ಣ, ಸಂಗಡಿಗರಲ್ಲಿ ಅಸೂಯೆ ಪ್ರಬಲವಾಗಿ, ಸಾವಂತ್ರಿಯ ಶೀಲವನ್ನು ಕೆಡಿಸುವ ಸಾಹಸಕ್ಕೆ ಮುಂದಾಗುವರು ಈ ಪ್ರಯತ್ನ ಫಲವಾಗಿ ಹಿಂದಿರುಗಿದವರಲ್ಲಿ ಪ್ರಬಲನಾಗಿದ್ದ ಪೈಲ್ವಾನ್ ಶಿವಾಜಿ ಭರ್ಮಣ್ಣನ ಕಿರಿಯ ಹೆಂಡತಿ ರಾಮಿಯನ್ನೆ ಹಾರಿಸಿಕೊಂಡು ಹೋಗಿದ್ದ. ಇಬ್ಬರು ಹೆಂಡಿರನ್ನು ಕಟ್ಟಿಕೊಂಡಿದ್ದ ಭರ್ಮಣ್ಣ ಅವರಿಗೆ ಸುಖ ಕೊಡಲಾಗದೆ ಅವರಲ್ಲಿ ಅತೃಪ್ತಿ ತುಂಬಿದ್ದೆ ಇದಕ್ಕೆ ಕಾರಣ"[೪] [ಪು.ಸಂ.೩೧]

ಎನ್ನುತ್ತಾ ಪುರುಷರ ಅಸಮರ್ಥತೆಯನ್ನು ವಿಡಂಬಿಸುತ್ತಾರೆ.

ಹೀಗೆ ಲಂಕೇಶ್ ಕಾದಂಬರಿಗಳ ಮೇಲೆ ಬಂದ ಬಿಡಿ-ಬಿಡಿ ಲೇಖನಗಳಲ್ಲಿ ವಿಮರ್ಶಕರು ಕಾದಂಬರಿಯಲ್ಲಿ ಮುಖ್ಯರಾದ ರಂಗವ್ವ, ಸಾವಿಂತ್ರಿ, ರಾಮಿ, ರುದ್ರಿ, ದೇವೀರಿ, ಶಾಂತಳ ಬಗ್ಗೆ ವಿಮರ್ಶಾ ನೋಟವನ್ನು ನೋಡುವ ಪ್ರಯತ್ನ ಮಾಡುತ್ತಾರೆ.

ಡಾ. ಸಬಿಹಾ ಭೂಮಿಗೌಡರನ್ನು ಬಿಟ್ಟರೆ ಉಳಿದ ವಿಮರ್ಶೆಗಳು ಸ್ತ್ರೀವಾದಿ ಹಿನ್ನಲೆಗೆ ಬಂದ ಲೇಖನಗಳಲ್ಲಿ ಇವು ಕಾದಂಬರಿಯಲ್ಲಿ ಬರುವ ಮುಖ್ಯ ಘಟನೆಗಳಿಗೆ ಹಾಗೂ ಹಿನ್ನಲೆಗೆ ಅನುಗುಣವಾಗಿ ಬಂದ ಸ್ತ್ರೀಯರನ್ನು ಗುರುತಿಸುವ ಪ್ರಯತ್ನವಾಗಿದೆ.

ಆದರೆ ಸ್ತ್ರೀವಾದಿ ಅಧ್ಯಯನವು ಖಚಿತವಾದ ನೆಲೆಯಲ್ಲಿ ಆಗಬೇಕಾದದ್ದು ಅಗತ್ಯ "ಸ್ತ್ರೀಯರ ಪ್ರಗತಿ ಮತ್ತು ಸಮಾನತೆಗೆ ಈ ವಾದದಲ್ಲಿ ಮೊದಲ ಸ್ಥಾನ, ನಂತರ ಅದನ್ನು ಸಾಮಾಜಿಕವಾದ ಗುರಿಗಳೊಂದಿಗೆ ಬೆಸೆಯುವುದು ಅಗತ್ಯ. ಸ್ತ್ರೀವಾದ ನೇರವಾಗಿ ಮಹಿಳೆಯರ ಸಮಾನತೆಯನ್ನು ಉದ್ದೇಶಿಸಿದ್ದರೂ ವ್ಯಾಪಕಾರ್ಥದಲ್ಲಿ ಮನುಷ್ಯ ಮನುಷ್ಯರ ನಡುವಿನ ಸಮಾನತೆಯನ್ನು ಅದು ಹೇಳುತ್ತದೆ"[೫] [ಪು.ಸಂ.೧೯೭] ಡಾ. ವಿಜಯಾದಬ್ಬೆಯವರ ಈ ಮಾತುಗಳು ಸ್ತ್ರೀವಾದದ ಗುರಿಯನ್ನು ಸ್ಪಷ್ಟೀಕರಿಸುತ್ತದೆ.

"ಸ್ತ್ರೀವಾದವೆನ್ನುವುದು ಬೌದ್ಧಿಕ ಕಸರತ್ತು ಏನಲ್ಲ. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ ಗೌರವ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹದೇ ಪ್ರತಿಕ್ರಿಯೆಯನ್ನು ಬಯಸುವಂತಹದಾಗಿದೆ. ಪ್ರಜ್ಞಾವಂತ ಪುರುಷರು ಸ್ತ್ರೀಯರಿಗೆ ತಕ್ಕ ಘನತೆ ಗೌರವಗಳಿಂದ ಅವರನ್ನು ಕಾಣುವುದು ಸ್ತ್ರೀವಾದವಾಗಿದೆ."[೬] [ಪು.ಸಂ.೧೫೫] ಎನ್. ಗಾಯತ್ರಿಯವರು ಸ್ತ್ರೀವಾದಿಗಳು ಪುರುಷರಿಂದ ನಿರೀಕ್ಷೆ ಮಾಡುವ ಸಂಗತಿಗಳನ್ನು ಮೇಲಿನ ಮಾತುಗಳಲ್ಲಿ ಹೇಳುತ್ತಾರೆ.

ಹೀಗೆ ಸ್ತ್ರೀವಾದಿ ಅಧ್ಯಯನವೆನ್ನುವುದು ನಿರ್ದಿಷ್ಟವಾದ ಗುರಿ ಮತ್ತು ನಿರೀಕ್ಷೆಗಳನ್ನು ಇಟ್ಟುಕೊಂಡಿದೆ. ಈ ಹಿನ್ನೆಲೆಯಲ್ಲಿ ಲಂಕೇಶ್ ಕಾದಂಬರಿಗಳಲ್ಲಿನ ಸ್ತ್ರೀ ಚಿತ್ರಣವನ್ನು ಮಾಡಲಾಗಿದೆ.

ಲಂಕೇಶ್ ಕಾದಂಬರಿಯ ಸ್ತ್ರೀಯರನ್ನೆ ಕೇಂದ್ರವಾಗಿಟ್ಟುಕೊಂಡು ಬಹುಶಃ ಇದುವರೆಗೂ ಪೂರ್ಣ ಪ್ರಮಾಣದ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಲಂಕೇಶ್ ಕಾದಂಬರಿಯ ಸ್ತ್ರೀಯರನ್ನೆ ಕೇಂದ್ರವಾಗಿಟ್ಟುಕೊಂಡು ಅವರ ಬದುಕು, ಬವಣೆ, ಅವರ ಮೇಲೆ ಹೇರಲ್ಪಟ್ಟಿರುವ ಪುರುಷ ಮೌಲ್ಯಗಳು ಅದನ್ನು ಮೀರಿ ಬದುಕುವ ಛಲ, ಗುರಿ, ವಿದ್ಯಾವಂತ ಸ್ತ್ರೀಯರಲ್ಲಿ ಮಹತ್ವಾಕಾಂಕ್ಷೆ ಇಲ್ಲದೆ ಇರುವುದು. ಹೀಗೆ ಎಲ್ಲ ನೆಲೆಯಲ್ಲಿ ಸ್ತ್ರೀ ಸಂವೇದನೆಯ ಹಿನ್ನಲೆಯಲ್ಲಿ ನನಗೆ ಮುಖ್ಯವೆಂದು ಕಂಡು ಬಂದ ಕೆಲವು ಅಂಶಗಳನ್ನು ಕಥನದ ಸ್ಥೂಲ ಚೌಕಟ್ಟಿನಲ್ಲಿ ಈ ಪ್ರಬಂಧದಲ್ಲಿ ಪ್ರಸ್ತಾಪಿಸುತ್ತೇನೆ.

ಅಧ್ಯಯನ ಕ್ರಮ:

ಲಂಕೇಶರ ಕಾದಂಬರಿಯು ಜಾತಿ, ಅಧಿಕಾರ, ರಾಜಕೀಯ, ಭ್ರಷ್ಟತೆ ಮುಂತಾದ ಪಾತಳಿಗಳನ್ನು ಒಳಗೊಂಡಿದೆ. ಆದರೆ ನನ್ನ ಅಧ್ಯಯನವು ಸ್ತ್ರೀಯನ್ನೇ ಮುಖ್ಯವಾಗಿ ಇಟ್ಟುಕೊಂಡಿರುವುದರಿಂದ ಆ ಜಾತಿಯನ್ನು ಮೀರುವ ಮತ್ತು ಒಳಗೊಳ್ಳುವ ಸ್ತ್ರೀಯರು ಇದ್ದಾಗ ಕಾದಂಬರಿಯ ಒಳಗೆ ಬರುವ ಜಾತಿಯ ಬಗ್ಗೆ, ಅಧಿಕಾರ ಬಗ್ಗೆ ವಿಚಾರ ಮಾಡಿದ್ದೇನೆಯೆ ಹೊರತು ಸ್ತ್ರೀ ಇರದೆ ಇರುವ ಕೆಲವೊಂದು ಮುಖ್ಯ ನಿಲುವುಗಳನ್ನು ಹೇಳಲು ಹೋಗಲಿಲ್ಲ. ಪ್ರತಿ ವ್ಯಕ್ತಿಯ ವ್ಯಕ್ತಿತ್ವದ ಮೇಲೂ ಆತ ಬದುಕುತ್ತಿರುವ ಪರಿಸರ ಮುಖ್ಯ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ

ಲಂಕೇಶ್ ಕಾದಂಬರಿಯ ಸ್ತ್ರೀಯರು ವಿಶಿಷ್ಟತೆಯನ್ನು ಹೊಂದಲು ಅವರು ಬದುಕುತ್ತಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಕೌಟುಂಬಿಕ ಪರಿಸರಗಳು ಕಾರಣವಾಗುವುದನ್ನು ತಿಳಿಸಲಾಗಿದೆ. ಲಂಕೇಶ್ ಕಾದಂಬರಿಯಲ್ಲಿ ಸ್ತ್ರೀಯರೆ ಕೇಂದ್ರವಾಗಿರುವ ಇಡೀ ಕಾದಂಬರಿಯ ಸ್ವರೂಪವನ್ನು ಹೇಳುತ್ತಾ ಯಾವ ಯಾವ ನೆಲೆಯಲ್ಲಿ ಸ್ತ್ರೀ ಮುಖ್ಯಳಾಗುತ್ತಾಳೆ. ಎಂಬುವುದರತ್ತ ಗಮನಹರಿಸಲಾಗಿದೆ. ಜೊತೆಗೆ ಲಂಕೇಶ್ ಕಾದಂಬರಿಯಲ್ಲಿ ಬರುವ ಸ್ತ್ರೀಯರನ್ನು ಸ್ತ್ರೀಪರ ದೃಷ್ಟಿಕೋನದಿಂದ ನೋಡುವ ಒಂದು ಪ್ರಯತ್ನ. ಈ ನೆಲೆಯಲ್ಲಿ ನನ್ನ ಅಧ್ಯಯನ ಕ್ರಮ ಸಾಗಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಮಿತಿ:

ಈ ಕಿರು ಸಂಶೋಧನಾ ಪ್ರಬಂಧದಲ್ಲಿ ಮುಖ್ಯವಾಗಿ 'ಲಂಕೇಶ್' ಕಾದಂಬರಿಯ ಸ್ತ್ರೀ ಚಿತ್ರಣವನ್ನು ಮಾತ್ರ ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅವರ 'ಮುಸ್ಸಂಜೆಯ ಕಥಾ ಪ್ರಸಂಗ', 'ಅಕ್ಕ' ಕಾದಂಬರಿಗಳಿಗೆ ಹೆಚ್ಚು ಒತ್ತು ನೀಡಲಾಗಿದ್ದು, 'ಬಿರುಕು' ಕಾದಂಬರಿಯಲ್ಲಿ ಬರುವ 'ಶಾಂತ' ಮತ್ತು ಆಕೆಯ ತಾಯಿಯನ್ನು ಅಗತ್ಯವೆನ್ನುವ ಸಂದರ್ಭದಲ್ಲಿ ಮಾತ್ರ ವಿವರಿಸಲಾಗಿದೆ. ಈ ಪುಟ್ಟ ಅಧ್ಯಯನದಲ್ಲಿ ಕೆಲವು ಮುಖ್ಯ ಘಟನೆಗಳನ್ನು, [ಉದಾ:- ರಂಗವ್ವ, ಸಾವಂತ್ರಿಯನ್ನು ಮಂಜನಿಗೆ ಮದುವೆ ಮಾಡುವ ಸಂದರ್ಭ]. ಮತ್ತೆ ಮತ್ತೆ ಸಂದರ್ಭಕ್ಕೆ ತಕ್ಕಂತೆ ಉಲ್ಲೇಖಿಸಿದ್ದೇನೆ.

ಮುಂದೆ ಸಾಹಿತ್ಯ ಮತ್ತು ಸ್ತ್ರೀವಾದದ ಬಗೆಗೆ ಹೆಚ್ಚು ಆಸಕ್ತಿ ಇಟ್ಟುಕೊಂಡು, ಯಾವ ಒತ್ತಡಗಳು ಇಲ್ಲದೆ ನನ್ನ ಈ ಅಧ್ಯಯನ ಮುಂದುವರಿಸಿಕೊಂಡು ಹೋಗುವಾಗ ಈ ವಿಷಯದ ಗ್ರಹಿಕೆ ಇನ್ನೂ ವಿಸ್ತರಿಸಬಹುದು. ಒಟ್ಟಿನಲ್ಲಿ ಒರ್ವ ಸಂಶೋಧನಾ ವಿದ್ಯಾರ್ಥಿಯಾಗಿದ್ದುಕೊಂಡು ಅಧ್ಯಯನದ ನಿರ್ದಿಷ್ಟ ಅವಧಿ ಮತ್ತು ಪುಟಗಳ ಚೌಕಟ್ಟಿಗೆ ಅನುಗುಣವಾಗಿ ಈ ಪ್ರಬಂಧಕ್ಕೆ ಒಂದು ಸೀಮಿತ ಚೌಕಟ್ಟನ್ನು ಒದಗಿಸಿದ್ದೇನೆ.

ಅಡಿ ಟಿಪ್ಪಣಿ

೧. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ

ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೨. ಸೀತಾರಾಮಯ್ಯ ವಿ. ಮಹಾಕವಿ ಪಂಪ,

೩. ಬೋದಿಲೇರನ ಸಖ: ಲಂಕೇಶ್ ನೆನಪಿನ ಸಂಪುಟ.

ಸಂ. ರಾಘವೇಂದ್ರ ಪಾಟೀಲ

೪. ಸಮಗ್ರ ಗ್ರಾಮಭಾರತದ ಕತೆಯಾಗಿ ಮುಸ್ಸಂಜೆಯ

ಕಥಾ ಪ್ರಸಂಗ

ಸಿ. ವೇಂಕಟೇಶ್

೫. ಸ್ತ್ರೀಯಾತ್ಮಕತೆಯ ಅಭಿವ್ಯಕ್ತಿ ಮತ್ತು

ಸ್ತ್ರೀವಾದಿ ಚಳುವಳಿ ಕನ್ನಡ ಸಾಹಿತ್ಯ ಸಂದರ್ಭ

ಸಾಹಿತ್ಯ ಅಕಾಡೆಮಿ ಪ್ರಕಾಶನ- ೧೯೯೦

೬. ಮಹಿಳೆ ಬಿಡುಗಡೆ ಹಾದಿಯಲ್ಲಿ- ಎನ್. ಗಾಯಿತ್ರಿ

ನವ ಕರ್ನಾಟಕ ಪ್ರಕಾಶನ -೧೯೯೧

೭. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ಅಧ್ಯಾಯ ೧

ಲಂಕೇಶ್ ಕಾದಂಬರಿಗಳಲ್ಲಿ ಕಂಡು ಬರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಪರಿಸರ

ಅಧ್ಯಾಯ ೧

ಲಂಕೇಶ್ ಕಾದಂಬರಿಗಳಲ್ಲಿ ಕಂಡು ಬರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಪರಿಸರ

ಲಂಕೇಶರ ಮೂರು ಕಾದಂಬರಿಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿದೆ. 'ಮುಸ್ಸಂಜೆಯ ಕಥಾ ಪ್ರಸಂಗ' ಗ್ರಾಮೀಣ ಪರಿಸರವನ್ನು, 'ಬಿರುಕು' ನಗರ ಜೀವನವನ್ನು, 'ಅಕ್ಕ' ನಗರದ ಒಳಗಿರುವ ಕೊಳಗೇರಿಯ ಪರಿಸರದ ಚಿತ್ರಣವನ್ನು ನೀಡುತ್ತದೆ. ಈ ಮೂರು ಕಾದಂಬರಿಗಳಲ್ಲಿ ಬೇರೆ ಬೇರೆ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಪರಿಸರಗಳನ್ನು ಕಾಣಬಹುದು. ಹೀಗೆ ವಿಭಿನ್ನ ಪರಿಸರದ ಒಳಗೆ ಇರುವ ವರ್ಗ ಅಸಮಾನತೆ, ಆರ್ಥಿಕ ಅಸಮಾನತೆ ಬದುಕಿನ ಸ್ಥಿರ ಸ್ಥಿತಿಗಾಗಿ ಹಣವನ್ನು ಸಂಪಾದಿಸಲೆಬೇಕೆನ್ನುವ ಹಂಬಲ ಅದರಿಂದ ಉಂಟಾಗುವ ದುಃಖ ಸಂತೋಷ, ಏರು-ಪೇರುಗಳು, ಇಂತಹ ಸಾಮಾಜಿಕ ವಲಯಗಳಲ್ಲಿ ಸೃಷ್ಟಿಗೊಂಡಿರುವ ಈ ಪರಿಸರಗಳಿಗೆ ಅನುಗುಣವಾಗಿ ಛಲ, ಹಟಗಳ ಅನಿವಾರ್ಯತೆಯ ಜೊತೆಯಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಸ್ತ್ರೀ ಸಮೂಹವನ್ನು ಕಾಣಬಹುದು. ಹೀಗೆ ಕಾದಂಬರಿಯಲ್ಲಿ ಕಂಡು ಬರುವ ಸ್ತ್ರೀಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಪರಿಸರಗಳನ್ನು ಪ್ರತ್ಯೇಕವಾಗಿ ನೋಡಬಹುದು.

ಲಂಕೇಶ್ ಕಾದಂಬರಿಯಲ್ಲಿ ಕಂಡು ಬರುವ ಸ್ತ್ರೀಯರ ಆರ್ಥಿಕ ಪರಿಸರ : -

'ಮುಸ್ಸಂಜೆಯ ಕಥಾ ಪ್ರಸಂಗ'ದಲ್ಲಿ ರಂಗವ್ವ ಗಂಡ ಸತ್ತಾಗ ಸಂಸಾರವನ್ನು ನಡೆಸಬೇಕಾಗಿ ಬಂದಿತು. ಹಾಗಾಗಿಯೆ ಆಕೆ ಆಣೆಬಡ್ಡಿ ವ್ಯವಹಾರವನ್ನು ಮಾಡುತ್ತಾಳೆ. ದೇವೀರಿಗೂ ಕೂಡ ತನ್ನ ತಂದೆ-ತಾಯಿ ಸತ್ತಾಗ ತಮ್ಮನನ್ನು ಸಾಕುವ ಅನಿವಾರ್ಯತೆ ಉಂಟಾಗುತ್ತದೆ. ಆದರೆ ಅದಕ್ಕಿದ್ದ ಹಣದ ಕೊರತೆಯಿಂದಾಗಿ ಆಕೆ ಖಡವ, ನಾಗ್ರನ ಬಲೆಗೆ ಬೀಳುತ್ತಾಳೆ. ಹೀಗೆ ಲಂಕೇಶರ ಕಾದಂಬರಿಗಳಲ್ಲಿ ನಡೆಯುವ ಕೆಲವು ಘಟನೆಗಳು ಮುಖ್ಯವಾಗಿ ಆರ್ಥಿಕ ಪರಿಸ್ಥಿತಿಯಿಂದ ಉಂಟಾಗುತ್ತದೆ.

'ಮುಸ್ಸಂಜೆಯ ಕಥಾ ಪ್ರಸಂಗ'ದಲ್ಲಿ ಕಥೆ ಆರಂಭವಾಗುವುದೆ ಅಣಿಬಡ್ಡಿ ರಂಗವ್ವನ ಪ್ರಸ್ತಾಪದಿಂದ. "ಅಣಿಬಡ್ಡಿ ರಂಗವ್ವ ಗಟ್ಟಿಹೆಂಗಸು ಗಂಡ ಸತ್ತಾಗ ಕೇವಲ ಎರಡು ದಿನ ಅತ್ತು ಎಮ್ಮೆ ಆಕಳುಗಳನ್ನು ನೋಡಿಕೊಂಡು ಆಗ ಚಿಕ್ಕವಳಿದ್ದ ಸಾವಂತ್ರಿಯನ್ನು ಮಡಿಲಲ್ಲಿಟ್ಟುಕೊಂಡು ಸಾಕಿ ದೊಡ್ಡವಳು ಮಾಡಿದಳು. ಅವಳಿಗೆ ಅನೇಕ ಕಷ್ಟಗಳು ಬಂದಿವೆ. ಒಮ್ಮೆ ಅವಳ ಮೂರೂ ಎಮ್ಮೆಗಳು ಹುಲಿಬಾಯಿಗೆ ತುತ್ತಾದವು. ಅದೇ ವರ್ಷ ಕೊಂಡು ತಂದಿದ್ದ ಆಕಳು ರೈಲಿಗೆ ಸಿಕ್ಕಿ ಸತ್ತು ಹೋಯಿತು. ಸಾಲ ಸೋಲ ಮಾಡಿ ಕಾಸಿಗೆ ಕಾಸು ಗಂಟಿಕ್ಕಿ ಹೇಗೂ ಜೀವನ ಸಾಗಿಸಿದ್ದಾಯಿತು . . . ."[೧] (ಪುಟ ೧-೨)

ಇಲ್ಲಿ 'ಅಣಿಬಡ್ಡಿ ರಂಗವ್ವ' ಎಂಬ ಶಬ್ದವೆ ರಂಗವ್ವ ಬದುಕನ್ನು ನಡೆಸಲು ಬೇಕಾಗುವ ಆರ್ಥಿಕತೆಯನ್ನು ಸೂಚಿಸುತ್ತದೆ. ಗಂಡ ಸತ್ತ ನಂತರ ತನಗೊದಗಿದ ಆಪತ್ತನ್ನು ಧೈರ್ಯದಿಂದ ಎದುರಿಸಿ, ತನ್ನ ಮತ್ತು ತನ್ನ ಮಗಳ ಬದುಕಿಗೆ ಅಗತ್ಯವಾಗಿ ಬೇಕಾಗುವ ಹಣವನ್ನು ಕೂಡಿಟ್ಟುಕೊಳ್ಳುತ್ತಾಳೆ. ಹೀಗೆ ರಂಗವ್ವನ ಆರ್ಥಿಕ ಸಂಬಂಧಗಳು ವಿಸ್ತರಿಸುವಾಗ ಅದು ಭರ್ಮಣ್ಣನಂತಹ ವ್ಯಕ್ತಿಯ ಅಸೂಯೆಗೆ ಒಳಗಾಗಿ ಘರ್ಷಣೆಗೆ ಕಾರಣವಾಗುತ್ತದೆ. ತನ್ನ ಮನೆಯಲ್ಲಿ ಗಂಡಸರಿಲ್ಲ ಎನ್ನುವ ಒಂದು ಕಾರಣಕ್ಕಾಗಿ ಈಕೆ ಕೂಲಿ ಕೆಲಸಕ್ಕೆ ಹೋಗಲೇಬೇಕಾದ ಅನಿವಾರ್ಯತೆ ಇಲ್ಲ. ಆದರೂ ತಾನು ಕೂತು ತಿನ್ನುವ ಸ್ವಭಾವದವಳಲ್ಲ. ಬೇರೆಯವರ ಹೊಲಗದ್ದೆಯಲ್ಲಿ ತಾನು-ತನ್ನ ಮಗಳಿಬ್ಬರೂ ದುಡಿಯುತ್ತಾರೆ. ದತ್ತಣ್ಣನಂತಹ ವಿದ್ಯಾವಂತ ಜನಪದ ಹಾಡುಗಳನ್ನು ಸಂಗ್ರಹಿಸುವ ತನಗೆ ಗೊತ್ತಿದ್ದ ಕೆಲವು ಹಾಡುಗಳನ್ನು ಹೇಳಿ ಹಣವನ್ನು ತೆಗೆದುಕೊಳ್ಳುತ್ತಾಳೆ. ಆದರೆ ನಗರ ಪ್ರದೇಶದಲ್ಲಿ ಆವರಿಸಿದ್ದ ವರದಕ್ಷಿಣೆ ಎಂಬ ಧನಪಿಶಾಚಿ ದತ್ತಣ್ಣನ ಮೂಲಕ ಶಿವಿಯನ್ನು ಬಲಿ ತೆಗೆದುಕೊಂಡಾಗ ಆತನನ್ನು ತಿರಸ್ಕರಿಸುತ್ತಾಳೆ. ರಂಗವ್ವ ಮತ್ತು ಸಾವಂತ್ರಿಯವರ ಸ್ವಾಭಿಮಾನದ ಬದುಕು ಒಂದು ಸ್ಥಿರ ವ್ಯವಸ್ಥೆಯ ವಿರುದ್ಧ ನಡೆಯುವ ಸ್ಥೈರ್ಯ ಕೂಡ ಎದುರಾಳಿಗಳಲ್ಲಿ ರೊಚ್ಚನ್ನೆಬ್ಬಿಸಿರುವುದನ್ನು ಕಾಣಬಹುದು. ಬಡ್ಡಿ ವ್ಯವಹಾರ ನಡೆಸುತ್ತಿರುವ ರಂಗವ್ವನಿಂದ ಸಾಲ ಪಡೆದವರಲ್ಲಿ ಮುಖ್ಯರಾದವರೆಲ್ಲ ಅವಳ ಹಣ ಓಂತಿರುಗಿಸುವ ಯೋಚನೆಯಲ್ಲಿ ಇಲ್ಲ. ಅವರೆಲ್ಲಾ ಅದನ್ನು ಮರುಪಾವತಿ ಮಾಡದ ಹಿನ್ನೆಲೆಯಲ್ಲಿ

ಅವರದೆ ಆದ ಉದ್ದೇಶಗಳಿರುತ್ತವೆ. ಆದರೆ ರಂಗವ್ವ ತನ್ನ ಹಣವನ್ನು ಮರಳಿ ಕೇಳುವಾಗ ಅದರಿಂದ ಜಗಳಗಳು ಆಗುತ್ತವೆ. ರಂಗವ್ವನ ಮೇಲೆ ಕ್ರೋಧ ಉಂಟಾಗುತ್ತದೆ. ಆದರೆ ಬದುಕಲೆ ಬೇಕು ಎನ್ನುವ ಅದಮ್ಯ ಉತ್ಸಾಹವಿಟ್ಟುಕೊಂಡಿರುವ ರಂಗವ್ವ ಆ ಘರ್ಷಣೆಯನ್ನು ಎದುರಿಸಿ ನಿಲ್ಲುವ ಬಗೆಯಿಂದಾಗಿ ವಿಶಿಷ್ಟ ಸ್ತ್ರೀ ಪಾತ್ರವಾಗಿ ಮೂಡಿ ಬರುತ್ತಾಳೆ.

ಸಾವಂತ್ರಿ ಮತ್ತು ಶಿವಿ ಇವರಿಬ್ಬರೂ ಅಕ್ಷರಸ್ಥರು. ಆದರೆ ಸಾವಂತ್ರಿಯೂ ಅಕ್ಷರಸ್ಥಳಾದರೂ ಕೂಡ ಅವಳ ಜೀವನ, ದುಡಿಮೆ ಮತ್ತು ಜನಪದ ಮೂಲದಲ್ಲಿದೆ. ತನ್ನ ಆರ್ಥಿಕತೆಯ ಒಳಗೆ ದುಡಿಮೆಗೆ ಒಗ್ಗಿಕೊಂಡು ಬದುಕುವ ತಂತ್ರಗಳನ್ನು ರೂಪಿಸಿಕೊಳ್ಳುವವಳಾಗಿದ್ದಾಳೆ. ಆದರೆ ಶಿವಿ ತಂದೆ-ತಾಯಿಯ ಪ್ರೀತಿ ವಾತ್ಸಲ್ಯದ ಆಸರೆಯಲ್ಲಿ ಬೆಳೆದು ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯ ಕನಸನ್ನು ಕಂಡು ವರದಕ್ಷಿಣೆಯ ಪಿಡುಗಿನಿಂದಾಗಿ ಮದುವೆಯಾಗದೆ ಕೊನೆಗೆ ಜ್ವರದಿಂದ ನರಳಿ ಸಾವನ್ನಪ್ಪುತ್ತಾಳೆ. ಇಲ್ಲಿ ಆಧುನಿಕತೆ ಸೃಷ್ಟಿಸುತ್ತಿರುವ ವರದಕ್ಷಿಣೆ ಸ್ಥಾನಮಾನವನ್ನು ಕಾಯ್ದುಕೊಳ್ಳುವ ಪ್ರಕ್ರಿಯೆಗಳು ಗ್ರಾಮೀಣ ಮುಗ್ಧರನ್ನು ಬಲಿ ತೆಗೆದುಕೊಳ್ಳುವ ಪರಿಯನ್ನು ಕಾಣಬಹುದು. ಇಲ್ಲಿ ಶಿವಿಯ ಸಾವಿಗೆ ಆಕೆಯ ಕುಟುಂಬ ವ್ಯವಸ್ಥೆಯ ಒಳಗಿರುವ ಆರ್ಥಿಕತೆಯೆ ಕಾರಣವಾಗಿ ಪರಿಣಮಿಸುತ್ತದೆ.

'ಅಕ್ಕ' ಕಾದಂಬರಿಯ ದೇವೀರಿ ಚಿಕ್ಕ ವಯಸ್ಸಿನಲ್ಲಿಯೆ ತಂದೆ-ತಾಯಿಯನ್ನು ಕಳೆದುಕೊಂಡು ಕ್ಯಾತನಂತಹ ಪುಟ್ಟ ಬಾಲಕನ ಹೊಣೆಯನ್ನು ಹೊತ್ತು ಕೊಳಗೇರಿಯಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಅವಳ ಆರ್ಥಿಕತೆ ಆಕೆ ಆಯ್ಕೆ ಮಾಡಿಕೊಂಡ ದಾರಿಗೆ ಪ್ರೇರಕವಾಗುತ್ತದೆ. ಕ್ಯಾತ ತನ್ನ ತಂದೆ-ತಾಯಿಯನ್ನು ಕಳೆದುಕೊಂಡು ಅಕ್ಕ ದೇವೀರಿಯ ಆಶ್ರಯದಲ್ಲಿ ಬೆಳೆಯಲು ಪ್ರಾರಂಭಿಸಿದ. ಆರಂಭದಲ್ಲಿ ದೇವೀರಿ ದುಡಿಸಿಕೊಳ್ಳುವ ವರ್ಗದವರಿಂದ ತಾನು ದುಡಿದಿದ್ದಕ್ಕೆ ಪ್ರತಿಫಲವನ್ನು ಕಸಿದುಕೊಳ್ಳುವ ರೀತಿಯನ್ನು ಮತ್ತು ತನ್ನ ಅಕ್ಕನ ಶ್ರಮಜೀವನವನ್ನು ಹೀಗೆ ನಿರೂಪಿಸುತ್ತಾನೆ.

"ನೋಡಿ ಅವ್ವ ಸತ್ಲು, ಎಂಟೋ ಹತ್ತೋ ವರ್ಷದ ಈ ಕ್ಯಾತನನ್ನು, ಮಗನ್ನ ಬಿಟ್ಟು ಸತ್ತು ಹೋದ್ಲು ಕೈಯಾಗೆ ಕಾಸಿರ್ಲಿಲ್ಲ. ದಿನಾಲು ದೇವೀರಿ ಇಟ್ಟಿಗೆ ಹೊತ್ತು ಸಿಮೆಂಟ್ ಹೊತ್ತು ನರಸಿಂಹ ಮೇಸ್ತ್ರಿ ಹತ್ರ ನಾಲ್ಕು ಕಾಸು ಕಿತ್ಕೊಂಡು ಬಂದು ತಾನು ಮಂಡಕ್ಕಿ ತಿಂದು ನಂಗೆ ರೊಟ್ಟಿ ತಟ್ಟಿ ಹಾಕ್ತಿರ್ಲಿಲ್ಲಾ"[೨] [ಪು.ಸಂ.೨೧-೨೨].

ಇಲ್ಲಿ ಬಂಡವಾಳಶಾಹಿ ವರ್ಗದವರು ದುಡಿಯುವ ವರ್ಗವನ್ನು ಶೋಷಣೆಗೆ ಒಳಗೂಮಾಡುವ ರೀತಿಯನ್ನು ಕಾಣಬಹುದು. "ಮಹಿಳೆ ಶ್ರಮ ಪಟ್ಟು ಕೆಲಸ ಮಾಡಿದರೂ ಆ ಕೆಲಸವು ಬಹಳಷ್ಟು ಬಾರಿ ದೇಶದ ಒಟ್ಟು ಉತ್ಪನ್ನದಲ್ಲಿ ಗಣಿಸಲ್ಪಡುವುದಿಲ್ಲ. ಇದಕ್ಕೆ ಕಾರಣ ಆಕೆಯು ಸ್ತ್ರೀ ಪುರುಷರ ನಡುವಿನ ಶ್ರೇಣೀಕೃತ ಶ್ರಮ ವಿಭಜನೆಯಲ್ಲಿ ಸಿಲುಕಿರುವುದು. ಇದರ ಫಲವಾಗಿ ಪುರುಷರಿಗೆ ತಮ್ಮ ಸ್ತ್ರೀಯರ ದುಡಿಮೆಯ ಮೇಲೆ ಅದರ ಆರ್ಥಿಕ ಪ್ರತಿಫಲದ ಮೇಲೆ ನಿಯಂತ್ರಣ ದೊರೆತಿದೆ. ಈ ಮಾತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವರ್ಗಶೋಷಣೆಗೊಳಗಾಗುತ್ತಿರುವ ಪುರುಷ ಕಾರ್ಮಿಕರ ಹೆಂಡಂದಿರ ಸಂದರ್ಭದಲ್ಲೂ ಸುಳ್ಳೇನಲ್ಲ".[೩] [ಪು.ಸಂ. ೨೮] ಎಂಬ ಕಿಶೋರಿ ನಾಯಕ್ ಕೆ. ಅವರು ಮಾತುಗಳನ್ನು ಇಲ್ಲಿ ಗಮನಿಸಬಹುದು.

ನಗರ ವ್ಯವಸ್ಥೆಯ ಕುತಂತ್ರವನ್ನು ಅರಿಯದ ದೇವೀರಿ ತನ್ನ ತಮ್ಮನನ್ನು ಸತ್ಯನಾರಾಯಣ ಸ್ಕೂಲಿನಲ್ಲಿ ಓದಲಿ ಎಂದು ಆಸೆಪಟ್ಟು ಕ್ಯಾತನನ್ನು ಸೇರಿಸಿಕೊಳ್ಳಲು ಹೇಳಿದಾಗ "ಫೀಸು ಇಷ್ಟಾಗುತ್ತೆ, ಅಂಗಿ ಚೆಡ್ಡಿಗೆ ಇಷ್ಟಾಗುತ್ತೆ, ಸ್ಕೂಲಿಗೆ ದಾಗ ಇಷ್ಟಾಗುತ್ತೆ. ಬಂದ್ಬಿಟ್ಲು ಬಜಾರಿ ಹೋಗೆ, ಇಲ್ಲಿಂದ" ಅಂತ ಕೂಗಿ ಬಿಡುವ ಸತ್ಯನಾರಾಯಣನ ಮಾತಿನಲ್ಲಿ ಖಾಸಗಿ ಶಾಲೆಗಳು ಹಣಕ್ಕೆ ನೀಡುವ ಬೆಲೆ, ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಉಂಟಾಗುವ ಸರ್ಕಾರಿ ಖಾಸಗಿ ಭೇದಭಾವ, ದುಷ್ಟವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ನಗರ ಜೀವನದ ಶೋಕಿ ಬದುಕನ್ನು ಕಂಡು ತಾವು ಶ್ರೀಮಂತರಂತೆ ಬದುಕದಿದ್ದರೂ ಜೀವನಕ್ಕೆ ಮೂಲಭೂತವಾಗಿ ಬೇಕಾಗುವ ಅನ್ನ, ಸೂರನ್ನು ಬಯಸುವ ಹಂಬಲ, ತನ್ನ ತಮ್ಮನು ಖಾಸಗೀ ಶಾಲೆಗೆ ಸೇರಿ ಆತನೂ ಸಹ ಇಂಗ್ಲೀಷ್ ಕಲಿತು ಮುಂದೊಂದು ದಿನ ಉತ್ತಮ ಪ್ರಜೆಯಾಗಿ ಬೆಳೆಯಲಿ ಎಂಬ ತೀವ್ರ ಆಕಾಂಕ್ಷೆಯನ್ನು

ಇಟ್ಟುಕೊಂಡು ಖಡವ, ನಾಗ್ರ ಒಡ್ಡುವ ಬಲೆಗೆ ಬೀಳುವ ದೇವೀರಿಯಂತಹವರನ್ನು ಕಾಣಬಹುದು. ಇದೇ ಕಾದಂಬರಿಯಲ್ಲಿ ಬರುವ ಪದ್ದಿ ಆಧುನಿಕ ಜಗತ್ತಿನ ಇನ್ನೊಂದು ಮಾಯಾ ಪ್ರಪಂಚದ ಸಿನಿಮಾ ಜಗತ್ತಿನ ಮೋಡಿಗೆ ಸಿಕ್ಕು ಖ್ಯಾತಿಗಾಗಿ ಹಣಕ್ಕಾಗಿ ಪುರುಷರ ಆಮಿಷಗಳಿಗೆ ಬಲಿಯಾಗುವ ಅಮಾಯಕ ಸ್ತ್ರೀಯರ ಪ್ರತಿನಿಧಿಯಾಗಿದ್ದಾಳೆ.

'ಬಿರುಕು' ಮೊದಲೆರಡು ಕಾದಂಬರಿಗಳಿಗಿಂತ ಭಿನ್ನವಾಗಿರುವ ಕಾದಂಬರಿ. ಇಲ್ಲಿ ಬರುವ ಸ್ತ್ರೀಯರಾದ ಶಾಂತ, ಸುವರ್ಣ, ಇಂದಿರಾ, ಇವರು ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದ ಸ್ತ್ರೀಯರಲ್ಲ ಆಧುನಿಕತೆಗೆ ತೆರೆದುಕೊಂಡ ಆರ್ಥಿಕವಾಗಿ ಮೇಲ್‌ಸ್ತರದಲ್ಲಿರುವವರು. "ಆ ಬಗ್ಗೆ ಏನೂ ಯೋಚನೆ ಮಾಡಬೇಡಿ ನಮ್ಮ ಗುಮಾಸ್ತನಿಗೆ ನಾವು ನೂರೈವತ್ತು ಕೊಡ್ತೇವೆ. ವಿಶ್ವಾಸ ಮುಖ್ಯ..."[೪] [ಪು.ಸಂ.೨೧]

ಎಂದು ಬಸವರಾಜನಿಗೆ ಹೇಳುವ ಸುವರ್ಣಳ ಮಾತಿನಲ್ಲಿ ಬದುಕಿಗಾಗಿ ಬೇಕಾಗುವ ಸಂಪತ್ತು ಹೇರಳವಾಗಿದ್ದು ಬದುಕಿನ ತುಡಿತದ ಅಂಶಗಳು ವ್ಯಕ್ತವಾಗುವುದಿಲ್ಲ. ಒಟ್ಟಿನಲ್ಲಿ ಲಂಕೇಶ್ ಕಾದಂಬರಿಗಳ ಆರ್ಥಿಕ ಪರಿಸರವು ಸ್ತ್ರೀ ಜೀವನದ ಮೇಲೆ ಬೀರಿರುವ ಪರಿಣಾಮ ಅಗಾಧವಾಗಿದೆ.

ಲಂಕೇಶ್ ಕಾದಂಬರಿಯಲ್ಲಿ ಕಂಡು ಬರುವ ಸ್ತ್ರೀಯರ ಕೌಟುಂಬಿಕ ಪರಿಸರ : –

ಅನಾದಿ ಕಾಲದಿಂದಲೂ ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಪಿತೃಪ್ರಧಾನ ಕುಟುಂಬ ಮತ್ತು ಮಾತೃಪ್ರಧಾನ ಕುಟುಂಬಗಳನ್ನು ಕಾಣಬಹುದು. ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಪುರುಷ ಪ್ರಾಧಾನ್ಯವಾದುದು. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ ಪ್ರಮುಖಳಾದರೂ ಪುರುಷನ ಕೈಗೊಂಬೆಯಾಗಿಯೆ ಬದುಕನ್ನು ಕಂಡುಕೊಳ್ಳುತ್ತಾಳೆ. ಆದರೆ ಲಂಕೇಶರ ಕಾದಂಬರಿಯಲ್ಲಿ ಬರುವ ಸ್ತ್ರೀಯರ ಕುಟುಂಬ ಭಿನ್ನ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳವಂತದ್ದು.

ಲಂಕೇಶರ ಕಾದಂಬರಿಯ ಒಳಗೆ ಎರಡು ರೀತಿಯ ಕೌಟುಂಬಿಕ ವಲಯದ ಸ್ತ್ರೀಯರನ್ನು ಕಾಣಬಹುದು. ಒಂದು, ತಂದೆ ಗಂಡ ಮುಂತಾದ ಸ್ತ್ರೀ ಜೀವನಕ್ಕೆ ಅನಿವಾರ್ಯ ಎಂದುಕೊಂಡಿರುವ ಪುರುಷರಿಲ್ಲದ ಕೌಟುಂಬಿಕ ವಲಯ, ಇನ್ನೊಂದು ಗಂಡ–ತಂದೆ ಇರುವ ಕುಟುಂಬದೊಳಗೆ ದಿಟ್ಟವಾಗಿ ಬದುಕುವ ಕನಸನ್ನು ಕಾಣುವ ವಲಯ.

'ಮುಸ್ಸಂಜೆಯ ಕಥಾ ಪ್ರಸಂಗ' ದ ರಂಗವ್ವ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿಯೆ ತನ್ನ ಸಂಸಾರವನ್ನು ನಡೆಸುತ್ತಿದ್ದವಳು ಆದರೆ ಅಕಸ್ಮಾತ್ತಾಗಿ ಗಂಡ ಸತ್ತಾಗ ಸಣ್ಣವಳಾಗಿದ್ದ ಸಾವಂತ್ರಿಯ ಹೊಣೆಹೊತ್ತು ಯಾರ ಆಶ್ರಯವು ಇಲ್ಲದ ತುಂಬು ಹರೆಯದ ಸಾವಂತ್ರಿ ಮತ್ತು ರಂಗವ್ವನ ಮೇಲೆ ಕಾಮಮಿಶ್ರಿತ ಆಸೆ ಇಟ್ಟುಕೊಂಡು ಭರ್ಮಣ್ಣ, ಸಣ್ಣೀರಪ್ಪ ಮೊದಲಾದ ಪುರುಷರು ಅವರ ಆರ್ಥಿಕ ಸಾಮಾಜಿಕ ಅವನತಿಯನ್ನು ಬಯಸುತ್ತಿದ್ದರು. ಇಂತಹ ಸಮಾಜ ವ್ಯವಸ್ಥೆಯಲ್ಲಿ ಬದುಕನ್ನು ನಡೆಸಬೇಕಾದ ರಂಗವ್ವ ಕೆಲವೊಮ್ಮೆ ತನ್ನ ಗಂಡನಿದ್ದಿದ್ದರೆ ಎಂದು ಗಂಡನ ಆಶ್ರಯವನ್ನು ಬಯಸುತ್ತಾಳೆ. ಮಗಳ ಬಗ್ಗೆ ಅಗಾಧವಾದ ಪ್ರೀತಿಯನ್ನು ಇಟ್ಟುಕೊಂಡಿದ್ದ ರಂಗವ್ವ, ಸಾವಂತ್ರಿ ಮಂಜನ ಪ್ರೇಮದ ಬಲೆಗೆ ಸಿಕ್ಕು ಪಿಕ್ಚರ್‌ಗೆ ಹೋದ ಸಂಜೆ ರಂಗವ್ವ ತನ್ನ ಮಗಳಿಗಾಗಿ ಕಾಯುವುದು ನಂತರ ಆಕೆ ಬಂದಾಗ ತಾನು ಹೊಡೆಯಲು ಇಟ್ಟುಕೊಂಡಿದ್ದ ಕುಡುಗೋಲು ತೆಗೆದು ಮೂಲೆಗೆ ಎಸೆದು ಹೀಗೆ ಯೋಚಿಸುತ್ತಾಳೆ "ತನ್ನ ಗಂಡ ಇದ್ದಿದ್ದರೆ ! ಆತ ಸಾವಂತ್ರಿಗೆ ಬಯ್ಯುತ್ತಿದ್ದ ನಾಲ್ಕು ತಪಾರಕಿ ಕೊಡುತ್ತಿದ್ದನೊ ಏನೋ ಈ ವಿಚಾರದಲ್ಲಿ ತೀರಾ ಕ್ರೂರಿ ಆತ ! ಆದರೆ ತಾನು ಬಿಡಿಸಿಕೊಳ್ಳಲು ಹೋಗುತ್ತಿದ್ದೆ. ಬಿಡಿಸಿಕೊಳ್ಳಲು ಹೋದಷ್ಟು ಜೋರಾಗಿ ಹೋರಾಡುತ್ತ ಮಗಳಿಗೆ ಹೊಡೆಯಲು ಯತ್ನಿಸುತ್ತಿದ್ದ ಆಗ ತಾನು ಅವನ ಹೆಂಗಸು 'ಶಾಂತಿಯ ಹೆಸರು ಹೇಳಿ ಮೀಸೆಗೆ ಕೈ ಹಾಕಿ ಬಗ್ಗಿಸುತ್ತಿದ್ದೆ" [೫] (ಪು.ಸಂ.೧೩)

ಇಲ್ಲಿ ಮಗಳ ವಿವಾಹದ ಬಗ್ಗೆ ಕನಸನ್ನು ಕಾಣುತ್ತಿದ್ದ ರಂಗವ್ವ ಮಗಳು ತಪ್ಪುದಾರಿ ಹಿಡಿದಾಗ ಆ ಸಮಯದಲ್ಲಿ ತನ್ನ ಗಂಡ ಇದ್ದಿದ್ದರೆ ಎಂದು ಯೋಚಿಸುತ್ತಾ ತನ್ನ ಗಂಡನ ಸಿಟ್ಟು ವ್ಯಭಿಚಾರಗಳನ್ನು ಬಯಲಿಗೆಳೆಯುತ್ತಾಳೆ. ಗಂಡ ಸಿಟ್ಟಿನಿಂದ ಸಾವಂತ್ರಿಗೆ ಹೊಡೆದಾಗ ತಾನು ಅವಳನ್ನು ಬಿಡಿಸುತ್ತಿದ್ದೆ ಎಂಬಲ್ಲಿ ಸ್ತ್ರೀ ಸಹಜವಾದ ಮಾತೃವಾತ್ಸಲ್ಯ ಪುಟಿದು ನಿಲ್ಲುತ್ತದೆ. ಹಾಗೆಯೆ ಗಂಡನ ವ್ಯಭಿಚಾರದ ಬಗ್ಗೆ ಅರಿವಿದ್ದರೂ ಸುಮ್ಮನಿರುವ ರಂಗವ್ವ ಸಾವಂತ್ರಿಗೆ ಗಂಡ ಹೊಡೆಯುವಾಗ ಆತನ ಹೆಂಗಸು ಶಾಂತಿಯ ಹೆಸರು ಹೇಳಿ ಮೀಸೆಗೆ ಕೈಹಾಕಿ ಬಗ್ಗಿಸುತ್ತಿದ್ದೆ ಎಂಬಲ್ಲಿ ಗಂಡ ತನ್ನ ಜೀವನಕ್ಕೆ ಬೇಕಾದವನು ಎಂದಾಗಲೂ ಆತನಿಗೆ ಅಡಿಯಾಳಾಗದೆ ಆತ ತಪ್ಪಿ

ನಡೆದಾಗ ಅದನ್ನು ಪ್ರತಿಭಟಿಸುವ ಮೂಲಕ ಗಂಡನ ಅಧೀನದಿಂದ ದೂರ ಸರಿದು ಸಹಜ ಬದುಕಿಗೆ ಹೋಗುತ್ತಿರುವ ರಂಗವ್ವನನ್ನು ಕಾಣಬಹುದು.

ತನ್ನ ಮತ್ತು ತನ್ನ ಮಗಳ ಜೀವನಕ್ಕೆ ಗಂಡೊಂದರ ಅಗತ್ಯವಿದೆ ಎಂದು ಭಾವಿಸುವ ರಂಗವ್ವ ತಮ್ಮನಾದ ಶಿವನಂಜನನ್ನು ಸಾವಂತ್ರಿಗೆ ಮದುವೆ ಮಾಡಿಸುವುದರ ಮೂಲಕ ತನ್ನ ಕುಟುಂಬಕ್ಕೆ ಭದ್ರತೆಯನ್ನು ತರುವ ಬಗ್ಗೆ ಯೋಚಿಸುತ್ತಾಳೆ. ಆದರೆ ಸಾವಂತ್ರಿಯು ಮಂಜನನ್ನು ಪ್ರೇಮಿಸುವ ನಿಜ ಸಂಗತಿ ತಿಳಿದು ರಂಗವ್ವನ ಮೇಲೆ ಎಗರಿಬಿದ್ದ. ಚಿಕ್ಕಂದಿನಿಂದಲೂ ಸಾವಂತ್ರಿಯನ್ನು ಮದುವೆಯಾಗಬೇಕೆಂದು ಕನಸು ಕಂಡಿದ್ದ ಶಿವನಂಜ ಸಾವಿಂತ್ರಿ ದಾರಿ ತಪ್ಪಲು ರಂಗವ್ವನೆ ಕಾರಣ ಎಂದು ಅವಳ ಜಿಪುಣತನ, ವ್ಯಭಿಚಾರ ದ ಬಗ್ಗೆ ತನಗೆ ಗೊತ್ತಿದೆ ಎಂದು ಬೈದ. ಆಗ ಗಂಡ ತಂದೆ ಮುಂತಾದ ಗಂಡಸರ ದಿಕ್ಕಿಲ್ಲದೆಯೆ ಶಿವನಂಜನೆ ದಿಕ್ಕು ಎಂದು ತಿಳಿದಿದ್ದ ರಂಗವ್ವ, ಅವನ ಬೈಗುಳದ ಮಾತುಗಳನ್ನು ಕೇಳಿ ಕೊನೆಗೆ "ಹೋಗೊ ಗಿರಾಸ್ತ ಅದೇನು ಕಡೀತೀಯೋ ಕಡಿ ಹೋಗು, ತೋಪಿನ ತಾವ ಹೋಗಿದಾಳೆ ಹೋಗು"[೬] [ಪು.ಸಂ.೩೪೩] ಎಂಬ ಮಾತುಗಳು ಯಾವುದಕ್ಕೂ ಅಂಟಿಕೊಳ್ಳದ ದಿಟ್ಟತನದ ಮೂಲಕ ಬದುಕನ್ನು ಎದುರಿಸುವ ಪರಿಯನ್ನು ರಂಗವ್ವನಲ್ಲಿ ಕಾಣಬಹುದು. ಹೀಗೆ ಯಾರ ಸಹಾಯವೂ ಇಲ್ಲದೆ ತನ್ನ ಮತ್ತು ಮಗಳ ಜೀವನವನ್ನು ನಡೆಸುವ ಧೈರ್ಯ, ಸ್ಥೈರ್ಯಗಳು ರಂಗವ್ವ ಬದುಕುತ್ತಿರುವ ಕೌಟುಂಬಿಕ ಪರಿಸರದಿಂದಲೆ ಬಂದಿರುವಂತದ್ದು.

'ಮುಸ್ಸಂಜೆಯ ಕಥಾ ಪ್ರಸಂಗ'ದ ರಾಮಿ ರುದ್ರಿ ಈ ಎರಡು ಪಾತ್ರಗಳು ಪರಸ್ಪರ ವೈರುಧ್ಯದಿಂದ ಕೂಡಿದೆ. ರುದ್ರಿ ಆದರ್ಶಪ್ರಾಯದ ಹೆಣ್ಣು. ಈಕೆ ಬದುಕಿನಲ್ಲಿ ನೋವು ಹತಾಶೆಯನ್ನು ಅನುಭವಿಸಿದ್ದಾಳೆ. ತಾನು ಕೂಡಿಟ್ಟ ಹಣವು ಕೂಡ ಗಂಡನಾದ ಭರ್ಮಣ್ಣನ ಪಾಲಾಗುತ್ತದೆ. ಆದರೆ ರಾಮಿಯ ವ್ಯಕ್ತಿತ್ವ ಹಟದಿಂದ ಕೂಡಿದೆ. ಈ ಇಬ್ಬರೂ ಕೂಡ ಭರ್ಮಣ್ಣನ ಹೆಂಡತಿಯರಾಗಿ ಸಂಸಾರ ನಡೆಸಬೇಕಾದವರು 'ರಾಮಿ' ಬದುಕಿನ ಬಗ್ಗೆ ತನ್ನ ಗಂಡ, ತನ್ನ ವೈವಾಹಿಕ ಬದುಕಿನ ಬಗ್ಗೆ ಆಸೆ ಬಯಕೆಯನ್ನು ಇಟ್ಟುಕೊಂಡಿದ್ದಳು. ಆದರೆ ಮುದುಕನೂ ಮತ್ತು ದೈಹಿಕವಾಗಿ ಅಸಮರ್ಥನಾಗಿರುವ ಭರ್ಮಣ್ಣನ ಮಡದಿಯಾಗಿ ಹೋಗಬೇಕಾದ ಸಂದರ್ಭದಲ್ಲಿ

ಸಹಜವಾಗಿಯೇ ಗಂಡನ ಬಗ್ಗೆ ಅಸಹ್ಯ ಹುಟ್ಟುತ್ತದೆ. ಹಾಗಾಗಿ ತನ್ನ ಹಠತನದ ವ್ಯಕ್ತಿತ್ವದ ಮೂಲಕವೆ ಒಲ್ಲದ ಗಂಡನೊಂದಿಗೆ ಬದುಕು ಸಾಗಿಸುತ್ತಾಳೆ. ಆ ಸಂದರ್ಭದಲ್ಲಿ ಬಂದ ಶಿವಾಜಿ ತನಗೆ ಸರಿಸಮಾನನಾದವನು ಎಂದು ತಿಳಿದು ಆತನೊಂದಿಗೆ ಓಡಿ ಹೋಗುತ್ತಾಳೆ. ಇಂತಹ ರಾಮಿ ಕೊನೆಗೆ ತಂದೆ ಮನೆಗೆ ಸೇರಿ ಗಂಡ ಬಿಟ್ಟ ಹೆಣ್ಣಿಗೆ ಈ ಸಮಾಜದಲ್ಲಿ ಯಾವುದೆ ಗೌರವ ಸ್ಥಾನಮಾನಗಳು ಇಲ್ಲವೆಂದು ತಿಳಿದು ತಂದೆಯ ಮಾತಿನ ಪ್ರಕಾರ ಭರ್ಮಣ್ಣನಲ್ಲಿಗೆ ಬಂದು ಗಂಡನ ಸೇವೆ ಪೂಜೆ ಪುನಸ್ಕಾರಗಳನ್ನು ಮಾಡುವ ಪರಿಯನ್ನು ಗಮನಿಸಿದಾಗ, ರಾಮಿಯ ಬದಲಾದ ವ್ಯಕ್ತಿತ್ವದ ಹಿಂದೆ ಪುರುಷ ವ್ಯವಸ್ಥೆಯಿಂದ ನಿರ್ಮಿತವಾದ ಕುಟುಂಬ ಕಾರ್ಯ ನಿರ್ವಹಿಸಿರುವುದನ್ನು ಕಾಣಬಹುದು. ಆದರೆ ರುದ್ರಿ ಸಾಂಪ್ರದಾಯಿಕ ಕಟ್ಟು ಕಟ್ಟಳೆಗೆ ಒಳಗಾಗಿದ್ದು ಗಂಡನಿಗೆ ತಕ್ಕ ಹೆಂಡತಿಯಾಗಿ ಯಾವ ಆಸೆ, ಆಕಾಂಕ್ಷೆಯು ಇರದ ಹೆಣ್ಣಾಗಿ ಪತಿವ್ರತೆಯ ರೀತಿಯಲ್ಲಿ ಸಂಸಾರ ಸಾಗಿಸುತ್ತಿದ್ದಳು. ರಾಮಿ-ರುದ್ರಿಯ ಗಂಡನಾಗಿರುವ ಭರ್ಮಣ್ಣನಿಗೆ ತನ್ನ ಅಸಮರ್ಥತೆಯ ಬಗ್ಗೆ ತಿಳಿದಿತ್ತು. ಜೊತೆಗೆ ಸಾಮಾಜಿಕವಾಗಿ ತಾನು ಯೋಗ್ಯನೆನಿಸಬೇಕಾದರೆ ರಾಮಿಯ ನೈತಿಕತೆಯನ್ನು ಹಿಡಿತದಲ್ಲಿಟುಕೊಳ್ಳಬೇಕು ಎಂಬ ಯೋಚನೆ ಇತ್ತು. ಹಾಗಾಗಿ ರಾಮಿ ಶಿವಾಜಿಯೊಂದಿಗೆ ಓಡಿ ಹೋಗಿ ಹಿಂದೆ ಬಂದಾಗಲೂ ಯಾವುದೆ ತಕರಾರು ಇಲ್ಲದೆ ಒಪ್ಪಿಕೊಂಡಿದ್ದ. ಇಲ್ಲಿ ಭರ್ಮಣ್ಣ ತನ್ನ ಅಸಾಮರ್ಥ್ಯವನ್ನು ತೋರಿಸಿಕೊಳ್ಳದೆ ಕುಟುಂಬದ ಗೌರವವನ್ನು ಕಾಯ್ದುಕೊಳ್ಳುವ ನೆಲೆಯಲ್ಲಿ ರಾಮಿಯ ಬಗ್ಗೆ ಆತ ತಾಳುವ 'ಮೌನ'ವನ್ನು ಅರ್ಥೈಸಿಕೊಳ್ಳಬಹುದು.

ಸಾವಂತ್ರಿ ಮತ್ತು ಶಿವಿಯನ್ನು ಒಟ್ಟೊಟ್ಟಿಗೆ ತರುವ ಮೂಲಕ ವಿಭಿನ್ನ ಕುಟುಂಬದ ಒಳಗೆ ಬೆಳೆದು ಬಂದ ಸ್ತ್ರೀಯರನ್ನು ಅನಾವರಣ ಮಾಡುತ್ತಾರೆ. ವ್ಯಕ್ತಿಯ ವೈಯಕ್ತಿಕ ಬದುಕು, ಭಾವನೆ, ಧೈರ್ಯಗಳಿಗೆ ಆ ವ್ಯಕ್ತಿಗಳು ಬೆಳೆದು ಬರುವ ಕುಟುಂಬ ಸಮಾಜಗಳು ಬಹು ಮುಖ್ಯವಾದ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ಸಾವಂತ್ರಿ ಮತ್ತು ಶಿವಿಯ ಮೂಲಕ ವ್ಯಕ್ತಪಡಿಸುತ್ತಾರೆ. ಶಿವಿ ಶಿಕ್ಷಣಕ್ಕೆ ತೆರೆದುಕೊಂಡಿದ್ದು ಶಿಕ್ಷಣ ಮತ್ತು ಆಕೆಯ ಕುಟುಂಬದ ವ್ಯವಸ್ಥೆ ಆಕೆಯನ್ನು ಒಂಟಿಯಾಗಿ ಪರಾವಲಂಬಿಯಾಗಿ ಸಾಂಪ್ರದಾಯಿಕ ವ್ಯವಸ್ಥೆಗೆ ಒಗ್ಗುವಂತೆ ಮಾಡುತ್ತದೆ. ಆಕೆಯ ತಂದೆ ಸಂದ್ಯಪ್ಪ ಮತ್ತು ತಾಯಿಯ ಮಾತಿಗೆ ಬೆಲೆಕೊಡುವ ಅವರ ಮಾತನ್ನು ಯಾವುದೆ

ಕಾರಣಕ್ಕೂ ಮೀರದ ಶಿವಿ ಜ್ವರವನ್ನು ಲೆಕ್ಕಿಸದೆ ದತ್ತಣ್ಣನ ಮನೆಗೆ ಹೋಗಿ ದತ್ತಣ್ಣನ ತಂದೆಯ ವರದಕ್ಷಿಣೆಯ ಆಸೆಗೆ ಬಲಿಯಾಗಿ ಸಾವನ್ನಪ್ಪುತ್ತಾಳೆ. ಆಕೆಯ ಸಾವಿಗೆ ಆಕೆ ಬೆಳೆದು ಬಂದ ಕುಟುಂಬ ವ್ಯವಸ್ಥೆಯೆ ಕಾರಣವಾಗಿದೆ. ಆದರೆ ಸಾವಂತ್ರಿ ಶಿವಿಗಿಂತ ಭಿನ್ನವಾಗಿ ಬೆಳೆದವಳು. ತಂದೆಯ ಆಶ್ರಯವಿಲ್ಲದೆ ತಾಯಿ ರಂಗವ್ವನ ಜಿಗುಟುತನ ಧೈರ್ಯಗಳನ್ನು ಕಂಡು ಅಂತಹದ್ದೆ ಗುಣಗಳನ್ನು ಬೆಳೆಸಿಕೊಂಡು ಬಂದವಳು. ಯೌವನದಲ್ಲಿ ಯಾರ ಕಟ್ಟುಪಾಡುಗಳಿಗೂ ಹೆದರದೆ ಮಂಜನೊಂದಿಗೆ ಪ್ರೇಮ ಸಂಬಂಧವನ್ನು ಇಟ್ಟುಕೊಂಡು, ಇಕ್ಬಾಲನೊಂದಿಗೆ ಪವಿತ್ರ ಸ್ನೇಹವನ್ನು ಹಂಚಿಕೊಂಡವಳು. ಸದಾ ನಗುನಗುತ್ತಾ ಬದುಕನ್ನು ಕಟ್ಟಿಕೊಳ್ಳುವ ಸಾವಂತ್ರಿ ಶಿವಿಯ ಸಾವಿಗೆ ಕಾರಣರಾದವರ ವಿರುದ್ಧ ಸಿಡಿದೇಳುತ್ತಾಳೆ.

"ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಾಗಿ ಲವಲವಿಕೆ ಸ್ವಾತಂತ್ರ್ಯ ಮತ್ತು ಅರ್ಥಪೂರ್ಣ ಬದುಕಿನ ಸಾಧ್ಯತೆಯೂ ಅಕ್ಷರ ಸಂಸ್ಕೃತಿ ಮತ್ತು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯೊಳಗೆ ಏಕತಾನತೆ. ನಿಷ್ಕ್ರಿಯತೆ ಹಾಗೂ ಇನ್ನೊಬ್ಬರ ನೋವಿಗೆ ಮಿಡಿಯಲಾರದ ನಿರ್ದಯತೆಯ ಕ್ರೌರ್ಯಗಳು ಪ್ರಕಟವಾಗಿವೆ."[೭] [ಪು.ಸಂ.೧೦೭]

ಎಂಬುದಾಗಿ ಶಿವಿ ಮತ್ತು ಸಾವಂತ್ರಿಯ ವ್ಯಕ್ತಿತ್ವದ ಬಗ್ಗೆ ವಿವೇಚಿಸುತ್ತಾ ಡಾ॥ ಸಬಿಹಾ ಭೂಮಿಗೌಡರವರು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಮತ್ತು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ವ್ಯಕ್ತಿಗಳ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗುವ ಬಗೆಯನ್ನು ತಿಳಿಸುತ್ತದೆ.

'ಅಕ್ಕ' ಕಾದಂಬರಿಯ ದೇವೀರಿ ಕೂಡ ತಂದೆ-ತಾಯಿಯ ಆಶ್ರಯದಲ್ಲಿ ಬೆಳೆದ ಸ್ತ್ರೀ ಆದರೆ ತನ್ನ ತಂದೆ-ತಾಯಿಯನ್ನು ಕಳೆದುಕೊಂಡು ಕ್ಯಾತನಂತಹ ಪುಟ್ಟ ಬಾಲಕನ ಹೊಣೆ ಹೊತ್ತು ಯಾರ ಸಹಾಯವೂ ಇಲ್ಲದೆ ಜೀವನ ನಿರ್ವಹಿಸಬೇಕಾದ ಪ್ರಸಂಗ ಎದುರಾದಾಗ ಆಕೆ ಇನ್ನು ಯೌವನಸ್ಥಳು. ತಂದೆ ತಾಯಿ ಇರುವಾಗ ಯಾರಾದರೂ ಆಕೆಯ ಬಗ್ಗೆ ಪೋಲಿ ಮಾತನಾಡಿದರೆ ತಿರುಗಿ ಬೀಳುತ್ತಿದ್ದಳು. ತಂದೆ-ತಾಯಿಯನ್ನು ಕಳೆದುಕೊಂಡು ಕುಟುಂಬದ ಆಶ್ರಯ ತಪ್ಪಿ ಜೀವಿಸಲೆ ಬೇಕಾದ ಅನಿವಾರ್ಯತೆ ಬಂದಾಗ ಗಾರೆ ಕೆಲಸ ಮಾಡುತ್ತಾಳೆ. ಆದರೆ ಒಬ್ಬಂಟಿಯಾದ ಹೆಣ್ಣೊಬ್ಬಳನ್ನು ನಮ್ಮ ಸಮಾಜ ಕಾಣುವ ರೀತಿಯಲ್ಲಿಯೆ ಅವಳ ಸುತ್ತಮುತ್ತಲಿನ ಸಮಾಜ ಅವಳ

ಒಬ್ಬಂಟಿತನವನ್ನು ದುರುಪಯೋಗ ಪಡಿಸಿಕೊಂಡು ತಮ್ಮ ಕಾರ್ಯಕ್ಕೆ ಬಳಸಿಕೊಳ್ಳುತ್ತದೆ. ಆದರೆ ತನ್ನ ತಮ್ಮನನ್ನು ಸತ್ಯನಾರಾಯಣ ಸ್ಕೂಲ್‌ಗೆ ಸೇರಿಸಿ ಆತನನ್ನು ಒಳ್ಳೆಯ ನಾಗರಿಕನಾಗಿ ಬೆಳೆಸಲು ಅದಕ್ಕಿಂತ ಮುಖ್ಯವಾಗಿ ಸದ್ಯದ ಜೀವನ ನಿರ್ವಹಣೆಗಾಗಿ ಹಣ ಅಗತ್ಯವಾದಾಗ ಖಡವ, ನಾಗ್ರ ಒಡ್ಡುವ ಬಲೆಗೆ ಬಿದ್ದು ದಿಟ್ಟವಾಗಿ ಜೀವನ ನಿರ್ವಹಿಸುತ್ತಾಳೆ.

ಪದ್ದಿ ಸಿನಿಮಾ ವೃತ್ತಿಯನ್ನು ಆಯ್ದುಕೊಂಡು ಅಲ್ಲಿನ ಜನರ ಸ್ವಾರ್ಥಕ್ಕೆ ಬಲಿಯಾಗಲು ಆಕೆಯ ತಂದೆ–ತಾಯಿ ಕಾರಣವಾಗುತ್ತಾರೆ. ಆದರೆ ಪದ್ದಿ ಯಾವತ್ತೂ ತನ್ನ ವೃತ್ತಿಯ ಬಗ್ಗೆ ಅಸಹ್ಯ ಪಟ್ಟುಕೊಳ್ಳದೆ ಅಲ್ಲಿಯೆ ಜೀವನವನ್ನು ನಿರ್ವಹಿಸುತ್ತಾಳೆ.

'ಬಿರುಕು' ಕಾದಂಬರಿಯ ಸುವರ್ಣ, ಶಾಂತ, ಶಾಂತಾಳ ತಾಯಿ ಸಂಪೂರ್ಣವಾಗಿ ಅಧುನಿಕ ಪ್ರಪಂಚಕ್ಕೆ ತೆರೆದುಕೊಂಡವರು, ಶಾಂತಳ ತಂದೆ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು ಶಾಂತ ಪದವಿ ಪಡೆದ ವಿದ್ಯಾರ್ಥಿ. ಹೀಗಾಗಿ ತಂದೆ–ತಾಯಿ–ಮಗಳ ಸಂಬಂಧ ಸ್ನೇಹಿತರಂತೆ ಇದ್ದು ಯಾವುದೆ ಬಂಧನವಿಲ್ಲದ ಕುಟುಂಬ ವ್ಯವಸ್ಥೆಯನ್ನು ಕಾಣಬಹುದು. ಆದರೆ ತಾಯಿ ತಂದೆಯ ಮಾತಿನಂತೆ ಒತ್ತಾಯ ಪೂರ್ವಕವಾಗಿ ಪಾರ್ಟಿಗೆ ಹೋಗಲೇಬೇಕಾದ ಅನಿವಾರ್ಯತೆ ಇದ್ದರೂ ಶಾಂತೆ ಪಾರ್ಟಿಗೆ ಹೋಗುವುದಿಲ್ಲ. ತಾಯಿ ಅದಕ್ಕಾಗಿ ಬೈದರೂ ಕೂಡ ಹೋಗಲೇಬೇಕಾದ ಅನಿವಾರ್ಯತೆಯನ್ನು ಅವಳ ಮೇಲೆ ಹೇರುವುದಿಲ್ಲ.

ಶಾಂತ ಮತ್ತು ಶಿವಿ ಇಬ್ಬರೂ ಶಿಕ್ಷಣವನ್ನು ಪಡೆದುಕೊಂಡವರು. ಆದರೆ ಶಿವಿಯಿರುವ ಕುಟುಂಬ ಮತ್ತು ಸಮಾಜವು ಅವಳ ಬೌದ್ಧಿಕ ವಿಕಾಸವನ್ನು ಕುಂಠಿತಗೊಳಿಸುತ್ತದೆ. ಅದು ಅವಳ ದುರಂತ ಸಾವಿಗೆ ಕಾರಣವಾಗುತ್ತದೆ. ಆದರೆ ಶಾಂತಳ ಕುಟುಂಬ ಮತ್ತು ಆಕೆ ಬದುಕುತ್ತಿರುವ ನಗರ ಪರಿಸರದಿಂದ ಆಕೆ ಮೆಚ್ಚಿರುವ ವಸಂತನನ್ನು ತಿರಸ್ಕರಿಸುತ್ತಾಳೆ.

ಒಟ್ಟಿನಲ್ಲಿ ಲಂಕೇಶ್ ಕಾದಂಬರಿಯಲ್ಲಿ ಬರುವ ಸ್ತ್ರೀಯರ ಒಳಿತು–ಕೆಡುಕುಗಳಿಗೆ ಅವರವರ ಕೌಟುಂಬಿಕ ಪರಿಸರವೆ ಕಾರಣವಾಗುತ್ತದೆ.

ಲಂಕೇಶ್‌ರ ಕಾದಂಬರಿಯಲ್ಲಿ ಬರುವ ಸ್ತ್ರೀಯರ ಸಾಮಾಜಿಕ ಪರಿಸರ : –

'ಮುಸ್ಸಂಜೆಯ ಕಥಾ ಪ್ರಸಂಗ'ದಲ್ಲಿ ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ಕಂಬಳ್ಳಿಯಂತಹ ಗ್ರಾಮೀಣ ಪ್ರದೇಶ, 'ಅಕ್ಕ' ಕಾದಂಬರಿಯಲ್ಲಿ ನಗರಕ್ಕೆ ಹೊಂದಿಕೊಂಡಂತಿರುವ ಕೊಳಗೇರಿ, ನಗರದಲ್ಲಿಯೆ ರಚನೆಗೊಂಡ 'ಬಿರುಕು' ಕಾದಂಬರಿಯ ಪರಿಸರ. ಈ ಮೂರು ವಿಭಿನ್ನವೆನಿಸುವ ಸಾಮಾಜಿಕ ವಲಯಗಳು ಕೂಡಾ ನಗರದ ಎಲ್ಲ ದುಷ್ಟತೆ, ಭ್ರಷ್ಟತೆಯಿಂದ ಕೂಡಿರುವ ಸಮಾಜವೆ ಆಗಿದೆ. ಇಂತಹ ಸಮಾಜದ ಒಳಗೆ ಬದುಕನ್ನು ಸಾಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಒತ್ತಡಗಳನ್ನು ಬದಿಗೆ ಸರಿಸಿ ಜೀವನ ನಡೆಸಲೆ.ಬೇಕಾದ ಅನಿವಾರ್ಯತೆಯಲ್ಲಿಯೆ ದಿಟ್ಟವಾಗಿ ಬದುಕನ್ನು ನಿರ್ವಹಿಸುವ ಸ್ತ್ರೀಯರನ್ನು ಕಾಣಬಹುದು.

ಸ್ತ್ರೀಯರ ಕೌಟುಂಬಿಕ ಪರಿಸರಕ್ಕೂ, ಸಾಮಾಜಿಕ ಪರಿಸರಕ್ಕೂ ನಿಕಟವಾದ ಸಂಬಂಧವಿದೆ. ಆಧುನಿಕತೆಯ ಕರಿ ನೆರಳಿನಲ್ಲಿ ಸೃಷ್ಟಿಗೊಂಡ ಕೋಮುವಾದ, ಭ್ರಷ್ಟತೆ, ದುಷ್ಟತೆಗಳಿಂದ ತುಂಬಿದ ಸಮಾಜದ ಒಳಗೆ ಬದುಕಬೇಕಾದ ಸಂದರ್ಭವು ಕೌಟುಂಬಿಕ ವಲಯದಿಂದಲೆ ಮೂಡಿ ಬಂದಿದೆ.

:ಕಂಬಳ್ಳಿಯ ಜನರ ಮುಖ್ಯ ಉದ್ಯೋಗ ಬೇಸಾಯ ಮತ್ತು ಹಾಲು, ಹೈನು ತೆಗೆದುಕೊಂಡು ಹೋಗಿ ಶಿವಮೊಗ್ಗದಲ್ಲಿ ಮಾರುವುದು ಎಂಬುವುದು ಪರಂಪರೆಯ ಮಾತಾಯಿತು ಈಚೆಗೆ ಒಂದು ಹಿಟ್ಟು, ಮತ್ತು ಅಕ್ಕಿಯ ಹಲ್ಲರ್ ಬಂದಿದೆ. ಶಿವಮೊಗ್ಗದ ಪ್ರಭಾವದಿಂದ ವರದಕ್ಷಿಣೆ, ಹೆಂಡ, ಜೂಜು, ಪುಡಾರಿತನಗಳೆಲ್ಲ ಇಲ್ಲಿ ಕಾಲಿಟ್ಟಿವೆ. ಜಾತಿಗಳ ಹೆಸರಲ್ಲಿ ಹಲ ಬಗೆಯ ಸಾಹಸಗಳು ನಡೆಯುತ್ತವೆ. ಇವುಗಳನ್ನಲ್ಲಿ ಪರೋಕ್ಷವಾಗಿ ಮಾತ್ರ ವಿವರಿಸುತ್ತಾ ಮನುಷ್ಯರ ನಡಾವಳಿಯನ್ನು ಹೇಳುವುದು. ಒಳ್ಳೆಯದೆಂದು ರಂಗವ್ವ ಎಂಬ ವಿಧವೆಯೊಬ್ಬಳ, ಸಂಸಾರದ ವರ್ಣನೆಯಿಂದ ಈಗ ಆರಂಭಿಸುವ"[೮] [ಪು.ಸಂ.೧]

ಇಲ್ಲಿ ಕಂಬಳ್ಳಿಯಂತಹ ಗ್ರಾಮೀಣ ಪ್ರದೇಶ ನಗರದ ಪ್ರಭಾವಕ್ಕೆ ಒಳಗಾಗಿ ಹೆಂಡ, ಜೂಜು, ಪುಡಾರಿತನಗಳಂತಹ ಕೆಟ್ಟ ಹವ್ಯಾಸಗಳು ಜಾತಿ–ಜಾತಿಗಳ ನಡುವಿನ ಕೋಮುಗಲಭೆಗಳು ಕ್ರಮೇಣ ಕಂಬಳ್ಳಿಯ, ಸಾಮಾಜಿಕ ಪರಿಸರವನ್ನು ಹಾಳು ಕೆಡಹುತ್ತಿದೆ. ಹೀಗೆ ಸಂಪೂರ್ಣವಾಗಿ

ಅನಾರೋಗ್ಯಕರವಾಗಿ ನಿರ್ಮಾಣಗೊಳ್ಳುತ್ತಿರುವ ಕಂಬಳ್ಳಿಯಲ್ಲಿ ಅನಿವಾರ್ಯವಾಗಿ ಬದುಕಲೆಬೇಕಾದ ಸ್ಥಿತಿಯಲ್ಲಿ ಇಡೀ ಹಳ್ಳಿಯ ಜನರ ನಡಾವಳಿಗಳು ನಗರದ ಪ್ರಭಾವಕ್ಕೆ ಹೇಗೆ ಹೊಂದಿಕೊಂಡವು ಅಥವಾ ಅದನ್ನು ವಿರೋಧಿಸುತ್ತಲೆ ಬದುಕು ನಡೆಸುತ್ತಿದ್ದವು ಎಂಬುವುದನ್ನು ಹೇಳುವುದಕ್ಕೆಂದೆ ರಂಗವ್ವನ ಸಂಸಾರ ವಿವರಣೆಯನ್ನು ನೀಡುತ್ತಾ ಸ್ತ್ರೀಯೊಬ್ಬಳು ಬದಲಾದ ಪರಿಸರಕ್ಕೆ ಅನುಗುಣವಾಗಿ, ಅದಕ್ಕೆ ಎದುರಾಳಿಯಲ್ಲದ ಎದುರಾಳಿಯಾಗಿ ಬದುಕನ್ನು ಸಾಗಿಸುತ್ತಿದ್ದಳು ಎಂಬುವುದನ್ನು ವಿವರಿಸುತ್ತಾರೆ. ಹೀಗೆ ಸ್ತ್ರೀಯ ಅಸ್ತಿತ್ವಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಾರೆ.

ಅಣೆಬಡ್ಡಿ ವ್ಯವಹಾರ ನಡೆಸುತ್ತಾ ಜೀವನ ಸಾಗಿಸುತ್ತಿದ್ದ ರಂಗವ್ವ ಭರ್ಮಣ್ಣನ ಹತ್ತಿರ ಬಡ್ಡಿಯ ಹಾಗೂ ಹಾಲು ಮಾರಿಬಂದ ಹಣವನ್ನು ಕೂಡಿಟ್ಟಿದ್ದಳು. ಆದರೆ ಭರ್ಮಣ್ಣ ತಪ್ಪು ಲೆಕ್ಕ ಹೇಳಿ ಮೋಸ ಮಾಡುತ್ತಿದ್ದಾನೆ ಎಂದು ಅನ್ನಿಸಿದಾಗ ತನ್ನ ಸ್ವಾಭಾವಿಕ ಬೈಗುಳದ ಮೂಲಕ ಹಣವನ್ನು ವಸೂಲಿ ಮಾಡುತ್ತಾಳೆ. ಆಗ ಭರ್ಮಣ್ಣ, ಸಾವಂತ್ರಿ-ಬ್ಯಾಡರ ಮಂಜನ ಪ್ರೇಮವನ್ನು ಮುಂದಿಟ್ಟುಕೊಂಡು ಧರ್ಮದ ಹೆಸರಿನಲ್ಲಿ ಆಕೆಯನ್ನು ಹೆದರಿಸುತ್ತಾನೆ. ಆದರೆ ಧರ್ಮ ಜಾತಿ ರಾಜಕಾರಣದ ಸಮಾಜದ ಒಳಗೆಯೆ ದಿಟ್ಟವಾಗಿ ತನ್ನ ಬದುಕನ್ನು ನಿರ್ವಹಿಸುತ್ತಾಳೆ. ಕೊನೆಗೆ ಸಾವಂತ್ರಿ ಮತ್ತು ಮಂಜನ ಪ್ರೇಮ ದೈಹಿಕ ಸಂಬಂಧದವರೆಗೂ ಮುಟ್ಟಿ ರಾಚ, ಬೂಸಿ, ಅಂಜನಿ, ಶಿವಾಜಿ ಅವರನ್ನು ಅವಮಾನ ಮಾಡಿ ಗಾಡಿಯಲ್ಲಿ ಕೂರಿಸಿಕೊಂಡು ಮೆರವಣಿಗೆ ಮಾಡಿಸುವುದು ಇಂತಹ ವೇಳೆಯಲ್ಲಿ ಯಾವುದೆ ಪೂರ್ವಯೋಜನೆಯಿಲ್ಲದೆ ಎಲ್ಲರ ಸಮ್ಮುಖದಲ್ಲಿ ಮಂಜ ಸಾವಂತ್ರಿಗೆ ಕೊಡಿಸಿದ್ದ ರೇಷ್ಮೆ ಸೀರೆಯನ್ನು ಉಡಿಸಿ ಅವರಿಗೆ ಮದುವೆ ಮಾಡಿಸಿ "ಅದೇನಾಗುತ್ತ್ಯೋ ನಾ ನೋಡ್ಕಂತಿನಿ ಸುಖವಾಗಿರು, ನನ್ನ ಸುಡುಗಾಡು ಮಗಳೆ"[೯] [ಪು.೩೫೩] ಎಂದು ಬೈದಾಡುವ ರಂಗವ್ವ ಬದಲಾದ ಪರಿಸ್ಥಿಗೆ ಅನುಗುಣವಾಗಿ ತಾನು ಬದಲಾಗುತ್ತಾ ಯಾವುದಕ್ಕೂ ಅಂಟಿಕೊಳ್ಳದೆ ಜೀವನ ನಿರ್ವಹಿಸುವ ರಂಗವ್ವನ ಅಕಸ್ಮಾತ್ತಾದ ನಿರ್ಣಯಗಳಿಗೆ ಅವಳ ಸುತ್ತಮುತ್ತಲಿನ ಸಮಾಜ ಕಾರಣವಾಗುತ್ತದೆ.

'ಸಾವಂತ್ರಿ-ಶಿವಿ', 'ರಾಮಿ- ರುದ್ರಿ', ಸಿದ್ದಿ, ಹನುಮಕ್ಕ ಮುಂತಾದ ಸ್ತ್ರೀಯರಲ್ಲಿ ಸಾವಂತ್ರಿ, ರಾಮಿ ಮತ್ತು ಹನುಮಕ್ಕನ ದಿಟ್ಟತನಗಳು, ಚುರುಕುತನಗಳು ಶಿವಿಯ ದುರಂತ ಸಾವು ರುದ್ರಿ-ಸಿದ್ದಿಯರು ತಮ್ಮ ವಲಯದಲ್ಲಿ ಕಾಣುವ ಸುಖ ಸಂತೋಷಗಳಿಗೆ ಅವರ ಕುಟುಂಬದಷ್ಟೆ ಸಮಾಜ ವ್ಯವಸ್ಥೆಯೂ ಕಾರಣವಾಗುತ್ತದೆ. ಸಾವಂತ್ರಿ ಮಂಜನೊಂದಿಗೆ ಇದ್ದಾಗ ಅವರ ಸಂಬಂಧದ ಬಗ್ಗೆ ಅಪಾರ್ಥ ಮಾಡಿಕೊಳ್ಳುವ ಸಮಾಜದ ಜನ, ಇಕ್ಬಾಲ್ ಮುಸ್ಲಿಂನಾಗಿರುವ ಕಾರಣಕ್ಕೆ ಆತನೊಂದಿಗೆ ಸಾವಂತ್ರಿ ಯಾವುದೆ ಪ್ರೇಮ ಸಂಬಂಧ ಇಟ್ಟುಕೊಂಡಿರಲು ಸಾಧ್ಯವಿಲ್ಲ ಅಂದುಕೊಳ್ಳುತ್ತದೆ. ಈ ಮೂಲಕ ಧರ್ಮ-ಧರ್ಮದ ನಡುವಿನ ಭೇದಗಳು ವ್ಯಕ್ತಿಗಳ ಸಂಬಂಧದಲ್ಲಿಯೂ ತಡೆ ಒಡ್ಡುತ್ತದೆ ಎಂಬುವುದು ಸ್ಪಷ್ಟವಾಗುತ್ತದೆ. ಕರಿಯನ ತಾಯಿ ಹನುಮಕ್ಕನ ಬೈಗುಳ ತನ್ನ ಮಗ ಅವನತಿಯತ್ತ ಸಾಗುತ್ತಿರುವ ಬಗ್ಗೆ ಇಡೀ ಸಮಾಜಕ್ಕೆ ಹಾಕುವ ಶಾಪದ ಮೂಲಕ ಕಂಬಳ್ಳಿಯ ಸಮಾಜ ಹಾಳುಗೆಡುತ್ತಿರುವ ಬಗೆಯನ್ನು ಹೇಳುತ್ತಾಳೆ. ಇದು ಕರಿಯನಂತಹ ಪುಟ್ಟ ಬಾಲಕನನ್ನು ಸಮಾಜ ಕೆಟ್ಟ ಕಾರ್ಯಗಳಿಗೆ ಬಳಸಿಕೊಳ್ಳುತ್ತಿರುವ ರೀತಿಯನ್ನು ತಿಳಿಸುತ್ತದೆ.

ಹೀಗೆ ಕಂಬಳ್ಳಿಯಂತಹ ಗ್ರಾಮೀಣ ಪ್ರದೇಶ ಇದ್ದಕ್ಕಿದ್ದಂತೆ ನಗರಮುಖಿಯಾಗಿ ಸಾಗುತ್ತಾ ಇರುವಾಗ ಉದ್ಭವಗೊಂಡ ಜಾತಿ ರಾಜಕಾರಣ ಜೂಜು, ಕಳ್ಳಭಟ್ಟಿ, ಪ್ರೇಮ ಕಾಮ, ಭ್ರಷ್ಟತೆ ಮುಂತಾದ ಸಾಮಾಜಿಕ ವಲಯದ ಒಳಗೆ ಅನಿವಾರ್ಯವಾಗಿ ಬದುಕನ್ನು ನಡೆಸಲೆಬೇಕಾದ ಸಂದರ್ಭಕ್ಕೆ ಪ್ರತಿಕ್ರಿಯಿಸಿದ ರಂಗವ್ವ, ಸಾವಂತ್ರಿ, ಶಿವಿ, ರಾಮಿ, ರುದ್ರಿಯರನ್ನು ಕಾಣಬಹುದು.

'ಅಕ್ಕ' ಕಾದಂಬರಿಯ 'ದೇವೀರಿ' ಬದುಕುತ್ತಿರುವ ಕೊಳಗೇರಿಯ ಒಳಗಿನ ಸಾಮಾಜಿಕ ವ್ಯವಸ್ಥೆ ವಿಭಿನ್ನವಾದುದು. ತಂದೆ-ತಾಯಿಯನ್ನು ಕಳೆದುಕೊಂಡು ಜೀವನ ನಿರ್ವಹಣೆಗೆ ಇದ್ದ ಹೂವಿನ ಅಂಗಡಿ ಯಾರದೋ ಸ್ವಾರ್ಥಕ್ಕೆ ನಾಶವಾಗುತ್ತದೆ. ಇಂತಹ ಅಸಹಾಯಕ ಸಂದರ್ಭದಲ್ಲಿ ತಮ್ಮನನ್ನು ಸಾಕುತ್ತ ತನ್ನ ಬದುಕಿನ ನಿರ್ವಹಣೆಗಾಗಿ ಕೂಲಿ ಕೆಲಸಕ್ಕೆ ಹೋಗುವ ದೇವೀರಿಯಂತಹ ಯೌವನಸ್ಥಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಖಡವಾ, ನಾಗ್ರ, ಹರಿ, ಗಿರಿ ಮುಂತಾದವರು ದೇವೀರಿ ಮನೆಗೆ ಬಂದು ಕುಳಿತುಕೊಳ್ಳುವಂತದ್ದನ್ನು ನೋಡಿದಾಗ ಹೆಣ್ಣಿನ ಒಂಟಿತನವನ್ನು ಬಳಸಿಕೊಳ್ಳುವ ಸಮಾಜದ ದುಷ್ಟತೆಯನ್ನು ಅರಿಯಬಹುದು.

"ಖಡವಾ ಅಂತೇ ಖಡವಾ ಮೈ ಮುರೇ ದುಡಿದು ಹೆಣಗಾಕೆ ನಾನು ಆ ನರಸಿಂಹ ಮೇಸ್ತ್ರಿ ದಗಾ ಹಾಕಿದ್ರೆ ಕೇಳೋನು ಸೈತ ಇಲ್ಲ ಇವನ ಮನೆಗೆ ಬೆಂಕಿ ಬೀಳ. ಹಲ್ಲು ಕಿಸಕೊಂಡು ಬಂದು ಬಿಡ್ತಾನೆ. ಈ ಕಾಲದಾಗ ಕಟ್ಟಿಕೊಂಡ ಗಂಡನೇ ಇರಾಕಿಲ್ವಂತೆ ಇನ್ನ ಈ ಬೀದಿ ನಾಯಿಗಳು ನನ್ನ ಕೇಳ್ತಾವಾ ? ಅವ್ವ ಹೆಣ ಮಗಳೊಬ್ಬಳು ಮೈ ಮುರೇ ದೇಕಿ, ಬದುಕಾಕೂ ಆಗಕಿಲ್ಲವಲ್ಲ ಏನು ಬಂತವ್ವ ಕಾಲ"[೧೦][ಪು.ಸಂ.೨]

ಎಂಬ ದೇವೀರಿಯ ಮಾತಿನಲ್ಲಿ ಒಬ್ಬಂಟಿಯಾಗಿ ಹೆಣ್ಣೊಬ್ಬಳು ಇದ್ದಾಗ ತನ್ನ ಬದುಕಿನ ಬಗ್ಗೆ ಕಾಳಜಿ ವಹಿಸಬೇಕಿತ್ತು ಎಂಬ ಆಕೆಯ ಆಸೆ. ಆದರೆ ಅದು ತಾನು ಸಂಬಂಧ ಹೊಂದಿರುವ ನರಸಿಂಹಮೇಸ್ತ್ರಿಯಂತವರಿಂದ ಸಾಧ್ಯವಿಲ್ಲ ಎಂದಾಗ ಹೆಣ್ಣೊಬ್ಬಳು ಒಬ್ಬಂಟಿಯಾಗಿ ಈ ಸಮಾಜದಲ್ಲಿ ಜೀವನ ನಡೆಸಲು ಸಾಧ್ಯವಿಲ್ಲ ಎಂದು ಬೈಗುಳದ ಮೂಲಕ ತನ್ನ ಅಸಹಾಯಕ ಪರಿಸ್ಥಿತಿಯನ್ನು ತೋಡಿಕೊಳ್ಳುತ್ತಾಳೆ. ನಾಗರಾಜ ನಾಯ್ಡುವಿನ ಮಗಳು ಪದ್ದಿಯು ಸಿನಿಮಾ ಜಗತ್ತಿನ ಮಾಯಕ್ಕೆ ಸಿಕ್ಕು ಅಲ್ಲಿನ ಶಂಕರ ನಾರಾಯಣನ ಮಾತಿನಂತೆ ನಾಯಕಿ ಪಾತ್ರದ ಬಗ್ಗೆ ಕನಸನ್ನು ಇಟ್ಟುಕೊಂಡು ಸಖಿಯ ಪಾತ್ರ ಮಾಡುತ್ತಾ ಅವರ ದೈಹಿಕ ಆಸೆಗಳಿಗೆ ಬಲಿಯಾಗುವ ಪದ್ದಿಯ ಸಾಮಾಜಿಕ ವಲಯ ಅವಳ ಆಸೆ ಆಕಾಂಕ್ಷೆಗಳನ್ನು ಮಣ್ಣು ಪಾಲು ಮಾಡುತ್ತದೆ.

"ಒಂದು ಕೊಳಗೇರಿಯ ಜೀವನ ವಿಧಾನದಲ್ಲಿ ಗೌರವವಾಗಿ ಬದುಕುವ ಮನಸ್ಸುಗಳಿಲ್ಲದಿರಬಹುದು ಬದುಕಿನ ವಿಚಿತ್ರ ಸಹ ಸಂಬಂಧ, ವೈವಿಧ್ಯ-ವೈರುಧ್ಯ, ಉನ್ನತಿ ಅವನತಿಗಳ ವ್ಯಕ್ತಿತ್ವ ಇವುಗಳ ಅನಾವರಣವನ್ನೆ ಇಲ್ಲಿ ಕಾಣುತ್ತವೆ." [೧೧] [ಪು.ಸಂ.೫೨]

ಹೀಗೆ ದೇವೀರಿ, ಪದ್ದಿ ಹೊಂದಿರುವ ವಿಚಿತ್ರ ಸಂಬಂಧ ವಿಭಿನ್ನ ಕನಸುಗಳನ್ನು ಕಾಣಬಹುದು.

'ಬಿರುಕು' ಕಾದಂಬರಿ ಸಂಪೂರ್ಣವಾಗಿ ನಗರ ಜೀವನದ ಕಥೆ. ನಗರದಲ್ಲಿ ಬೀಡು ಬಿಟ್ಟಿರುವ ಕೃತಕತೆ, ಡೋಂಗಿಗಳು, ಸಹಜವಾಗಿಯೆ ಕಂಡು ಬರುತ್ತದೆ. ಅಲ್ಲಿ ಜೀವನ ನಡೆಸುತ್ತಿರುವ ರಂಗಯ್ಯನ ಹೆಂಡತಿ ಸುವರ್ಣ ತನ್ನ ಲೈಂಗಿಕತೆಯನ್ನು ಪ್ರಕಟ ಪಡಿಸಲು ಬಸವರಾಜುಪಿನಂತಹ ದುರ್ಬಲ ವ್ಯಕ್ತಿಯನ್ನು ಪಡೆಯಲು ಯತ್ನಿಸುತ್ತಾಳೆ. ಸುವರ್ಣಳ ಮಗಳು ಶಾಂತ ವಸಂತನೊಂದಿಗೆ ಸ್ನೇಹವನ್ನು ಇಟ್ಟುಕೊಳ್ಳುತ್ತಾಳೆ. ಆದರೆ ಆತ ಯಾವಾಗ ಸ್ವಾರ್ಥಿ

ಎಂದುಕೊಳ್ಳುತ್ತಾಳೊ ಆಗ ಅವನಿಂದ ದೂರ ಸರಿಯುತ್ತಾಳೆ. ಕೆಂಪು ಮೂತಿ, ಉದ್ದನೆಯ ಮೂಗು, ಕೊಳವೆ ಪ್ಯಾಂಟ್, ಮುಂದಲೆಯಲ್ಲಿ ಹಣೆ ಮುಚ್ಚುವಂತಹ ಕೂದಲಿನ ವಸಂತ ಶ್ರೀಮಂತನೆಂಬ ಕಾರಣಕ್ಕೆ ಆತನೊಂದಿಗೆ ಸ್ನೇಹವಿಟ್ಟುಕೊಂಡಿದ್ದ ಶಾಂತಳಿಗೆ ತಾಯಿ ಏನನ್ನು ಹೇಳುವುದಿಲ್ಲ. ಆದರೆ ವಸಂತ ಸ್ವಾರ್ಥಿ ಅನಿಸಿದ ತಕ್ಷಣವೆ ಅವನಿಂದ ದೂರ ಸರಿಯುವ ಪ್ರಯತ್ನಕ್ಕೆ ಬರುತ್ತಾಳೆ. ಇಲ್ಲಿ ಆಕೆ ಪಡೆದುಕೊಂಡ ಶಿಕ್ಷಣದಿಂದಾಗಿ, ಸಮಾಜದಿಂದಲೆ ತಪ್ಪು ಸರಿಯ ನಿರ್ಧಾರಕ್ಕೆ ಬಂದು ನಿಲ್ಲುತ್ತಾಳೆ.

ಹೀಗೆ ಲಂಕೇಶ್ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸಮಾಜಕ್ಕೆ ಅನುಸಾರವಾಗಿ ಅಲ್ಲಿನ ಸ್ತ್ರೀಯರು ಕೂಡಾ ಕಾಣಿಸಿಕೊಳ್ಳುತ್ತಾರೆ.

ಲಂಕೇಶ್ ಕಾದಂಬರಿಗಳಲ್ಲಿ ಕಂಡು ಬರುವ ಸ್ತ್ರೀಯರ ಸಾಂಸ್ಕೃತಿಕ ಪರಿಸರ:-

ಲಂಕೇಶ್ ಕಾದಂಬರಿಗಳಲ್ಲಿ ಮೂರು ರೀತಿಯ ವಿಭಿನ್ನ ಸಾಂಸ್ಕೃತಿಕ ಪರಿಸರ ಕಂಡು ಬರುತ್ತದೆ. ಆಯಾಯಾ ಸಾಂಸ್ಕೃತಿಕ ಪರಿಸರ ಹೆಣ್ಣೊಬ್ಬಳು ಬದುಕಲೆ ಬೇಕೆನ್ನುವ ಜೀವನೋತ್ಸಾಹಕ್ಕೆ ಪೂರಕವಾಗಿ ನಿಲ್ಲುತ್ತದೆ. ರಂಗವ್ವನ ಸುತ್ತ ಹರಡಿರುವ ಲಿಂಗಾಯಿತ ಜನಾಂಗದ ಪ್ರಭಾವ ಹೊಲೆಯರ ಪ್ರಭಾವ, ದೇವೀರಿ ಬದುಕುತ್ತಿರುವ ಕೊಳಗೇರಿಯ ವಿಭಿನ್ನ ಜನ ಸಮೂಹ, ಅಲ್ಲಿನ ನಾನಾ ಆಚರಣೆಗಳು, ಶಾಂತ ಕಾಣುತ್ತಿರುವ ಆಧುನಿಕ ಜಗತ್ತುಗಳ ಪಾರ್ಟಿ ಸಡಗರಗಳು ಅಲ್ಲಿಗೆ ಒತ್ತಾಯ ಪೂರ್ವಕವಾಗಿ ಹೋಗಲೆಬೇಕಾದ ಅನಿವಾರ್ಯತೆಗಳ ಒಂದು ಸಾಂಸ್ಕೃತಿಕ ನೆಲೆ. ಒಟ್ಟಿನಲ್ಲಿ ಲಂಕೇಶ್ ಕಾದಂಬರಿಗಳಲ್ಲಿ ಕಂಡುಬರುವ ಸ್ತ್ರೀಯರ ಬದುಕಿನ ಮೇಲೆ ಸಾಂಸ್ಕೃತಿಕ ಪರಿಸರ ಗಾಢವಾದ ಪ್ರಭಾವವನ್ನು ಬೀರುತ್ತದೆ.

(~~ಪರಂಪರಾಗತವಾಗಿ ಕಂಬಳ್ಳಿಯಲ್ಲಿ ಅಸ್ತಿತ್ವದಲ್ಲಿದ್ದ ಜಾತಿಯ ಕಟ್ಟುಪಾಡು~~) ಸಾವಂತ್ರಿ ಮತ್ತು ಬ್ಯಾಡರ ಮಂಜನ ವಿವಾಹದಿಂದಾಗಿ ಪರಂಪರಾಗತವಾಗಿ ಕಂಬಳ್ಳಿಯಲ್ಲಿ ಅಸ್ತಿತ್ವದಲ್ಲಿದ್ದ ಜಾತಿಯ ಕಟ್ಟುಪಾಡು ಮುರಿದು ಬೀಳುತ್ತದೆ. ಕಂಬಳ್ಳಿಯಂತಹ ಹಳ್ಳಿಗಾಡಿನಲ್ಲಿ ಬದುಕುತ್ತಿರುವ ಸಾವಂತ್ರಿ ನಗರದಲ್ಲಿ ಬದುಕುತ್ತಿರುವ ಮಂಜನಲ್ಲಿ ಸಹಜವಾಗಿಯೆ ಆಕರ್ಷಿತಳಾಗುತ್ತಾಳೆ. ಒಬ್ಬ ಹುಡುಗನೊಂದಿಗೆ ನಗರಕ್ಕೆ ಹೊಗಿ ಪಿಕ್ಚರ್ ನೋಡಿಬರುವುದು ತಪ್ಪು ಎನ್ನುವ ಹೆದರಿಕೆ ಇದ್ದರೂ

ಮಂಜನೊಂದಿಗೆ ಪಿಕ್ಚರ್ ನೋಡಲು ಹೋಗುವುದರ ಮೂಲಕ ಗ್ರಾಮ್ಯದಿಂದ ಹೊರಗೆ ಹೋಗುವ ಪ್ರಯತ್ನ ಮಾಡುತ್ತಾಳೆ. ಬದಲಾಗುತ್ತಿರುವ ಸನ್ನಿವೇಶಕ್ಕೆ ತಕ್ಕ ಹಾಗೆ ಒಂದು ಪರಿಸರದಿಂದ ಹೊಸ ಪರಿಸರಕ್ಕೆ ಹೋಗಬೇಕೆನ್ನುವ ಬಯಕೆ ಹುಟ್ಟುತ್ತದೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದ ರಂಗವ್ವ ಹರೆಯದಲ್ಲಿರುವ ತನ್ನ ಮಗಳಿಗೆ ಆದಷ್ಟು ಬೇಗ ಮದುವೆ ಮಾಡುವ ಯೋಚನೆ ಮಾಡುತ್ತಾಳೆ. ಹಾಗೆಯೆ ನಗರದ ಕೊಳಗೇರಿಯಲ್ಲಿ ಬದುಕುತ್ತಿರುವ ದೇವೀರಿ ಅಲ್ಲಿನ ಪರಿಸರಕ್ಕೆ ತಕ್ಕ ಹಾಗೆ ತಮ್ಮನನ್ನು ಓದಿಸಬೇಕು ಎಂಬ ಆಸೆಯನ್ನಿಟ್ಟು ಕೊಂಡಿರುತ್ತಾಳೆ. ಹೀಗೆ ಅವರು ಬದುಕುತ್ತಿರುವ ವಲಯಕ್ಕೆ ಅನುಗುಣವಾಗಿ ಅವರ ಮನಸ್ಥಿತಿಗಳು ಕೂಡಾ ಬದಲಾಗುವುದನ್ನು ಕಾಣಬಹುದು.

ರಂಗವ್ವ ತಮ್ಮ ಜಾತಿಯ ಸೀಮಿತ ಆವರಣವನ್ನು ಮೀರಿ ಮಂಜ ಮತ್ತು ಸಾವಂತ್ರಿಯರ ವೈವಾಹಿಕ ಪ್ರಕ್ರಿಯೆಯನ್ನು ಸೇಡಿನ ಹಿನ್ನೆಲೆಯಲ್ಲಿ ನೆರವೇರಿಸುವ ಮೂಲಕ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಕಾರಣಳಾದರೂ ಕೂಡಾ ಮಗಳ ಮದುವೆಯಾದ ನಂತರ ಮಂಜನನ್ನು ಮಡಿ ಮೈಲಿಗೆಯ ಸಾಮಾಜಿಕ ನೆಲೆಯಲ್ಲಿ ಗುರುತಿಸಿಕೊಳ್ಳುವುದನ್ನು ಕಾಣಬಹುದು. ಆದರೆ ಇದು ಜಾತಿಯ ಪರಂಪರಾಗತ ಹಿಡಿತವನ್ನು ವ್ಯಕ್ತಪಡಿಸುತ್ತದೆಯೆ ಹೊರತು ರಂಗವ್ವನ ಸಾಂಸ್ಕೃತಿಕ ಆಶಯಗಳು ಅಷ್ಟು ಮಾನವ ವಿರೋಧಿಯಾಗುವುದಿಲ್ಲ. ಈ ಹಿನ್ನಲೆಯಲ್ಲಿ ಮಡಿಯನ್ನು ಉಳಿಸಿಕೊಂಡು ಉಡುಪ ಮಮ್ತಾಜ್ ಅನ್ಯಮತೀಯ ನೆಲೆಗಳನ್ನು ತಿರಸ್ಕರಿಸುವುದಿಲ್ಲ. ಆಕೆಯ ಈ ಸ್ವಭಾವವು ಉಡುಪನಿಗೆ ಸಾವಂತ್ರಿಯ ಭವಿಷ್ಯ ಮುಖಿ ಸಾದ್ಯತೆಗಳನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ.

ಆಧುನಿಕ ಆಸ್ಪತ್ರೆ ಔಷದೋಪಚಾರ ಇದ್ದರೂ ಪರಂಪರಾಗತವಾಗಿ ಬಂದ ನಂಬಿಕೆಯನ್ನು ಹಾಗೆಯೆ ಉಳಿಸಿಕೊಂಡು ಹೋಗುವ ರಂಗವ್ವ ತನ್ನ ಸಮಾಜದ ಸಾಂಸ್ಕೃತಿಕ ಅನನ್ಯತೆಯನ್ನು ಗಟ್ಟಿಯಾಗಿ ನಂಬಿಕೊಂಡು ಬಂದವಳಾಗಿ ಕಂಡು ಬರುತ್ತಾಳೆ. ಒಮ್ಮೆ ತನ್ನ ಮಗಳು ಸಾವಂತ್ರಿಗೆ ಜ್ವರ ಬಂದಾಗ ಪೇಟೆಯಿಂದ ಔಷಧಿಯನ್ನು ತರದೆ ಪೊರಕೆ ನಿವಾಳಿಸಿಯೊ, ಮೆಣಸು ಸುಟ್ಟೊ ಕಾಯಿಲೆ ತಾನೇ ಹೋಗುವುದಕ್ಕಾಗಿ ಕಾಯುವುದು ರಂಗವ್ವನ ವಾಡಿಕೆ. ಯಾಕೆಂದರೆ ಸಾವಂತ್ರಿಗೆ ಬರುವ ಕಾಯಿಲೆಗಳು ಕಣ್ಣಾಸರೆಯಿಂದ ಬರುತ್ತದೆ ಎಂದು ತಿಳಿದಿದ್ದಳು. ಆದರೆ ಈ ಸಲ ವಾಡಿಕೆಯ ಕ್ರಮ ಸರಿ ಬರದಿದ್ದ ಕಾರಣಕ್ಕೆ ಎಲ್ಲೆಲ್ಲೂ ಅಲೆದಾಡುತ್ತಾ ಧೂಮಕೇತುವಿನಂತೆ ಎಂದೊ ಬಂದು ಜ್ಯೋತಿಷ್ಯ ಮತ್ತು ಔಷಧಿಗಳಿಂದ ಪವಾಡ ನಡೆಸುವ ಶಾಸ್ತ್ರೀಯನ್ನು

ಆಶ್ರಯಿಸುತ್ತಾಳೆ. 'ಕಂಬಳ್ಳಿ' ಯಂತಹ ಗ್ರಾಮೀಣ ಪ್ರದೇಶ ತನ್ನದೆ ಜನಪದ ಸಾಹಿತ್ಯವನ್ನು ರೂಢಿಯಿಂದ ಉಳಿಸಿಕೊಂಡು ಬಂದಿದೆ. ಇಂತಹ ಜನಪದ ಗೀತೆಯನ್ನು ಸಂಗ್ರಹಿಸುವ ಕೆಲಸವನ್ನು ಮಾಡುವ ದತ್ತಣ್ಣನಿಗೆ ಆ ಜನಪದ ಹಾಡುಗಳ ಬಗ್ಗೆ ಜ್ಞಾನವಿದ್ದ ರಂಗವ್ವನಿಂದ ಸಂಗ್ರಹಿಸುತ್ತಾನೆ. ರಂಗವ್ವನಿಗೆ ಹಸೆಯ ಹಾಡು, ಬೆಳದಿಂಗಳ ಹಾಡು, ನಾಗೋಲೆ ಹಾಡು ಮುಂತಾದ ಹಳ್ಳಿಯ ಹಾಡುಗಳು ಬರುತ್ತಿದ್ದವು. ಈ ಹಾಡುಗಳನ್ನು ತನ್ನ ಮಗಳಿಗೂ ಕಲಿಸುವ ಪ್ರಯತ್ನವನ್ನು ಮಾಡುತ್ತಾಳೆ. ಆದರೆ ಸಾವಂತ್ರಿ ಅದನ್ನು ಕಲಿಯುವ ಉತ್ಸಾಹವನ್ನು ತೋರಿಸುವುದಿಲ್ಲ ಆಕೆ ಸಿನಿಮಾ ಹಾಡನ್ನು ಹಾಡುತ್ತಾ ಓಡಾಡುತ್ತಾಳೆ. ಕಂಬಳ್ಳಿಯಲ್ಲಿ ಜಾತೀಯತೆಯ ನಂಬಿಕೆ, ಸಂಪ್ರದಾಯಗಳು, ಲಿಂಗಾಯಿತ – ಹರಿಜನ ಕೇರಿಗಳನ್ನು ಮುಖಾ-ಮುಖಿಯಾಗಿಸುತ್ತಾರೆ. ಹರಿಜನರನ್ನು ಕೀಳಾಗಿ ಕಾಣುವ ಲಿಂಗಾಯಿತಸಮುದಾಯದ ನಡುವೆಯೆ ಸಾವಂತ್ರಿ ಬ್ಯಾಡರ ಮಂಜನನ್ನು ಪ್ರೀತಿಸಿ ಮದುವೆಯಾಗುವುದರ ಮೂಲಕ ಕಂಬಳ್ಳಿಯಲ್ಲಿ ಸಾಂಸ್ಕೃತಿಕ ಸಂಘರ್ಷವನ್ನು, ಉಂಟುಮಾಡುತ್ತಾಳೆ. ಅದರೆ ಆಗ ನಡೆಯುವ ಯಾವ ತಲ್ಲಣಗಳಿಗೂ ತಲೆಕೆಡಿಸಿಕೊಳ್ಳದ ರಂಗವ್ವ ಕೊನೆಗೆ ಹೊಲೆಯರ ಹಟ್ಟಿಗೆ ಹೋಗಿ ಕೂತು ಉಪ್ಪಿಟ್ಟು ತಿಂದು ಬರುವಷ್ಟರ ಮಟ್ಟಿಗೆ ತನ್ನ ಸಾಂಸ್ಕೃತಿಕ ಪರಿಸರಕ್ಕೆ ಹೊಂದಿಕೊಂಡಿದ್ದಳು.

ಕ್ಯಾತ ನಿರೂಪಿಸುವ ದೇವೀರಿ – ಕ್ಯಾತ ಬದುಕುತ್ತಿರುವ ಕೊಳಗೇರಿ ತನ್ನದೇ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಪ್ರದೇಶ ಮಾನವನ ಜೀವನಾವರ್ತನ ಕ್ರಮದಲ್ಲಿ ನಡೆಸುವ ಎಲ್ಲ ಆಚರಣೆಗಳು ಆ ಹಟ್ಟಿಗಳಲ್ಲಿ ನಡೆಯುತ್ತದೆ.

"ನೀವು ದೊಡ್ಡೋರು ಇದೆಲ್ಲ ಕೇಳಿ ನಗ್ತೀರಬಹುದು ಕೊಳಗೇರಿ ಹಟ್ಟಿ ಅಂದ್ರ ನರಕ ಅಂತ ತಿಳ್ಕೊಂಡಿದ್ದೀರಿ – ಹಂಗೇನಿಲ್ಲ ಸಾರ್ ವರ್ಸಕ್ಕೊಂದು ಸಲ ಮುಂಗಾರು ಅದ ಕೂಡ್ಲೆ ಸಾಕಷ್ಟು ಜನ ವಾಂತಿ ಬೇದಿ, ಹತ್ಕೊಂಡು ಸಾಯ್ತಾರೆ. ಆಗ ಸಾರ್ ಜನ ಹೆಣಕ್ಕೆ ಅಲಂಕಾರ, ಮೆರವಣಿಗೆ, ತಿಥಿ, ನೆಂಟರಿಸ್ಟರು ವಕ್ಕರಿಸೋದು ಎಲ್ಲ ಇರುತ್ತೆ ಹೀಗಾದಾಗ್ಗೆ ಹೊರಗಿನ ಜನರ ವಾಸನೆ ನಮಗೆ ಗೊತ್ತಾಗೋದು ಅಳ್ತಾ ಅಳ್ತಾ ಶುರುವಾದ ಮರಣದ ಇಪರ್ಯಾಸ ಊಟ ಮಾಡಿ ನಗ್ತಾ ನಗ್ತಾ ಮುಗಿದು ಹೋಗುತ್ತೆ ಸಾಗ್ರಾಜ ಡಾಕ್ಟ್ರು, ರಾಜಕಾರಣಿಗಳು ಬಂದು ಕಾಲರಾ ಕಾಲರಾ ಅಂತ ಹೇಳಿ ಸೂಜಿ ಚುಚ್ಚಿಸ್ತಾರೆ. ಒಂಗಾರು ಮಳೆ ಬಂದು ಗುಡ್ಸೆಲ್ಲ ನೆಂದು, ಸೆಗಣಿ, ಉಚ್ಚೆ,

ಗಲೀಜೆಲ್ಲ ಕೊಚ್ಚಿ ಹೋಗಿ ಅಪ್ಪಿಪ್ಟೆ ಕ್ಲೀನಾಗುತ್ತೆ, ಸಂಪಿಗೆ, ಮಲ್ಲಿಗೆ, ಬಾಣಂತಿ ವಾಸನೆ, ರಾಮಿ, ಜಯ ವಾಸನೆ ಹೆಚ್ಚಾಗುತ್ತೆ.....ನಾನು ಬಲೆ ಹುಸಾರಾಗಿ ನೋಡಿದೇನೆ ಸಾರ್, ಆ ನಡುವಿನ ಗುಡ್ಡಿಸ ದರ್ಜಿ ಸಿವಾಜಿ ಸತ್ತಾಗ ಚನ್ನ ಪಟ್ಟಣದ, ಅವನ ನಾದ್ನಿ ನಮ್ಮ ಹಟ್ಟಿಗ ಕಾಲಿಟ್ಟ ಕೂಡ್ಲೆ ಮೂಗು ಎತ್ತರಿಸಿ ಮುಸ ಮುಸ ಅಂತಗಾಳಿ ತಗಾಂಡ್ ಮುಗುಳ್ನಕ್ಕಿದ್ಲು ಆ ನಾದ್ನಿ ಲಕ್ಸ್ಮಿ ಇಲ್ಲೆ....”[೧೨] [ಪುಟ ೩೨].

ಎಂಬ ಮಾತಿನಲ್ಲಿ ಕೊಳಗೇರಿಯ ಎಲ್ಲಾ ಸಾಂಸ್ಕೃತಿಕ ಆಚರಣೆಗಳ ಪರಿಚಯವು ಆಗುತ್ತದೆ. ಜೀವನಾವರ್ತನದ ಒಂದು ಹಂತವಾದ ಋತುವಿನ ಸಂದರ್ಭದಲ್ಲಿ ಆಚರಿಸುವ ಕ್ರಿಯೆಯನ್ನು ವಿಜೃಂಭಣೆಯಿಂದ ನಡೆಸುವುದರ ಮೂಲಕ ಪದ್ದಿ ತನ್ನ ತಂಗಿಯನ್ನು ಸಿನಿಮಾ ಲೋಕದ ಜನರಿಗೆ ಪರಿಚಯ ಮಾಡುವ ಪ್ರಯತ್ನ ಮಾಡುತ್ತಾಳೆ. ಇಲ್ಲಿ ಆಧುನಿಕತೆಯ ಸಿನಿಮಾ ಲೋಕ ಸಾಂಪ್ರದಾಯಿಕ ಆಚರಣೆಯನ್ನು ಮುಖಾ ಮುಖಿಯಾಗಿಸುವುದನ್ನು ಕಾಣಬಹುದು.

'ಬಿರುಕು' ಕಾದಂಬರಿಯಲ್ಲಿ ನಗರದ ಒಳಗೆ ಶ್ರೀಮಂತ ವರ್ಗದವರು ನಡೆಸುತ್ತಿರುವ ಪಾರ್ಟಿಯ ಸಡಗರ ಅಲ್ಲಿಗೆ ಒತ್ತಾಯ ಪೂರ್ವಕವಾಗಿ, ಅಲ್ಲಿಗೆ ಹೋಗಲೆಬೇಕಾದ ಅನಿವಾರ್ಯತೆಗಳನ್ನು ಶಾಂತನಲ್ಲಿ ಕಾಣಬಹುದು. ಸಂಜೆಯಾಗುತ್ತಿದ್ದಂತೆ ವಾಕಿಂಗ್ ಹೊರಟ ನಾನಾ ರೀತಿಯ ಜನರ ಸಮೂಹ ಅಲ್ಲಿ ನಾನಾ ವ್ಯಾಪಾರ ಮಾಡಿ ಬದುಕುತ್ತಿರುವ ವಿಭಿನ್ನ ಜನರ ಗುಂಪು. ಈ ನೆಲೆಯಲ್ಲಿ 'ಬಿರುಕು' ಸಂಪೂರ್ಣವಾಗಿ ನಾಗರಿಕ ಸಂಸ್ಕೃತಿಯನ್ನು ಬಿಂಬಿಸುವಂತಾಗಿದೆ. ಎಲ್ಲ ಒತ್ತಡಗಳನ್ನು ಮೀರಿ ತನ್ನ ಸ್ವಂತ ಬದುಕನ್ನು ಕಂಡುಕೊಳ್ಳುವ ಶಾಂತಳಂತಹ ಸ್ತ್ರೀಯರ ಪರಿ ವಿಶಿಷ್ಟವಾದುದು.

ಹೀಗೆ ಲಂಕೇಶ್ ಕಾದಂಬರಿಯ ಆರ್ಥಿಕ, ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರ ಹೆಣ್ಣೊಬ್ಬಳು ಬದುಕಲೆ ಬೇಕೆನ್ನುವ ಉತ್ಸಾಹಕ್ಕೆ ಪೂರಕವಾಗಿ ನಿಲ್ಲುತ್ತದೆ.

ಒಟ್ಟಿನಲ್ಲಿ ಲಂಕೇಶ್ ಕಾದಂಬರಿಯಲ್ಲಿ ಬರುವ ಆರ್ಥಿಕ, ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕತೆಗೂ ಮತ್ತು ಸ್ತ್ರೀಯರ ಸ್ಥಾನಮಾನಗಳಿಗೂ ಇರುವ ಸಂಬಂಧವನ್ನು ಲಂಕೇಶ್ ತೀವ್ರವಾಗಿ ಚಿತ್ರಿಸಿದ್ದಾರೆ.

ಅಡಿ ಟಿಪ್ಪಣಿ

೧. ಮುಸ್ಸಂಜೆಯ ಕಥಾ ಪ್ರಸಂಗ.

ಪಿ. ಲಂಕೇಶ್

ಮೂರನೇ ಮುದ್ರಣ ೧೯೮೭

ಪತ್ರಿಕೆ ಪ್ರಕಾಶನ.

೨. ಅಕ್ಕ.

ಪಿ. ಲಂಕೇಶ್

ಎರಡನೇ ಮುದ್ರಣ ೧೯೯೪

ಪತ್ರಿಕೆ ಪ್ರಕಾಶನ.

೩. ಸ್ತ್ರೀವಾದ ನೆಲೆಗಳು ಮತ್ತು ನಿಲುವುಗಳು.

ಡಾ. ಕಿಶೋರಿ ನಾಯಕ್ ಕೆ.

ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ.

೪. 'ಬಿರುಕು'.

ಪಿ. ಲಂಕೇಶ್

ಎರಡನೇ ಮುದ್ರಣ ೧೯೯೬

ಪತ್ರಿಕೆ ಪ್ರಕಾಶನ.

೫. ಮುಸ್ಸಂಜೆಯ ಕಥಾ ಪ್ರಸಂಗ.

೬. ಮುಸ್ಸಂಜೆಯ ಕಥಾ ಪ್ರಸಂಗ.

೭. ನಿಲುಮೆ.

ಲಂಕೇಶ್‌ರ ಕಾದಂಬರಿಗಳ ಮರು ಓದು ೭೭.

ಡಾ. ಸಬೀಹಾ ಭೂಮಿಗೌಡ

ಶಕ್ತಿ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್ ಬೆಂಗಳೂರು.

೮. ಮುಸ್ಸಂಜೆಯ ಕಥಾ ಪ್ರಸಂಗ.

೯. ಅದೇ.

೧೦. ಅಕ್ಕ.

೧೧. ಪಿ. ಲಂಕೇಶ್ – ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರು

ಪ್ರಧಾನ ಸಂಪಾದಕ – ಡಾ. ಪ್ರಧಾನ್ ಗುರುದತ್

ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೨. ಅಕ್ಕ.

ಅಧ್ಯಾಯ ೨

ಸ್ತ್ರೀ ಕೇಂದ್ರಿತವಾದ ಲಂಕೇಶ್ ಕಾದಂಬರಿಗಳ ಸ್ವರೂಪ

ಅಧ್ಯಾಯ ೨

ಸ್ತ್ರೀ ಕೇಂದ್ರಿತವಾದ ಲಂಕೇಶ್ ಕಾದಂಬರಿಗಳ ಸ್ವರೂಪ

ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡು ಬಂದ ಅಪರೂಪದ ಪ್ರತಿಭೆ ಪಿ.ಲಂಕೇಶ್. ಬಿರುಕು, ಮುಸ್ಸಂಜೆಯ ಕಥಾ ಪ್ರಸಂಗ, ಅಕ್ಕ ಕಾದಂಬರಿಗಳು ಲಂಕೇಶರ ಅಭೂತಪೂರ್ವ ಪ್ರತಿಭೆಯ ಫಲ. ಲಂಕೇಶರ ಅವ್ವ, ಅಕ್ಕ-ತಮ್ಮ ಕವನ, ಉಮಾಪತಿಯ ಸ್ಕಾಲರ್‌ಶಿಪ್‌ಯಾತ್ರೆ ಕಥೆ ಇವು ಒಂದು ಇನ್ನೊಂದರ ಬೆಳವಣಿಗೆಯಂತೆ ಕಾಣುತ್ತದೆ. ಇಲ್ಲಿ ಅವ್ವ, ಅಕ್ಕ, ಬದುಕುತ್ತಿರುವ ರೀತಿ ಪ್ರಮುಖವಾಗುತ್ತದೆ. ಉಮಾಪತಿಯ ಸ್ಕಾಲರ್‌ಶಿಪ್‌ಯಾತ್ರೆ ಎಂಬ ಕತೆಯಲ್ಲಿ ಗ್ರಾಮೀಣ ಹಿನ್ನೆಲೆಯಿಂದ ಬಂದ ಈರವ್ವ ಕೇಂದ್ರದಲ್ಲಿದ್ದಾಳೆ. ಗಂಡ ಸತ್ತ ನಂತರ ಇನ್ನೂ ಯೌವನಸ್ಥಳಾಗಿರುವ ಈಕೆಯನ್ನು ನಿಂಗೇಗೌಡನಂತಹ ಪ್ರಭಾವೀ ವ್ಯಕ್ತಿ ಬಳಸಿಕೊಳ್ಳುತ್ತಾನೆ. ಆದರೆ ತರಕಾರಿ, ಬೆಣ್ಣೆಯನ್ನು ಮಾರುತ್ತಾ ಜೀವನ ನಿರ್ವಹಿಸುವ ಈರವ್ವನ ಆತ್ಮಗೌರವಕ್ಕೆ ದಕ್ಕೆ ಬಂದಾಗ ನಿಂಗೇಗೌಡನ ವಿರುದ್ಧವೆ ತಿರುಗಿ ಬೀಳುತ್ತಾಳೆ. ಈ ರೀತಿಯಾಗಿ ಲಂಕೇಶರು ಎಪ್ಪತ್ತರ ದಶಕದಲ್ಲಿಯೇ ಸ್ತ್ರೀ ಸಂವೇದನೆಯನ್ನು ಕತೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಹಾಗೆಯೆ ಮೂರೂ ಕಾದಂಬರಿಗಳಲ್ಲಿಯೂ ಸ್ತ್ರೀ ಪ್ರಧಾನವಾಗಿ ಕಂಡು ಬರುತ್ತಾಳೆ. ಸ್ತ್ರೀ ಕೇಂದ್ರಿತ ಕಾದಂಬರಿಗಳ ಜೊತೆ ಸ್ತ್ರೀ ಸಂವೇದನೆಯುಳ್ಳ ಕತೆ, ಕವನಗಳನ್ನು ಬರೆದಿರುವ ಲಂಕೇಶರ ಸಾಹಿತ್ಯವನ್ನು ನೋಡುವಾಗ ಸಹಜವಾಗಿಯೇ ಅವರಿಗೆ ಸ್ತ್ರೀಯರ ಬಗ್ಗೆ ಅಪಾರ ಅನುಕಂಪ, ಪ್ರೀತಿ, ಕಾಳಜಿಗಳು ಇತ್ತು ಎಂಬುವುದರ ಅರಿವಾಗುತ್ತದೆ. ಹಾಗಾಗಿಯೇ ಅವರು ಬರೆದಿರುವ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು ಸೂಕ್ಷ್ಮ ಸಂವೇದನೆಯಿಂದ ಚಿತ್ರಿತವಾಗಿದೆ.

'ಮುಸ್ಸಂಜೆಯ ಕಥಾಪ್ರಸಂಗ' ದ ಕಂಬಳ್ಳಿ ನಗರಕ್ಕೆ ತೆರೆದುಕೊಳ್ಳುತ್ತಿರುವ ಅರೆಮಲೆನಾಡಿನ ಗ್ರಾಮೀಣ ಪ್ರದೇಶ. ಲಂಕೇಶರು ತಾವು ಹುಟ್ಟಿ ಬೆಳೆದ, ಬಾಲ್ಯದಿಂದ ಒಡನಾಡಿಕೊಂಡು ಬಂದ ಅರೆಮಲೆನಾಡಿನ ಗ್ರಾಮೀಣ ಪ್ರದೇಶವನ್ನು ಮತ್ತು ಅಲ್ಲಿ ತಾವು ಕಂಡು ಕೇಳಿದ ಸ್ತ್ರೀಯರ ಬದುಕನ್ನು 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

'ಅಕ್ಕ' ಲಂಕೇಶರ ಮತ್ತೊಂದು ಗಮನಾರ್ಹವಾದ ಕಾದಂಬರಿ. ಇದರ ಶೀರ್ಷಿಕೆಯಿಂದಲೆ ಕಾದಂಬರಿ ಸ್ತ್ರೀ ಕೇಂದ್ರಿತವಾಗಿದೆ ಎಂದು ಅರಿವಾಗುತ್ತದೆ. 'ಅಕ್ಕ ಬದುಕುತ್ತಿರುವ ಕೊಳಗೇರಿ ನಗರದ ವಿಕೃತಿಯ ಫಲ. ಅಲ್ಲಿನ ಅಕ್ಕನ ಬದುಕು, ನಗರ ವ್ಯವಸ್ಥೆಯ ಮೋಸಕ್ಕೆ ಸ್ವಾರ್ಥಕ್ಕೆ, ದುಷ್ಟತೆಗೆ ಹಿಡಿದ ಕೈಗನ್ನಡಿಯಂತಿದೆ. ನಗರದ ಜೊತೆಯಲ್ಲಿಯೇ ಅಸ್ತಿತ್ವವನ್ನು ಕಂಡುಕೊಳ್ಳುವ ಕೊಳಗೇರಿಯ ಬಗ್ಗೆ ಕೆಲವೊಂದು ಕತೆ, ಲೇಖನಗಳು ಹುಟ್ಟಿಕೊಂಡಿವೆ.

ಅನುಪಮಾ ನಿರಂಜನರ 'ಕೊಳಚೆ ಕೊಂಪಿನ ದಾನಿಗಳು' ಇದಕ್ಕೊಂದು ನಿದರ್ಶನ. ಇಲ್ಲಿ ಲೇಖಕಿ ನೇರವಾಗಿ ಕೊಳಚೆ ಪ್ರದೇಶದಲ್ಲಿನ ಕತೆಯನ್ನು ಬಂಡಾಯದ ನೆಲೆಯಲ್ಲಿ ಹೇಳುತ್ತಾರೆ. ಆದರೆ ಲಂಕೇಶರು ಕ್ಯಾತನ ಪಾತ್ರವನ್ನು ಇಟ್ಟುಕೊಂಡು ಆತನ ನಿರೂಪಣೆಯ ಮೂಲಕ ಆತ ಕೊಳಗೇರಿಯ ಒಬ್ಬ ಪ್ರತಿನಿಧಿಯಾಗಿ ಅಲ್ಲಿನ ಜನರ ಒಳ್ಳೆಯತನ-ಕೆಟ್ಟತನಗಳ ನಡುವೆಯೆ ಬದುಕು ಸಾಗಿಸುವ ಕತೆ ಹೇಳುತ್ತಾ ತನ್ನ ಅಕ್ಕನ ಬದುಕು ಬವಣೆಯನ್ನು ವಿವರಿಸುತ್ತಾನೆ. ಕ್ಯಾತನನ್ನು ಸಾಕುವ ಆತನ ಅಕ್ಕನೆ ಕಾದಂಬರಿಯ ಕೇಂದ್ರ ವಸ್ತು.

'ಬಿರುಕು' ವಿನಲ್ಲಿ ಬಸವರಾಜ ನಿರೂಪಿಸುವ ಶಾಂತ, ಸುವರ್ಣ, ಇಂದಿರಾರ ನಾನಾ ವ್ಯಕ್ತಿತ್ವವನ್ನು ಹೊರಗೆಡಹುತ್ತಾ ಲಂಕೇಶರು ಆಧುನಿಕ ವಿದ್ಯಾವಂತ ಸ್ತ್ರೀಯರ ಮನಸ್ಥಿತಿಯನ್ನು ಚಿತ್ರಿಸುತ್ತಾರೆ.

ಲಂಕೇಶರು ಪತ್ರಕರ್ತನಾಗಿ, ಸಿನಿಮಾ ನಿರ್ಮಾಪಕನಾಗಿ, ಸಾಹಿತಿಯಾಗಿ ಎಲ್ಲಾ ರಂಗಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡವರು. ಹಾಗಾಗಿ 'ಬಿರುಕು' ಕಾದಂಬರಿಯನ್ನು 'ಪಲ್ಲವಿ' ಎಂಬ ಹೆಸರಿನಲ್ಲಿ (ನಿರ್ದೇಶನ ಪಿ.ಲಂಕೇಶ್) ಹಾಗೂ ಅಕ್ಕ 'ದೇವೀರಿ' ಎಂಬ ಹೆಸರಿನಲ್ಲಿ, ಮುಸ್ಸಂಜೆಯ ಕಥಾ ಪ್ರಸಂಗ 'ಅಪ್ಪ' ಎಂಬ ಹೆಸರಿನಲ್ಲಿ [ನಿರ್ದೇಶನ ಕವಿತಾ ಲಂಕೇಶ್] ಸಿನಿಮಾ ಆಗಿ ರೂಪುಗೊಂಡಿದೆ.

ಇಲ್ಲಿ 'ಪಲ್ಲವಿ', 'ದೇವೀರಿ', 'ಅಪ್ಪ' ಎಂಬ ಶೀರ್ಷಿಕೆಯಿಂದ ರೂಪುಗೊಂಡ ಸಿನಿಮಾಗಳನ್ನು ನೋಡಿದಾಗ ಸ್ತ್ರೀಯನ್ನು ಕೇಂದ್ರವಾಗಿಟ್ಟುಕೊಂಡು ಸಿನಿಮಾಗಳು ರೂಪಿತವಾಗಿರುವುದು ಅರಿವಾಗುತ್ತದೆ. ಹಾಗಾಗಿ ಲಂಕೇಶರ ಮೂರೂ ಕಾದಂಬರಿಗಳು ಮುಖ್ಯವಾಗಿ ಸ್ತ್ರೀ ಕೇಂದ್ರಿತವಾದವುಗಳೆ ಆಗಿವೆ ಎಂಬುವುದು ಸ್ಪಷ್ಟವಾಗುತ್ತದೆ.

ಲಂಕೇಶರು ತಮ್ಮ ಕಾದಂಬರಿಯಲ್ಲಿ ಸ್ತ್ರೀಯ ಒಳ್ಳೆಯತನ-ಕೆಟ್ಟತನಗಳನ್ನು ಎಲ್ಲ ನೆಲೆಯಲ್ಲಿ ಹೊರಗೆಡುಹುತ್ತಾರೆ. ಸ್ತ್ರೀಯರ ಬಾಹ್ಯ ಸೌಂದರ್ಯ, ಅಂತರಿಕ ಸ್ವರೂಪ, ಧೈರ್ಯಗಳನ್ನು ಅನಾವರಣಗೊಳಿಸುತ್ತಲೆ ಗಂಡಸರ ಅಹಂಕಾರ, ದರ್ಪಗಳನ್ನು ಸ್ತ್ರೀಯ ಎದುರಿಗೆ ತೀರಾ ಕಳಪೆಯಾಗಿ ಚಿತ್ರಿಸುತ್ತಾರೆ ಈ ಮೂಲಕ ಸ್ತ್ರೀ ಪಾತ್ರವನ್ನು ಎತ್ತಿ ಹಿಡಿಯುತ್ತಾರೆ.

'ಮುಸ್ಸಂಜೆಯ ಕಥಾ ಪ್ರಸಂಗ' ದಲ್ಲಿ ಭರ್ಮಣ್ಣ ತನಗೆ ತಪ್ಪು ಲೆಕ್ಕ ಹೇಳಿ ಮೋಸ ಮಾಡುತ್ತಿರುವುದು ರಂಗವ್ವನ ಅರಿವಿಗೆ ಬಂದಾಗ, ತಾನು ಭದ್ರತೆಯ ದೃಷ್ಟಿಯಿಂದ ಕೂಡಿಟ್ಟ ಹಣವನ್ನು ತೆಗೆದುಕೊಂಡು ಹೋಗಲು ಬರುತ್ತಾಳೆ. ಆದರೆ ಭರ್ಮಣ್ಣ ಅವಳ ಬಡ್ಡಿ ವ್ಯವಹಾರದಿಂದಾಗಿ ಅವಳಿಗೆ ಹಣ ಕೊಡಬೇಕಾದವರು ಹೆದರಿ ಮೆಶಿನ್‌ಗೆ ಬರುವುದಿಲ್ಲವಾದ್ದರಿಂದ ತನ್ನ ಆದಾಯ ಕಡಿಮೆಯಾಗಿದೆಯೆಂದು ಹೇಳಿದಾಗ ರಂಗವ್ವ "ಹಂಗೆಲ್ಲ ಮಾತಾಡಿದ್ರೆ ನಿನ್ನ ಕಚ್ಚೆ ಹರಿದು ಎಳೆದು ಬೀದ್ಯಾಗ ಮೆರವಣಿಗೆ ಮಾಡಿಸೇನು, ಕೊಳಕು ಮುಂಡೇ ಮಗನೇ, ನನಗೆ ಕೊಡೋದನ್ನ ಕೊಟ್ಟು ಮುಂದಿನ ಮಾತಾಡಲೆ"[೧] [ಪು.ಸಂ.೧-೨]

ಎಂದು ಗದರಿಸಿದಾಗ ಭರ್ಮಣ್ಣ ಆಕೆಯ ಮಾತುಗಳನ್ನು ಕೇಳಿ ಎದುರುತ್ತರಿಸುತ್ತಾನೆ. ಆತನ ಎಲ್ಲಾ ಮಾತುಗಳಿಗೂ ತೀಕ್ಷ್ಣವಾಗಿ ಉತ್ತರಿಸುವ ಅವಳ ಮಾತುಗಳಿಗೆ ಸಂಪೂರ್ಣವಾಗಿ ಒಳಗೊಳಗೆ ಹೆದರುವ ಭರ್ಮಣ್ಣ ಎಲ್ಲ ಹಣವನ್ನು ನೀಡುತ್ತಾನೆ. ಭರ್ಮಣ್ಣ ಮಾತ್ರನಲ್ಲದೆ ಬೂಸಿ, ರಾಚ, ಸಣ್ಣೀರಪ್ಪ ಮುಂತಾದ ಎಲ್ಲ ಗಂಡಸರು ರಂಗವ್ವನ ರೌದ್ರತೆಗೆ ಹೆದರುತ್ತಿದ್ದರು. ಆಕೆಯಲ್ಲಿ ತಲೆ ಎತ್ತಿ ಮಾತನಾಡುವ ಧೈರ್ಯ ಯಾರಿಗೂ ಇರುತ್ತಿರಲಿಲ್ಲ. ಹಣ ಕಳೆದುಹೋದ ವಿಚಾರವಾಗಿ ರಾಮಿ ಮತ್ತು ರುದ್ರಿಯರಿಗೆ ಜಗಳವಾದಾಗ, ಭರ್ಮಣ್ಣನನ್ನು ಮಧ್ಯೆ ಪ್ರವೇಶ ಮಾಡಲು ಹೇಳುವ

ರಾಮಿ ಆತ ಬರದಿದ್ದಾಗ ಅವನ ಅಂಗಿ ಹಿಡಿದು ಎಳೆದು ಕರೆಯುತ್ತಾಳೆ. ಹೀಗೆ ಭರ್ಮಣ್ಣನು ಹೆಂಡತಿಯರ ಎದುರಿಗೆ ಅಸಹಾಯಕ ಗಂಡನಾಗುತ್ತಾನೆ.

ಹಾಗೆಯೇ ಸಾವಂತ್ರಿ ತಾನು ಮೆಚ್ಚಿ ಪ್ರೀತಿಸಿರುವ ಬ್ಯಾಡರ ಮಂಜನು ಸಾವಂತ್ರಿಯಲ್ಲಿ ಪಣ ಕೇಳಿದಾಗ ಆತನಲ್ಲಿ ಯಾಕೆ ಎಂದು ಪ್ರಶ್ನಿಸುತ್ತಾಳೆ ನಂತರ ಮಾತಿಗೆ ಮಾತು ಬೆಳೆದು ಮಂಜ "ಹುಚ್ಚು ಲೌಡಿ ಅಲ್ಲವಾ"[೨] [ಪು.ಸಂ.೪೮]

ಎಂದು ಬೈದಾಗ ಅದನ್ನು ಕೇಳಿ ತಕ್ಷಣವೆ ಸಾವಂತ್ರಿ ಅಲ್ಲೆ ಬಿದ್ದಿದ್ದ ದಬ್ಬೆ ತೆಗೆದುಕೊಂಡು ಮಂಜನಿಗೆ ಕೆನ್ನೆಯಲ್ಲಿ ರಕ್ತ ಬರುವ ಹಾಗೆ ಹೊಡೆದಿದ್ದಳು.

ಆದರ್ಶವಿಲ್ಲದ ಪ್ರೇಮಿಯಾಗಿ ಸಾವಂತ್ರಿ ಕಂಡು ಬರುತ್ತಾಳೆ. ಪ್ರೇಮಿಗಳಲ್ಲಿ ಕಂಡು ಬರುವ ಪ್ರಣಯ, ಪ್ರೀತಿಯ ಮಾತುಗಳಿದ್ದರೂ ಕಲ್ಪನಾ ಪ್ರಪಂಚದಲ್ಲಿ ವಿಹರಿಸುವ ಭಾವೀ ಬದುಕಿನ ಬಗ್ಗೆ ಕನಸು ಕಾಣುವ ಮಂಜ ಸಾವಂತ್ರಿಯನ್ನು ಕಾಣುವುದಿಲ್ಲ, ಬದಲಿಗೆ ಜಗಳವಾಡುತ್ತ ಇರುವ ಪ್ರೇಮಿಗಳಾಗಿ ಕಂಡುಬರುತ್ತಾರೆ.

'ಅಕ್ಕ' ಕಾದಂಬರಿಯಲ್ಲಿ ಖಡವಾ ನ ಕೆನ್ನೆಗೆ ಹೊಡೆದು ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾಗ ಖಡವಾ ಅಲ್ಲಿ ನಿಲ್ಲದೆ ಓಡಿ ಹೋಗುತ್ತಾನೆ. ಖಡವಾ ಮತ್ತು ಸಿಲ್ವರಿಗೆ ಜಗಳ ನಡೆದು ಸಿಲ್ವಾನಿಗೆ ಹೆದರಿ ಖಡವಾ, ನಾಗ್ರ ದೇವೀರಿಯ ಗುಡಿಸಲಿನಲ್ಲಿ ಅಡಗಿಕೊಂಡಿದ್ದಾಗ ಸಿಲ್ವ ಬಂದು, ಖಡವಾ ನಾಗ್ರರಿಗೆ ಹೊಡೆಯುತ್ತಾನೆ ಎಂದು ನಿರೂಪಿಸುವ ಕ್ಯಾತ ತನ್ನಕ್ಕ ಅಲ್ಲಿನ ಸನ್ನಿವೇಶಕ್ಕೆ ಸ್ಪಂದಿಸುವುದನ್ನು ಹೀಗೆ ಹೇಳುತ್ತಾನೆ. "ಸಿಲ್ವ ಅಂತ ಕಾಣುತ್ತೆ, ಖಡವನಿಗೆ ನಿಂತ ತಾವಿಂದಲೇ ಅಡಿ ಜಾಡಿಗೆ ಇಕ್ಕಿದ್ದ. ಖಡವಾ ತಪ್ಪಿಸ್ಕೊಂಡು ಮೂಲೆಗೆ ಹೋದ. ಅಲ್ಲಿ ದೇವೀರಿ ನಿಂತಿದ್ಲು, ತಮಿಳು ಸಿನಿಮಾದಲ್ಲಿ ಶ್ರೀದೇವಿ, ಲತಾ ಇವರೆಲ್ಲ ಡಿಶುಂ ನೋಡಲ್ಲವಾ ಸಾರ್, ಹಂಗೆ ನಿಂತು ಸಾಯೋಳಂಗೆ ಕಾಣ್ತಿದ್ಲು, ಖಡವಾನ ಕುತ್ತಿಗೆತಾವ ರಕ್ತ ಚಿಮ್ಮಿ ಬಂತು, ಮೂತಿ ಒಡೆದು ಸೋರ್ತು. ಸಿಲ್ವ ಕೊನೇ ನಾಲ್ಕು ಏಟುಕೊಟ್ಟು ದೇವೀರಿಯನ್ನು ತಿರುಗಿಸಿ ಕುಂಡೆಗೆ ಒದ್ದ. ಆಕೆ ಖಡವಾನ ಹಂಗೆ ಚೀರಿಕೊಳ್ಳದೆ ಹಿಂದಕ್ಕೆ ತಿರುಗಿ ಹೊಡೆಯಾಕೆ ಹೋದ್ಲು"[೩] [ಪು.ಸಂ.೪೮].

ಎಂಬಲ್ಲಿ ದೇವೀರಿಯ ಧೈರ್ಯ ಮತ್ತು ಸ್ಥೈರ್ಯವನ್ನು ನೋಡಬಹುದು. ಸಿಲ್ವನ ಹೊಡೆತದಿಂದ ತಪ್ಪಿಸಿಕೊಂಡು ಮೂಲೆಗೆ ಓಡಿಹೋಗುವ ಖಡವಾ ಮತ್ತೆ ಪೆಟ್ಟು ತಿಂದು ರಕ್ತ ಬರಿಸಿಕೊಳ್ಳುತ್ತಾನೆ. ಇದೇ ವೇಳೆಗೆ ಸಿಲ್ವ ದೇವೀರಿಗೆ ಒದ್ದಾಗ ಆತನಿಗೆ ಹೆದರದೆ ಚೀರಿಕೊಳ್ಳದೆ ಸಿಲ್ವನಿಗೆ ಹೊಡೆಯಲು ಹೋಗುತ್ತಾಳೆ, ಎಂಬಲ್ಲಿ ದೇವೀರಿಯ ಧೈರ್ಯ ಗಂಡಸಾದ ಖಡವಾನಿಗಿಂತಲೂ ಮಿಗಿಲಾದದ್ದು ಎಂದು ತೋರಿಸುತ್ತಾಳೆ. ಶಾಂತಳ ತಾಯಿ ಬಸವರಾಜುವಿನ ಹತ್ತಿರ ಸರಿಯುತ್ತಿದ್ದಾಗ ಬಸವರಾಜು ಆಕೆಯ ಬಾಹ್ಯ ಸ್ವರೂಪವನ್ನು ಹೀಗೆ ಹೇಳುತ್ತಾನೆ "ನನ್ನಷ್ಟು ದಪ್ಪವಿದ್ದಂತಿದ್ದ ತೋಳುಗಳು, ಎತ್ತರವಾದ ಕುತ್ತಿಗೆ, ಮೇಲೆ ಹರಡಿಕೊಂಡ ಮುಖ ನನ್ನನ್ನು ಪರೀಕ್ಷಿಸುತ್ತಿದ್ದ ಕಣ್ಣುಗಳು, ಹತೋಟಿ ಮೀರಿದ್ದ ಕೂದಲುಗಳು ದೊಡ್ಡ ತಿಮಿಂಗಿಲದ ಹಾಗೆ ಕಂಡಿದ್ದಳು"[೪]. [ಪು.ಸಂ.೧೭]

ಇವುಗಳ ಮುಂದೆ ಬಸವರಾಜುವಿನ ದೈಹಿಕ ಸ್ವರೂಪ ಕುಬ್ಜವಾದುದು ಆಗಿದೆ. ಹಾಗಾಗಿಯೇ ಬಸವರಾಜು ತಿಮಿಂಗಿಲನಿಗೆ ಹೆದರುತ್ತಾನೆ. ಕಾದಂಬರಿಯಲ್ಲಿ ಪ್ರಸ್ತಾಪವಾಗುವ ಈ ಸಂದರ್ಭಗಳನ್ನು ನೋಡುವಾಗ ಗಂಡಸರ ಅಹಂಕಾರ, ದರ್ಪಗಳು, ಸ್ತ್ರೀಯ ಎದುರಿಗೆ ಕಳಪೆಯಾಗುತ್ತದೆ ಎಂಬ ಮಾತಿಗೆ ಆಧಾರ ಸಿಗುತ್ತದೆ. ಈ ಮೂಲಕ ಲಂಕೇಶರು ಸ್ತ್ರೀಯರ ಅಸ್ತಿತ್ವಕ್ಕೆ ಮೆರುಗನ್ನು ಗಟ್ಟಿತನವನ್ನು ನೀಡುತ್ತಾರೆ.

ಲಂಕೇಶರ ಮುಸ್ಸಂಜೆಯ ಕಥಾ ಪ್ರಸಂಗ ಮತ್ತು ಅಕ್ಕ ಈ ಎರಡು ಕಾದಂಬರಿಗಳು ಸ್ತ್ರೀಯರ ಸುತ್ತಲೂ ಹೆಣೆಯಲ್ಪಟ್ಟಿದೆ. ಅಲ್ಲಿ ನಡೆಯುವ ಮುಖ್ಯ ಅಮುಖ್ಯ ಘಟನೆಗಳಿಗೆ ಸ್ತೀಯರು ಪ್ರಮುಖ ಕಾರಣರಾಗುತ್ತಾರೆ. ಕಂಬಳ್ಳಿಯಲ್ಲಿ ನಿರ್ಮಾಣಗೊಂಡಿರುವ ಸಾಮಾಜಿಕವಾದ ಸುಖ-ದುಃಖಗಳಿಗೆ ಹಾಗೂ ಜಾತಿ ಧರ್ಮಗಳ ನಡುವೆ ನಡೆಯುವ ಗಲಭೆ, ಅರಾಜಕತೆ, ರಾಜಕಾರಣ ಪ್ರೇಮಗಳಲ್ಲಿ ರಂಗವ್ವ, ಸಾವಂತ್ರಿ, ಹನುಮಿ, ರಾಮಿ, ರುದ್ರಿಯರು ಪ್ರಮುಖರಾಗುತ್ತಾರೆ.

ರಂಗವ್ವ, ಭರ್ಮಣ್ಣನಲ್ಲಿ ತನ್ನ ಎಲ್ಲ ಹಣವನ್ನು ಕೂಡಿಟ್ಟಿರುತ್ತಾಳೆ. ಆದರೆ ಭರ್ಮಣ್ಣ ಅದನ್ನು ಓಂತಿರುಗಿಸದೆ ತನ್ನದೇ ಆದ ಯೋಜನೆಯನ್ನು ರೂಪಿಸಿಕೊಂಡಿರುತ್ತಾನೆ. "ರಂಗವ್ವ ಮುಂದಿನ ಅಥವಾ ಆದರ ಮುಂದಿನ ಮಳೆಗಾಲದಲ್ಲಿ ಪಲ್ಟಿ ಹೊಡೆದರೆ ಅವಳ ಮಗಳಿಗೆ ಸುಳ್ಳು ಲೆಕ್ಕ ಒಪ್ಪಿಸಿ,

ಅವಳಿಂದ ಮೈ ಬೇಕಾದರೆ ಹೆಚ್ಚು ಹಣ ಕೊಟ್ಟು, ಮೈ ಬೇಡವಾದರೆ ಕಡಿಮೆ ಹಣ ಕೊಟ್ಟು ತನ್ನ ಸುಖ ಸಂತೋಷ ಬೆಳೆಸಿಕೊಳ್ಳುವ ಕನಸು ಕಟ್ಟಿದ್ದ"[೫]. [ಪು.ಸಂ.೧೮-೧೯]

ಆದರೆ ರಂಗವ್ವನ ಗಲಾಟೆಯಿಂದ ಆತನಿಗೆ ನಿರಾಶೆಯಾಗಿ ಕನಸುಗಳೆಲ್ಲ ಭಗ್ನವಾಗುತ್ತದೆ. ಆ ಕಾರಣದಿಂದ ವೀರಶೈವ ಪಂಗಡಕ್ಕೆ ಸೇರಿದ ರಂಗವ್ವನ ಮಗಳು ಸಾವಂತ್ರಿ ಬ್ಯಾಡರ ಮಂಜನ ಜೊತೆ ಪ್ರೇಮ ವ್ಯವಹಾರವನ್ನು ಇಟ್ಟುಕೊಂಡಿದ್ದು ವೀರಶೈವ ಪಂಗಡಕ್ಕೆ ಅವಮಾನ ಮಾಡಿದ್ದಾಗಿ ದೂರುತ್ತಾನೆ. ಪರಸ್ಪರ ಬಾಂಧವ್ಯಗಳು ಸರಿಯಾಗಿರುವವರೆಗೂ ಮಧ್ಯ ಬಾರದಿದ್ದ ಮತ ಧರ್ಮಗಳು ರಂಗವ್ವ ಮತ್ತು ಸಾವಂತ್ರಿಯರನ್ನು ಭ್ರಷ್ಟರನ್ನಾಗಿ ಮಾಡುವ ಯೋಚನೆಯಿಂದ ದ್ವೇಷ ಸಾಧನೆಗಾಗಿ ಹುಟ್ಟಿಕೊಳ್ಳುತ್ತದೆ. ಭರ್ಮಣ್ಣನ ಒಡೆದು ಆಳುವ ನೀತಿ ಕಂಬಳ್ಳಿಯಲ್ಲಿ ಹಲವು ಪಲ್ಲಟಗಳಿಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಆತ ಲಿಂಗಾಯಿತರನ್ನು, ಇತರರನ್ನು ರಂಗವ್ವನಿಗೆ ಹಣ ಪಾವತಿ ಮಾಡದಂತೆ ತಡೆಯುತ್ತಾನೆ. ಆ ಮೂಲಕ ಅವರೆಲ್ಲರನ್ನು ಒಲಿಸಿಕೊಂಡು ರಂಗವ್ವನನ್ನು ಜಾತಿ ಭ್ರಷ್ಟಳಾಗಿಸುವ ಯೋಜನೆಯನ್ನು ಭರ್ಮಣ್ಣ ರೂಪಿಸುತ್ತಾನೆ. ಈತನಿಗೆ ರಾಚ, ಬೂಸಿಬಸ್ಯ, ಶಿವಾಜಿ ನೆರವಾಗುತ್ತಾರೆ. ವೀರಶೈವ ಮತದ ಬಗ್ಗೆ ಅದರ ಉಳಿವಿನ ಬಗ್ಗೆ ಕಾಳಜಿವಹಿಸಿರುವ ಹಾಲುಮತದ ಸ್ವಾಮಿ ಶ್ರೀ ಮನ್ನಿರಂಜನ ಶಾಂತೇಶ ಮಹಾಸ್ವಾಮಿ ಕಂಬಳ್ಳಿ ಪ್ರವೇಶ ಮಾಡಲು ಮುಖ್ಯ ಕಾರಣ ರಂಗವ್ವನೆ ಆಗಿದ್ದಾಳೆ. ಸಾವಂತ್ರಿ ಮತ್ತು ಬ್ಯಾಡರ ಮಂಜನಿಗೆ ಮದುವೆ ಮಾಡುವುದರ ಮೂಲಕ ಸಮಾಜದ ವಿಘಟನೆಗೆ ಕಾರಣವಾಗುತ್ತಾಳೆ ಎಂದು ತಿಳಿದು ಕಂಬಳ್ಳಿಗೆ ಬರುತ್ತಾರೆ. ಇದು ಕಾದಂಬರಿಯ ಪ್ರಮುಖ ಘಟನೆಗಳಲ್ಲಿ ಒಂದು. ಈ ಘಟನೆಗೆ ರಂಗವ್ವನೆ ಕಾರಣ ಎಂಬುವುದು ಮುಖ್ಯ. ಭರ್ಮಣ್ಣನ ವೈಯಕ್ತಿಕ ಆಸೆಗಳಿಗೆ ರಂಗವ್ವ ಸವಾಲಾದಾಗ ಅದು ದ್ವೇಷವಾಗಿ ಪರಿವರ್ತನೆಗೊಂಡು ಸಮಾಜದ ನಾಶಕ್ಕೆ ಕಾರಣವಾಗುತ್ತದೆ. ಇದೇ ರೀತಿಯಾಗಿ ಕಂಬಳ್ಳಿಯಲ್ಲಿ ನಡೆಯುವ ಶಿವಾಜಿ-ಸಿದ್ದನ ನಡುವಿನ ಕುಸ್ತಿ ಪಂದ್ಯಾವಳಿಗೂ ಪರೋಕ್ಷವಾಗಿ ರಂಗವ್ವನೆ ಕಾರಣವೆನಿಸುತ್ತಾಳೆ. ಶಿವಾಜಿಯ ಪಕ್ಷಪಾತಿಗಳಾದ ಕೆಲವು ಜನ ಶಿವಾಜಿ ಗೆದ್ದರೆ ರಂಗವ್ವನನ್ನು ಊರು ಬಿಡಿಸಿ ಓಡಿಸುವ ಯೋಚನೆಯನ್ನು ಮಾಡಿದ್ದರು. ಇದೇ ವಿಷಯವನ್ನು ರಂಗವ್ವನಲ್ಲಿ ಪ್ರಸ್ತಾಪ ಮಾಡಿ ಸಣ್ಣೀರಪ್ಪ ಹಣ ವಸೂಲಿ ಮಾಡುವುದು ಕಂಡು ಬರುತ್ತದೆ ಹೀಗೆ

ಕಂಬಳ್ಳಿಯ ಜನರ ಮನೋರಂಜನೆ ಹಾಗೂ ಕೆಲವು ಗುಂಪುಗಳ ಹಿತಾಸಕ್ತಿಯಿಂದ ಏರ್ಪಡುವ ಕುಸ್ತಿ ಪಂದ್ಯಾವಳಿಗೆ ರಂಗವ್ವನಂತಹ ಸಾಮಾನ್ಯ ಹೆಂಗಸು ಕಾರಣಳಾಗುತ್ತಾಳೆ.

'ಅಕ್ಕ' ಕಾದಂಬರಿಯ ದೇವೀರಿಯ ತಮ್ಮನ ಬದುಕಿನ ಎಲ್ಲ ತಿರುವುಗಳಿಗೂ ಆತ ಮೆಚ್ಚುವ, ತೆಗಳುವ ದೇವೀರಿ, ಪದ್ದಿ, ಸಂಪೂರ್ಣಮ್ಮ ಕಾರಣವಾಗುತ್ತಾರೆ. ದೇವೀರಿ, ಖಡವಾ, ನಾಗ್ರ ಮತ್ತು ಇವರ ಎದುರಾಳಿಯಾದ ಸಿಲ್ವರ ನಡುವಿನ ವೈಷಮ್ಯಗಳಿಗೆ ಕಾರಣಳಾಗುತ್ತಾಳೆ. ರಾಮಪ್ಪ ಮತ್ತು ನರಸಿಂಹ ಮೇಸ್ತ್ರಿ ಬಂದು ಗಂಟೆಗಳ ಕಾಲ ಕೂತು, ಚರ್ಚೆ ಮಾಡಿ ಕೊಳಗೇರಿಗೆ ಇನ್ನೊಂದು ಬಾವಿ, ನಲ್ಲಿ ತೋಡಿಸುವ ಶಪಥ ಮಾಡಲು ದೇವೀರಿಯ ಹಟ್ಟಿ ಕಾರಣವಾಗುತ್ತದೆ. ಈ ಮೂಲಕ ದೇವೀರಿ ಆ ಸಾಮಾಜಿಕ ಪರಿಸರದ ಮೂಲಭೂತ ಸಮಸ್ಯೆಗಳ ನಿವಾರಣೆಗೆ ಅವಳ ಮೇಲಿನ ಆಸೆಯೂ ಕಾರಣವಾಗುತ್ತದೆ ಎಂದು ಧನಾತ್ಮಕವಾಗಿ ನಾವು ಯೋಚನೆ ಮಾಡಿದರೂ ಕೂಡಾ ಹೆಣ್ಣನ್ನು ರಾಮಪ್ಪನಂತಹ ರಾಜಕೀಯ ವ್ಯಕ್ತಿಗಳು ದುರುಪಯೋಗ ಮಾಡಿಕೊಳ್ಳುವುದು ರಾಜಕೀಯ ವ್ಯವಸ್ಥೆಯ ವಿಪರ್ಯಾಸವಾಗಿ ಕಂಡು ಬರುತ್ತದೆ. ಕೊನೆಗೆ ಕ್ಯಾತ ಬಹಳವಾಗಿ ನಂಬಿಕೊಂಡು ಬಂದಿದ್ದ ದೇವೀರಿ ಕ್ಯಾತನನ್ನು ಬಿಟ್ಟು ಹೋದಾಗ ಅನಾಥನಾದ ಕ್ಯಾತನಿಗೆ ಪದ್ದಿ ಧೈರ್ಯ ಹೇಳಿ ರಾಮಪ್ಪನಲ್ಲಿಗೆ ಕರೆದುಕೊಂಡು ಹೋಗಿ ಆತನ ಜೀವನ ನಿರ್ವಹಣೆಗೆ ಕ್ಲಾರ್ಕ್ ಕೆಲಸ ಕೊಡಿಸುತ್ತಾಳೆ. ಮುಂದೆ ಗತಕಾಲವನ್ನು ಮೆಲುಕು ಹಾಕುತ್ತಾ ಹೊಸ ಹೊಸ ಆಲೋಚನೆಯತ್ತ ಮನಸ್ಸನ್ನು ಹೊರಳಿಸಲು ಕ್ಯಾತನ ಸುತ್ತಮುತ್ತಲಿನ ಸ್ತ್ರೀಯರು ಕಾರಣರಾಗಿದ್ದಾರೆ. ಹೀಗೆ ಕಾದಂಬರಿಯಲ್ಲಿನ ಕೆಲವು ಪ್ರಮುಖ ಘಟನೆಗಳಿಗೆ ಆಯಾಯ ಕಾದಂಬರಿಯಲ್ಲಿ ಕಂಡು ಬರುವ ಸ್ತ್ರೀಯರೆ ಕಾರಣರಾಗುತ್ತಾರೆ.

ಮಕ್ಕಳನ್ನು ಹೆತ್ತು-ಹೊತ್ತು ಸಾಕಿ ಸಲಹಿದ ತಾಯಿ ದೇವರಿಗೆ ~~ಕೇವಲಿಗೆ~~ ಸಮಾನ "ಜಗತ್ತಿನಲ್ಲಿ ಕೆಟ್ಟ ತಂದೆಯಿರಬಹುದು, ಆದರೆ ಕೆಟ್ಟ ತಾಯಿ ಇರಲು ಸಾಧ್ಯವೆ ಇಲ್ಲ" ಎಂಬ ಅನುಭವೋಕ್ತಿ ತಾಯಿಯ ಮಹತ್ವವನ್ನು ಸಾರುತ್ತದೆ. ಮಗುವಿನ ಸುಖ ದುಃಖಗಳಿಗೆ ಎಂತಹ ಸಂದರ್ಭದಲ್ಲೂ ಯಾವ ತ್ಯಾಗಕ್ಕೂ ಸಿದ್ದಳಾಗಿರುವ ತಾಯಿ ಪೂಜ್ಯನೀಯಳು. ತಾಯಿಯಲ್ಲಿ ಮೇಲ್ವರ್ಗ-ಕೆಳವರ್ಗ ಎಂಬ ಯಾವ ಭೇದ ಭಾವವೂ ಇಲ್ಲದೆ ಎಲ್ಲ ತಾಯಿಯಂದಿರ

ಸಂವೇದನೆಗಳು ಏಕಮುಖಿಯಾಗಿರುವುದು ವಿಶೇಷ. ತಾಯಿಯ ಬಗ್ಗೆ ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ಅನೇಕ ಕಥೆ, ಕವನ, ನಾಟಕಗಳು ಹೊರ ಬಂದಿವೆ ಹಾಗೆಯೇ ಲಂಕೇಶರಿಗೂ ತಾಯಿಯ ಬಗ್ಗೆ ವಿಶೇಷ ಅಭಿಮಾನ ಅವರ 'ಅವ್ವ' ಕವನ ಇದಕ್ಕೊಂದು ನಿದರ್ಶನ. ಅಲ್ಲದೆ ಉಮಾಪತಿಯ ಸ್ಕಾಲರ್‌ಶಿಪ್‌ಯಾತ್ರೆಯಲ್ಲಿಯೂ ಕೂಡ 'ಅವ್ವ' ಕವನದಲ್ಲಿನ ತಾಯಿಯ ಹೋಲಿಕೆ ಇರುವ ಅವ್ವನನ್ನು ಕಾಣಬಹುದು. ಆದರೆ ಸಾಹಿತಿಯಾಗಿರುವ ಲಂಕೇಶರು ತಾಯಿಯ ಬಸಿರು, ಹೆರಿಗೆ ಮುಂತಾದ ಬಗ್ಗೆ ಭಾವುಕರಾಗದೆ ತನ್ನ ತಾಯಿಯನ್ನೆ ಸ್ಫೂರ್ತಿಯಾಗಿಟ್ಟುಕೊಂಡು ಪಾಲನೆ ಪೋಷಣೆಯನ್ನು ಮಾಡುತ್ತ ಬದುಕಿಗಾಗಿ ದುಡಿಯುವ ತಾಯಂದಿರನ್ನು ಚಿತ್ರಿಸಿದ್ದಾರೆ. ಇವರ ಕಾದಂಬರಿಯಲ್ಲಿಯೂ ಕೂಡ ರಂಗವ್ವ, ಹನುಮಕ್ಕ, ಸಂಪೂರ್ಣಮ್ಮ ಮುಂತಾದ ತಾಯಂದಿರನ್ನು ಚಿತ್ರಿಸುತ್ತಾರೆ.

ಮಕ್ಕಳ ಪಾಲನೆಗೆ ಶ್ರಮಪಟ್ಟು ದುಡಿಯುತ್ತ ಹಣವನ್ನು ಸಂಪಾದಿಸಿ ಕೂಡಿಟ್ಟುಕೊಳ್ಳುವ ಈ ತಾಯಂದಿರು ಮಕ್ಕಳ ಭವಿಷ್ಯದ ಬಗ್ಗೆ ನಾನಾ ಕನಸು ಕಾಣುತ್ತಾರೆ. ಮಕ್ಕಳು ಕೆಟ್ಟದಾರಿ ಹಿಡಿದಾಗ ನಿಂದಿಸುತ್ತಾ ಹೊಡೆದು ಬಡಿಯುತ್ತಾರೆ. ನೆರೆಮನೆಯವರೊಂದಿಗೆ ಜಗಳ ಮಾಡಿ ತಮ್ಮ ಹಣ ಪಡೆದುಕೊಳ್ಳುತ್ತಾರೆ. ಲಂಕೇಶರ ಕಾದಂಬರಿಯಲ್ಲಿ ಬರುವ ರಂಗವ್ವ, ಹನುಮಕ್ಕ ಮುಂತಾದ ತಾಯಂದಿರ ವ್ಯಕ್ತಿತ್ವವನ್ನು ನೋಡಿದಾಗ ದೇವನೂರು ಮಹಾದೇವರ 'ಒಡಲಾಳ'ದ ಸಾಕವ್ವ ಕಣ್ಮುಂದೆ ಸುಳಿಯುತ್ತಾಳೆ. ಸಾಕವ್ವ ಇಡೀ ಕುಟುಂಬವನ್ನು ಸಾಕಿದ, ಸಾಕುತ್ತಿರುವ ಅವ್ವ. ಸಾಕವ್ವ ಸಾವಿಗೆ ಸಮೀಪಿಸುತ್ತಿರುವವಳು ಆದರೂ ಮಗ–ಸೊಸೆಯರಲ್ಲಿ ಜಗಳವಾಡುತ್ತಾಳೆ. ಕಾಳಕ್ಕನಿಗೆಂದು ಸೊಸೆ ತೆಗೆದಿಡುವ ನಾಲ್ಕು ಬೊಗಸೆ ಕಡಲೆಕಾಯಿಯಲ್ಲಿ ಒಂದು ಬೊಗಸೆ ತೆಗೆದು ಗುಡ್ಡೆಗೆ ಹಾಕುತ್ತಾಳೆ. ಕಳೆದುಹೋದ ಹುಂಜಕ್ಕಾಗಿ ಜಗಳವಾಡುತ್ತಾಳೆ. ತನಗೆ ಕೊಟ್ಟ ಆಹಾರವನ್ನು ಮಕ್ಕಳಿಗೆ ಹಂಚಿ ನಂತರ ತಾನು ತಿನ್ನುತ್ತಾಳೆ. ಇಲ್ಲೆಲ್ಲಾ ಸಾಕವ್ವನ ಪಾಲನೆ ಪೋಷನೆಯ ಅಂಶ ಎದ್ದು ಕಾಣುತ್ತದೆ. ಹಾಗೆಯೆ ರಂಗವ್ವನೂ ಕೂಡಾ ಮಗಳ ಬಗ್ಗೆ ಕನಸು ಕಾಣುತ್ತಾಳೆ. ಅಣೆಬಡ್ಡಿ ವ್ಯವಹಾರ ಮಾಡಿ ಹಣವನ್ನು ಕೂಡಿಟ್ಟುಕೊಳ್ಳುತ್ತಾಳೆ. ತನಗೆ ಮೋಸ ಮಾಡಲು ಹೊರಟವರ ವಿರುದ್ಧ ಜಗಳ ಕಾಯುತ್ತಾಳೆ. ಇದಕ್ಕೆ ಮುಖ್ಯ ಕಾರಣ ಸಾವಂತ್ರಿಯ ಮೇಲಿದ್ದ ಅದಮ್ಯ ಪ್ರೀತಿ.

"ಸಂಸಾರ, ಸಮಾಜ, ಪ್ರಭುತ್ವ ಒಟ್ಟಿನಲ್ಲಿ ಮಾನವನ ನಾಗರೀಕತೆ ಮತ್ತು ಸಂಸ್ಕೃತಿ ಪ್ರೇರಕವಾದ ಶಕ್ತಿಯೆಂದರೆ ಮಾನವನಲ್ಲಿರುವ ಪಾಲನೆಯ ಪ್ರವೃತ್ತಿ, ಸಾಮಾಜಿಕ ವ್ಯವಸ್ಥೆಯೊಂದು ವಿನಾಶಕಾರಿಯಾಗಿದೆಯೆಂದು ನಮಗೆ ಅನಿಸುವುದು. ಮನುಷ್ಯನಿಗೆ ಸಹಜವಾದ ಪಾಲನೆಗೆ ಅದು ಅಡ್ಡಿಯುಂಟು ಮಾಡಿದಾಗ ಮಕ್ಕಳನ್ನು ಬೆಳೆಸುವುದು, ಓದಿಸುವುದು, ವಂಶಾಭಿವೃದ್ಧಿಗೆ ಹಾತೊರೆಯುವುದು ಆಸ್ತಿಗಾಗಿ ಆಸೆ ಪಡುವುದು ಎಲ್ಲವುದಕ್ಕೂ ತಳದಲ್ಲಿರುವುದು ಪಾಲನೆಯ ಪ್ರವೃತ್ತಿಯೇ. ನಮ್ಮ ನೈತಿಕತೆಯ ಉಗಮವಿರುವುದು ಈ ಪಾಲನೆಯಲ್ಲೇ".[೬] [ಪು.ಸಂ.೫೩]

ಇಂತಹ ಪಾಲನೆಯ ಅಂಶ ಲಂಕೇಶರ ಕಾದಂಬರಿಯ ಕೆಲವು ಸ್ತ್ರೀಯರಲ್ಲಿರುವುದನ್ನು ಕಾಣಬಹುದು.

ರಂಗವ್ವ ತನ್ನ ಮಗಳಿಗೆ ಒಳ್ಳೆಯ ಗಂಡು ನೋಡಿ ಮದುವೆ ಮಾಡಬೇಕು ಎಂದು ಹಾಲು ಮಾರುತ್ತಾ ಆಣೆಬಡ್ಡಿ ವ್ಯವಹಾರ ನಡೆಸುತ್ತಾ ಹಣವನ್ನು ಕೂಡಿಡುತ್ತಾಳೆ. ಆದರೆ ಸಾವಂತ್ರಿ ಬ್ಯಾಡರ ಮಂಜನೊಂದಿಗೆ ಪಿಕ್ಚರ್ ಗೆ ಹೋಗಿ ಬಂದಾಗ ಮಗಳ ಪ್ರಾಯವನ್ನು ಹತೋಟಿಯಲ್ಲಿಡಲು ಸಾದ್ಯವಿಲ್ಲ ಎಂದು ಯೋಚಿಸುತ್ತಾಳೆ. "ಶಾಸ್ತ್ರೀ ಅವಳಿಗೊಬ್ಬ ಒಳ್ಳೆ ಅಳಿಯ ಸಿಗುತ್ತಾನೆಂದು ಭವಿಷ್ಯ ಹೇಳಿದ ಮೇಲೆ ಇನ್ನು ಭರ್ಮಣ್ಣನನ್ನು ನೆಚ್ಚಿ ಉಪಯೋಗವಿಲ್ಲವೆನಿಸಿತ್ತು. ಸಾವಂತ್ರಿಯನ್ನೇ ಲೆಕ್ಕದಲ್ಲಿ ತಯಾರಿ ಮಾಡಬೇಕು ಸುಖ ಪಟ್ಟರೆ ಹಣದಿಂದ ಮಗಳೇ ಸುಖ ಪಡಬೇಕು ಅನ್ನಿಸಿ ಕಾಲು ಕೆರೆದು ಭರ್ಮಣ್ಣನ ಹತ್ತಿರ ಜಗಳ ತೆಗೆದು ಲೆಕ್ಕ ಚುಕ್ತ ಮಾಡಿ ಇದ್ದ ಬದ್ದ ದುಡ್ಡನ್ನು ಕಿತ್ತುಕೊಂಡು ಬಂದಿದ್ದಳು" [೭] [ಪು.ಸಂ.೨೮]

ಹೀಗೆ ರಂಗವ್ವ ಮಗಳ ಭವಿಷ್ಯ ಜೀವನಕ್ಕಾಗಿ ಭರ್ಮಣ್ಣ ಬೂಸಿ ಮುಂತಾದವರೊಂದಿಗೆ ಜಗಳ ಕಾಯ್ದು ಹಣವನ್ನು ವಸೂಲಿ ಮಾಡುತ್ತಾಳೆ. ಮಂಜ ಸಾವಂತ್ರಿಯವರ ಪ್ರೇಮ ದೈಹಿಕ ಮಟ್ಟದವರೆಗೂ ಹೋದದ್ದನ್ನು ಕಂಡ ಸಣ್ಣೀರಪ್ಪನು, ಭರ್ಮಣ್ಣ, ಬೂಸಿ, ಶಿವಾಜಿ ಮುಂತಾದವರನ್ನು ಸೇರಿಸಿಕೊಂಡು ಅವರಿಬ್ಬರನ್ನು ಗಾಡಿಯಲ್ಲಿ ಕೂರಿಸಿ ಊರಿನದ್ದಕ್ಕೂ ಮೆರವಣಿಗೆ ಮಾಡುವಾಗ ಇಡೀ ಊರೆ ಇಬ್ಬರನ್ನು ಹೀಯಾಳಿಸುತ್ತಾ ಶಾಪ ಹಾಕುತ್ತಿತ್ತು. ಇಂತಹ ಸಂದರ್ಭದಲ್ಲಿ ರಂಗವ್ವ ಇಬ್ಬರನ್ನು ಗಾಡಿಯಿಂದ ಎಳೆದು ಕೆಳಗೆ ಹಾಕಿ ಉಡುಪನತ್ತ "ಏನೋರೆ, ಮಂತ್ರ ಹೇಳಿ ಮದ್ವೆ

ಮಾಡಿ ಕೊಡ್ರಿ ಈ ಬಾಡ್ಯ ಭರ್ಮನಮನಿಗೆ ಬೆಂಕಿ ಹಾಕ್ತೀನಿ' ಎಂದು ಹೇಳುತ್ತಾ ರಂಗವ್ವ ಬಾವಿಯಿಂದ ದೊಡ್ಡ ಕೊಡಪಾನದಲ್ಲಿ ನೀರು ಸೇದಿಕೊಂಡು ಸಾವಂತ್ರಿಯನ್ನು ಬಗ್ಗಿಸಿ ತಣ್ಣನೆ ನೀರನ್ನು ಅವಳ ಮೇಲೆ ಸುರಿದಳು ಹಾಗೆ ಇನ್ನೆರಡು ಕೊಡ ಸುರುವಿ ಅವಳೊಂದು ಚಿಕ್ಕ ಮಗುವೋ ಎನ್ನುವಂತೆ ಅವಳ ಕುಪ್ಪಸ ಸೀರೆ ಬಿಚ್ಚಿ ಅಪ್ಪಿಕೊಂಡು ಒಳಗೆ ಕರೆದುಕೊಂಡು ಹೋದಳು"[೮] [ಪುಟ ೩೫೧–೩೫೩]

ಎಂಬಲ್ಲಿ ತನ್ನ ಆತ್ಮಾಭಿಮಾನಕ್ಕೆ ಧಕ್ಕೆ ಬರುವಂತಹ ಕೆಲಸವನ್ನು ಮಾಡಿದಾಗಲೂ ಮಗಳನ್ನು ಕ್ಷಮಿಸಿ, ರಮಿಸುವ ಗುಣ ತಾಯ್ತನಕ್ಕೆ ಸೂಕ್ತ ನಿದರ್ಶನವಾಗುತ್ತದೆ. ಉಡುಪನಿಗೆ ರಂಗವ್ವ ಹೇಳುವ ಮಾತುಗಳಿಂದ ಮನುಷ್ಯನ ಸಣ್ಣತನದಿಂದ ಮನುಷ್ಯರು ಬ್ಯಾಡ –ವೀರಶೈವ ಆಗುತ್ತಾರೆಯೇ ಹೊರತು ಹುಟ್ಟಿನಿಂದ ಅಲ್ಲ ಎಂಬ ನಿಲುವಿಗೆ ಲಂಕೇಶರು ಬರುತ್ತಾರೆ. ಈ ಮೂಲಕ ಜಾತಿ ವ್ಯವಸ್ಥೆಯನ್ನು ಮೀರುತ್ತಾರೆ.

'ಮುಸ್ಸಂಜೆಯ ಕಥಾ ಪ್ರಸಂಗ'ದಲ್ಲಿ ದುರಂತವೆನಿಸಿಕೊಳ್ಳುವ ಪಾತ್ರ ಕರಿಯನದ್ದು, ಆಡಿಕೊಂಡು ಬೆಳೆಯಬೇಕಾಗಿರುವ ಹುಡುಗನನ್ನು ಕೆಲವರು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಆದ್ದರಿಂದ ತನ್ನ ವಯಸ್ಸಿಗೆ ಮೀರಿದ ಅನುಭವಗಳನ್ನು ಕರಿಯ ಪಡೆದುಕೊಳ್ಳುತ್ತಾನೆ. ಆಗ ಆತನ ತಾಯಿ ಹನುಮಕ್ಕ ತನ್ನ ಮಗ ಮಕ್ಕಳ ಹಾಗೆ ನಿದ್ರಿಸುತ್ತಿಲ್ಲ, ಆಟವಾಡುತ್ತಿಲ್ಲ, ಸಂತೋಷ ಪಡುತ್ತಿಲ್ಲ ಎಂಬುವುದರ ಅರಿವಾಗಿ ಮಗನ ಈ ಸ್ಥಿತಿಗೆ ಊರೆ ಕಾರಣ ಎಂದು ಹೀಗೆ ಕೂಗುತ್ತಾಳೆ. "ತನ್ನ ಮಗನನ್ನು ಎಲ್ಲರೂ ಕೆಡಿಸುತ್ತಿರುವುದಾಗಿಯೂ ಅವನು ಓದಲಿಕ್ಕೆ ಬರೆಯಲಿಕ್ಕೆ ಕಾಲವಿಲ್ಲದಂತೆ ಎಲ್ಲರೂ ಅವನನ್ನು ಕೆಲಸಗಳ ಮೇಲೆ ಕಳಿಸಿ ಹಾಳು ಮಾಡುತ್ತಿರುವುದಾಗಿಯೂ ಈ ಊರಲ್ಲಿರುವಷ್ಟು ಕೀಳು ಮನಸ್ಸಿನ, ಹಾಳಾಗಿ ಹುಳು ಬಿದ್ದು ಕೊಳೆಯುತ್ತಿರುವ ಜನ ಬೇರೆಲ್ಲೂ ಇಲ್ಲವೆಂದೂ, ಇಂಥ ಊರಿಗೆ ಮಾರಿ ಬಡಿಯುವುದಾಗಿಯೂ ಕೂಗಿದಳು ಹನುಮಕ್ಕ".[೯] [ಪು.ಸಂ.೪೯]

ಇವಳ ಈ ಕೂಗಿನಲ್ಲಿ ನೊಂದ ತಾಯಿಯೊಬ್ಬಳ ಅಳಲು ಇತ್ತು ತನ್ನ ಮಗ ಒಳ್ಳೆಯವನಾಗಿ ಬೆಳೆಯಬೇಕು ಎಂಬ ಆಸೆ ಇಟ್ಟುಕೊಂಡಿದ್ದ ಹನುಮಕ್ಕ, ಭರ್ಮಣ್ಣ, ಸಣ್ಣೀರಪ್ಪ, ರಂಗವ್ವ,

ಮಂಜನಿಂದ ಕರಿಯನಿಗೆ ಸಿಗುವ ಹಣವನ್ನು ಬಹಳ ಸಂತೋಷದಿಂದಲೆ ತೆಗೆದುಕೊಳ್ಳುತ್ತಾಳೆಯೆ ಹೊರತು ಆ ಹಣ ಹೇಗೆ ಬಂತೆಂದು ಪ್ರಶ್ನಿಸುವುದಿಲ್ಲ. ಕರಿಯ ತನ್ನ ತಾಯಿಯ ಏಟಿನಿಂದ ಬೈಗುಳದಿಂದ ತಪ್ಪಿಸಿಕೊಳ್ಳಲು ಭರ್ಮಣ್ಣನಂತಹವರ ಸಂಗವನ್ನು ಅನಿವಾರ್ಯವಾಗಿ ಮಾಡುತ್ತಾನೆ. ಹನುಮಕ್ಕ ಜವಾಬ್ದಾರಿಯುತ ತಾಯಿಯಾಗಿ, ವರ್ತಿಸದೆ ಇರುವುದನ್ನು ಕಾಣಬಹುದು.

ಎಂಟು ವರ್ಷದ ಬಾಲಕನಾಗಿರುವ ಕ್ಯಾತನ ತಂದೆ ತಾಯಿ ಸತ್ತಾಗ ಆತನನ್ನು ಸಾಕಿ ಬೆಳೆಸಿದವಳು ಆತನ ಅಕ್ಕ ದೇವೀರಿ ಆಕೆ ತೋರಿದ ಪ್ರೀತಿ ವಾತ್ಸಲ್ಯ ಮತ್ತು ಕ್ಯಾತನನ್ನು ಬೆಳೆಸಲು ಪಟ್ಟ ಪಾಡುಗಳ ಬಗ್ಗೆ ಕ್ಯಾತನಿಗೆ ಅಭಿಮಾನ. "ದೇವೀರಿ, ಕ್ಯಾತನ್ನ, ಮಗುವನ್ನು ಎತ್ತಿಕಂಡಂಗೆ ಉಸೇ ವಿಕ್ಕೆ ಎತ್ತಿಕೊಂಡು ಪಕ್ಕಕ್ಕೆ ಮಲಗಿಸಿಕೊಂಡಳು. ಹಂಗೆ ಬರ್ತಿದ್ದ ನಿದ್ರೆ ಹೊಂಟೋಯ್ತು ಸಾರ್, ನಮ್ಮವ್ವ ನನ್ನ ಮಲಗಿಸಿ ಕಂಡಂಗೆ ಸೊಂಟದ ಸುತ್ತ ಕೈ ಹಾಕಿ ಎಳಕೊಂಡು ಎದೆಗೆ ಅಪ್ಪಿಕೊಂಡ್ಳು ದೇವೀರಿ. ಬೆಚ್ಚಗೆ ಎಷ್ಟು ಬೆಚ್ಚಗೆ ಮೆತ್ತಗಿದ್ದಳು ಈ ದೇವೀರಿ ನಂಗೆ ತಡೆಯೊಕಾಗದಷ್ಟು ಅಳು ಬಂತು."[೧೦] [ಪು.ಸಂ.೧೮]

ಎಂದು ಹೇಳುವ ಕ್ಯಾತನ ಮಾತಿನಲ್ಲಿ ದೇವೀರಿ ಅಕ್ಕನಾಗಿದ್ದರೂ ತಾಯಿಯ ರೀತಿಯಲ್ಲಿ ಪೋಷಿಸುತ್ತಿದ್ದಳು ಎಂಬುವುದರ ಅರಿವಾಗುತ್ತದೆ. ಕ್ಯಾತ ಎಂಟು, ಒಂಬತ್ತು ವರ್ಷದ ಹುಡುಗನಾದರೂ ಆತನನ್ನು ತಾನೇ ಸ್ನಾನ ಮಾಡಿಸುವುದು, ದುಡಿದ ಹಣದಿಂದ ತಮ್ಮನಿಗೆ ರೊಟ್ಟಿ ಕೊಡಿಸುವುದು, ದೇವೀರಿ ಮಂಡಕ್ಕಿ ತಿಂದು ಬದುಕುವುದು ಹಾಗೂ ತಮ್ಮ ಓದಬೇಕು ಎಂಬ ಆಸೆಯಿಂದ ಇಂಗ್ಲೀಷ್ ಶಾಲೆಗೆ ಸೇರಿಸುತ್ತಾಳೆ. ಅವನ ದಿನನಿತ್ಯದ ಬೆಳವಣಿಗೆಯನ್ನು ಗಮನಿಸುತ್ತಾಳೆ. ಹೀಗೆ ತಾಯಿಯಂತೆ ಕಾರ್ಯ ನಿರ್ವಹಿಸುವ ದೇವೀರಿಯ ಮೂಲಕ ಲಂಕೇಶರು ಹೆಣ್ಣಿನಲ್ಲಿ ತಾಯ್ತನ ಗುಪ್ತವಾಗಿ ಅಡಗಿರುತ್ತದೆ. ತಾಯ್ತನದ ಅಂಶಗಳು ತಾಯಿಯಾಗುವುದಕ್ಕಿಂತ ಮೊದಲೇ ಪ್ರಕಟವಾಗುತ್ತದೆ ಎಂಬ ನಿಲುವನ್ನು ತಾಳುತ್ತಾರೆ.

ಕೊಳಗೇರಿಯ ಪರಿಸರದಲ್ಲಿ ತನಗೆ ಸಂಬಂಧವಿಲ್ಲದ ಕ್ಯಾತನನ್ನು ಪ್ರೀತಿಯಿಂದ ಕಾಣುವ ಇನ್ನೊಬ್ಬ ವ್ಯಕ್ತಿ ಸಂಪೂರ್ಣಮ್ಮ ಆರ್ಥಿಕವಾಗಿ ಸಬಲಳಲ್ಲದಿದ್ದರೂ ಕ್ಯಾತ ಹೋದಾಗಲೆಲ್ಲ ಅವನಿಗೆ ಮನೆಯಲ್ಲಿರುವ ತಿಂಡಿ ತಿನಿಸುಗಳನ್ನು ಪ್ರೀತಿಯಿಂದ ಬಡಿಸುತ್ತಾಳೆ. ಅಕ್ಕನಿಲ್ಲದೆ ಇದ್ದಾಗ ಅಳುವ

ಕ್ಯಾತನನ್ನು ಸಮಾಧಾನ ಪಡಿಸುತ್ತಾಳೆ. "ಗುಡ್ಲಿನ ಮೂಲೇಲಿ ಅದೇನೋ ಹೆಚ್ಚಿದ್ದ ಸಂಪೂರ್ಣಮ್ಮ ಕ್ಯಾತ ಕುಂತ ಕೂಡ್ಲೆ ಅವನ ಹತ್ರಕ್ಕೆ ಸಾಣಿಯಲ್ಲಿ ಹತ್ತು ಕಾಳು ಕಳ್ಳೆಪುರಿ ಹಾಕಿಕೊಡ್ತಾಳೆ. ಕ್ಯಾತನಿಗೆ ಕೋತಿ ನನ್ಮಗ ಸೈತ ಮಾರಾಜ ಅನ್ನೊ ಹಂಗೆ ನಿಗಾ ವಹಿಸಿ ಪ್ರಾಣ ತಿಂತಾಳೆ. ಕಳ್ಳೇಪುರಿ ಇದ್ರೆ ಕಳ್ಳೆಪುರಿ, ವಡೆ ಇದ್ರೆ ವಡೆ, ಕಾರಸೇವು ಇದ್ರೆ ಕಾರಸೇವು ಕೊಟ್ಟು ಕಾಪಿ ಕೊಟ್ಟು ನೀರು ಕೊಟ್ಟು ನೆನಸಿಕೊಂಡು ನಿಮ್ಮ ಮನಸ್ಸೆಲ್ಲ 'ಸಂಪೂರ್ಣವ್ಮೊ' ಅಂತ ದೈನೇಸಿಯಾಗಿ ವದರೋ ಹಂಗೆ ಮಾಡ್ತಾಳೆ. ನನ್ನಂತ ನನ್ಮಗನ್ನ ಸುಮ್ಮನೆ ನನ್ನಷ್ಟಕ್ಕೆ ಬಿಟ್ರೆ ಈ ಸಂಪೂರ್ಣಮ್ಮನ ಗಂಟೇನು ಹೋಗುತ್ತೆ ಸಾರ್ ? ನನ್ನಂತ ಕ್ಯಾತನ ಮೇಲೆ ಯಾಕೆ ನಿಗಾ ವಹಿಸಬೇಕು? ಕೃತಗ್ನತೆಯಿಂದ ಎದೆಯೆಲ್ಲ ಕುಸಿಯೋ ಹಂಗೆ ಯಾಕೆ ಮಾಡಬೇಕು?"[೧೧] [ಪು.ಸಂ.೫೧]

ಎಂಬಲ್ಲಿ ಸಂಪೂರ್ಣಮ್ಮ ಅನಾಥವಾಗಿರುವ ಕ್ಯಾತನನ್ನು ವಾತ್ಸಲ್ಯದಿಂದ ಕಾಣುತ್ತಾಳೆ. ತನ್ನಕ್ಕ ದೇವೀರಿಯ ಪಾಲನೆ ಪೋಷಣೆಯ ಗುಣಗಳು ತನ್ನವ್ವನನ್ನು ನೆನಪಿಸಿದರೆ, ಸಂಪೂರ್ಣಮ್ಮ ಕೊಡುವ ತಿಂಡಿಗಳನ್ನು ಕೃತಜ್ಞತೆಯಿಂದ ನೆನಪಿಸುವ ಹಾಗೆ ಮಾಡುತ್ತದೆ. ತನಗೆ ಸಂಬಂಧವಿಲ್ಲದ ಸಂಪೂರ್ಣಮ್ಮನನ್ನು ದೂರವಿಟ್ಟು ಕಾಣುವುದನ್ನು ಗಮನಿಸಬಹುದು. ಮನುಷ್ಯ ಎಷ್ಟೇ ಹತ್ತಿರವಿದ್ದರೂ ಮನಸ್ಸುಗಳು ದೂರವೆ ಇರುವ ಅಂತರವನ್ನು ಕಾಯ್ದುಕೊಳ್ಳುವ ಬಗೆ ಆಧುನಿಕತೆ ಮನುಷ್ಯ ಸಂಬಂಧದಲ್ಲಿ ಸೃಷ್ಟಿಸಿದ ಬಿರುಕುವಿನಂತೆ ಕಾಣುತ್ತದೆ.

'ಬಿರುಕು' ಕಾದಂಬರಿಯಲ್ಲಿ ಬಸವರಾಜ ತನ್ನ ತಾಯಿಯ ಬಗ್ಗೆ ಹೀಗೆ ಹೇಳುತ್ತಾನೆ. "ನನ್ನವ್ವ ನನಗಾಗಿ ಎಷ್ಟು ಕಷ್ಟ ಪಟ್ಟು? ಅದೆಷ್ಟು ಸಲ ಯಾರ್‍ಯಾರನ್ನೋ ಬೇಡಿ ನಾನು ಓದೋಕೆ ಹಣ ಕಳಿಸಿದ್ಲೋ. ಇನ್ನು ನೆನಪಿದೆ; ನಾನು ಚಿಕ್ಕವನಿದ್ದಾಗ ವಿಪರೀತ ಜ್ವರ ಬಂದಿತ್ತು. ಊರಿಂದ ಹತ್ತು ಮೈಲಿ ಫಾಸಲೆಯಲ್ಲಿ ಯಾರೂ ಡಾಕ್ಟರರೇ ಇರಲಿಲ್ಲ. ಮಳೆಯಲ್ಲಿ ಹರಕಲು ಕೊಡೆ ಹಿಡ್ಕೊಂಡು ಶಿವಮೊಗ್ಗೆಗೆ ಹೋಗಿ ಎರಡು ಡೋಸ್ ಔಷಧಿ ತರ್ತಿದ್ಲು ನನ್ನವ್ವ ನನಗೆ ಕಾಯಿಲೇನೇ ಇಲ್ಲ ಅಂತ ತೋರಿಸೋಕೆ ನಾನು ಓಡಾಡ್ತಿದ್ರೆ ನನ್ನನ್ನು ಹಿಡಿದು ತೊಡೆ ಮೇಲೆ ಹಾಕಿಕೊಂಡು ತಟ್ಟುತ್ತಾ ಮಲಗಿಸಿ ಮತ್ತೆ ಔಷಧಿಗೆ ಓಡ್ತಿದ್ಲು. ಇದನ್ನೆಲ್ಲ ನೆನೆದರೆ . . ."[೧೨] [ಪು.ಸಂ.೧೦]

ಎಂದಾಗ ಪ್ರೊಫೆಸರ್ ರಂಗಯ್ಯನು ಕೂಡಾ "ತಾಯಿಯಂಥ ವಸ್ತು ಇನ್ನಿಲ್ಲವಪ್ಪ ನನ್ನ ತಾಯಿ ನನಗೂ ಪಟ್ಟ ಪಾಡು ಸ್ವಲ್ಪವೇ ಅವಳು ತೀರಿಕೊಂಡಾಗ ನನ್ನ ಅರ್ಧ ಜೀವ ಹೋಯ್ತು."[೧೩] [ಪು.ಸಂ.೧೦]

ಎಂದು ತಾಯಿಯನ್ನು ನೆನಪಿಸುತ್ತಾ ಕಣ್ಣೀರಿಡುವ ರಂಗಯ್ಯನಂತಹ ಪ್ರೊಫೆಸರರೂ, ತಾಯಿಯೂ ಮಕ್ಕಳನ್ನು ಸಾಕುವುದಕ್ಕೆ ಪಡುವ ಕಷ್ಟಗಳನ್ನು ನೆನಪಿಸುತ್ತಾರೆ. ಲಂಕೇಶರ ಸಾಹಿತ್ಯದಲ್ಲಿ ತಾಯಿ ಕಷ್ಟಪಟ್ಟು ಮಕ್ಕಳನ್ನು ಸಾಕುತ್ತಾಳೆ ಹಾಗೆ ಸಾಕುವಾಗ ತಮಗೆ ಒದಗಿಬರುವ ಎಲ್ಲ ಕಷ್ಟಗಳನ್ನು ಸಹಿಸುತ್ತಾ ಬದುಕಿಗಾಗಿ ಹೋರಾಟ ಮಾಡುವ ತಾಯಂದಿರ ಚಿತ್ರಣವನ್ನು ಮಾತ್ರ ನೀಡುತ್ತಾರೆಯೆ ಹೊರತು ಮಕ್ಕಳನ್ನು ಸಾಕಿ ಬೆಳೆಸುವ ಅದಕ್ಕಾಗಿ ಜೀವನದಲ್ಲಿ ಕಷ್ಟ ಪಡುವ ತಂದೆಯನ್ನು ಚಿತ್ರಿಸುವುದಿಲ್ಲ. ಹೀಗೆ ಲಂಕೇಶರ ಕಾದಂಬರಿಯಲ್ಲಿ ಮಾತೃತ್ವದ ವಿಶಿಷ್ಟತೆಗಳು ಗಮನಾರ್ಹವಾಗುತ್ತದೆ.

ತಮ್ಮ ಪರಿಸರದಲ್ಲಿ ಯಾರಿಗೂ ಅಂಜದ ಬದುಕು ನಡೆಸುತ್ತಿರುವ ರಂಗವ್ವ, ಸಾವಂತ್ರಿ, ರಾಮಿ, ರುದ್ರಿ, ದೇವೀರಿ ಮುಂತಾದ ಸ್ತ್ರೀಯರ ಬಗ್ಗೆ ಸುತ್ತಮುತ್ತಲಿನ ಜನ ಅವರ ಆರ್ಥಿಕ, ಸಾಮಾಜಿಕ ಸ್ಥಿತಿಗಳು ಮೇಲ್ಮಟ್ಟಕ್ಕೇರುತ್ತಾ ಇರುವಾಗ ಅವರ ಬಗ್ಗೆ ಒಂದು ಸಂಶಯವನ್ನಿಟ್ಟುಕೊಂಡವರು. ರಂಗವ್ವನ ಬಗ್ಗೆ ಇಡೀ ಕಂಬಳ್ಳಿಯ ಜನತೆಗೆ ಒಳ್ಳೆಯ ಅಭಿಪ್ರಾಯವಿಲ್ಲ. ಮುಖ್ಯವಾಗಿ ಅವಳಲ್ಲಿ ಹಣವನ್ನು ತೆಗೆದುಕೊಂಡಿರುವ ಭರ್ಮಣ್ಣ, ಬೂಸಿ, ರಾಚ ಮುಂತಾದವರಿಗೆ ಯಾಕೆಂದರೆ ಅವಳಲ್ಲಿ ತೆಗೆದುಕೊಂಡಿರುವ ಹಣವನ್ನು ಹಿಂತಿರುಗಿಸುವಷ್ಟು ಸಮರ್ಥರಾಗಿರುವುದಿಲ್ಲ. ಹಾಗಾಗಿಯೆ ರಂಗವ್ವ ಮತ್ತು ಸಾವಂತ್ರಿಯ ನೈತಿಕತೆಯ ಬಗ್ಗೆ ಇಲ್ಲಸಲ್ಲದ ಅಪವಾದವನ್ನು ಮಾಡುತ್ತಿರುತ್ತಾರೆ. ಭರ್ಮಣ್ಣನಿಗೆ ಹೆಣ್ಣುಗಳಿಬ್ಬರೆ ಬದುಕುತ್ತಿರುವ ಅವರ ಕುಟುಂಬದ ಮೇಲೆ ಹತೋಟಿ ಬೆಳೆಸಿಕೊಳ್ಳುವುದು ಬೇಕಾಗಿತ್ತು. ಹೆಣ್ಣೊಬ್ಬಳು ಸಮಾಜದಲ್ಲಿ ಏಕಾಂಗಿಯಾಗಿ ಎಲ್ಲವನ್ನು ಎದುರಿಸುತ್ತಾ ಬದುಕುತ್ತಿದ್ದರೆ ಅವರನ್ನು ದಮನಗೊಳಿಸುವ ಪ್ರಯತ್ನ ಸಮಾಜದಲ್ಲಿ ಸದಾ ನಡೆಯುತ್ತಿರುತ್ತದೆ. ರಂಗವ್ವನಿಗೂ ಕೂಡ ಈ ಊರಿನಲ್ಲಿ ತನ್ನನ್ನು ಎಲ್ಲರೂ ದ್ವೇಷಿಸುತ್ತಿರುವ ನಾಶ ಮಾಡಲು ಹೊಂಚು ಹಾಕುತ್ತಿರುವ ವಿಷಯ ಗೊತ್ತಿರುತ್ತದೆ. ಉಡುಪ

“ರಂಗವ್ವ ನಿಂಗೆ ತೀರಾ ಬೇಕಾದೋರು ಈ ಊರಲ್ಲಿ ಎಷ್ಟು ಜನ ಹೇಳು ಎಂದಾಗ ರಂಗವ್ವ ಯೊಚಿಸಿ ಒಂದು ನೊಣ ಸೈತ ಇಲ್ಲ ಎಂದು ಕಣ್ಣೀರು ಹರಿಸಿ ನಂದ್ಯಪ್ಪ ಅವನ ಮನೇರು ಸ್ರೇಷ್ಟಿಗಳು” ೧೪ [ಪು.ಸಂ.೧೯೮] ಎಂಬಲ್ಲಿ ಇಡೀ ಊರೇ ಅವಳ ದಮನಕ್ಕೆ ಕಾಯುತ್ತಿತ್ತು ಎಂಬುವುದು ಅರಿವಾಗುತ್ತದೆ. ಇದು ಗೊತ್ತಿದ್ದ ರಂಗವ್ವ ಅವರನ್ನುಎದುರಿಸಿ ಈ ಊರಲ್ಲಿ ಬದುಕಬೇಕಾದರೆ ಹೆಣ್ಣು ಹೆಂಗಸಾದ ತಾನು ಗಂಡಸಿನ ರೀತಿಯಲ್ಲಿ ಬದುಕಬೇಕು ಎಂದು ಯೋಚಿಸಿ ಹಾಗೆ ಬದುಕುತ್ತಾಳೆ.

ಇಲ್ಲಿ ಕಂಬಳ್ಳಿಯ ಜನರ ಸಣ್ಣತನಗಳ ಬಗ್ಗೆ ಅರಿವಾಗುತ್ತದೆ ಈ ಮೂಲಕ ಪುರುಷ ಪ್ರಧಾನ ಸಮಾಜ ವಿಜೃಂಭಿಸುತ್ತದೆ ಎಂಬುದಾಗಿ ತಿಳಿದುಕೊಂಡರೂ ಕೂಡ ಮತ್ತೆ ಸೋಲನ್ನನುಭವಿಸುವುದು ಪುರುಷರೇ ಆಗುತ್ತಾರೆ. ಭರ್ಮಣ್ಣನು, ರಾಚ, ಬೂಸಿ, ಶಿವಾಜಿಯೊಂದಿಗೆ ಸೇರಿಕೊಂಡು ಸಾವಂತ್ರಿ ಬ್ಯಾಡರ ಮಂಜನನ್ನು ಪ್ರೀತಿಸುವುದರ ಮೂಲಕ ಇಡೀ ವೀರಶೈವ ಮತಕ್ಕೆ ಕಳಂಕಪ್ರಾಯಳಾಗುತ್ತಾಳೆ ಎಂದುಕೊಂಡು ಅವಳನ್ನು ಅತ್ಯಾಚಾರ ಮಾಡಲು ಹೊರಡುತ್ತಾರೆ. ಕೊನೆಗೆ ಮಮ್ತಾಜ್‌ಳನ್ನು ಅಪರಿಸಿಕೊಂಡು ಬರುವುದರ ಮೂಲಕ ಉಪಾಯಗಳೆಲ್ಲ ಮೂಲೆ ಗುಂಪಾಗುತ್ತದೆ. ಅದೇ ರಾತ್ರಿ ಭರ್ಮಣ್ಣನ ಹೆಂಡತಿ ರಾಮಿ, ಶಿವಾಜಿಯೊಂದಿಗೆ ಓಡಿ ಹೋಗುವುದರ ಮೂಲಕ ಭರ್ಮಣ್ಣನ ಉಪಾಯ ಆತನಿಗೆ ಎದುರೇಟಾಗಿ ಪರಿಣಮಿಸುತ್ತದೆ. ತನ್ನ ಹೆಂಡತಿ ರಾಮಿಗೆ ಸುಖ ಕೊಡದ ಭರ್ಮಣ್ಣ ಸಾವಂತ್ರಿಯನ್ನು ಅತ್ಯಾಚಾರ ಮಾಡಲು ಹೊರಡುವಲ್ಲಿ ವ್ಯಂಗ್ಯ ಅಡಗಿದೆ. ಇಲ್ಲಿ ಪುರುಷನ ಪುರುಷತ್ವವನ್ನು ವಿಡಂಬಿಸುತ್ತಾರೆ.

ಲಂಕೇಶ್ ಕಾದಂಬರಿಯಲ್ಲಿ ದಾಂಪತ್ಯ ಸುಖದಿಂದ ವಂಚಿತರಾದ ರಾಮಿ ರುದ್ರಿಯಂತಹ ಅತೃಪ್ತ ಮನಸ್ಸಿನ ಸ್ತ್ರೀಯರನ್ನು ಕಾಣಬಹುದು. ರಾಮಿ ತನ್ನ ಮನಸ್ಸಿನ ಅತೃಪ್ತಿಯನ್ನು ನೇರವಾಗಿ ಹೊರಗೆಡಹುತ್ತಾಳೆ. ಮಳೆಯಲ್ಲಿ ನೆನೆಯುವ ರಾಮಿ, ಹಾಲುಮತದ ಸ್ವಾಮಿಗಳು ಮನೆಯಲ್ಲಿ ನೈವೇದ್ಯ ಸ್ವೀಕರಿಸುವಾಗ ಬಚ್ಚಲ ಮನೆಯಲ್ಲಿ ತುಂಡುಡುಗೆಯಲ್ಲಿ ಕೂತಿರುತ್ತಾಳೆ. ಶಿವಾಜಿಯೊಂದಿಗೆ ಓಡಿ ಹೋಗುತ್ತಾಳೆ. ಇವಳು ಹೀಗೆ ವರ್ತಿಸಲು ಅವಳ ಗಂಡನ ಅಸಮರ್ಥತೆಯೇ ಕಾರಣವಾಗಿದೆ. ಕೊ ಳಗೇರಿಯ ಸುತ್ತಮುತ್ತಲಿನ ಹಟ್ಟಿಯವರಿಗೆ ದೇವೀರಿ

ಬದುಕುತ್ತಿರುವ ರೀತಿಗಳು ಗೊತ್ತಿವೆ ಮತ್ತು ಖಡವಾ, ನಾಗ್ರರ ವ್ಯವಹಾರಿಕ ಬುದ್ಧಿಗಳ ಅರಿವಿದೆ. ಕೆಲವರಿಗೆ ಅವಳ ಬಗ್ಗೆ ತಿರಸ್ಕಾರ ಭಾವವಿದ್ದರೆ ರಂಗಜೆಟ್ಟಿಯಂತವರಿಗೆ ಅವಳು ಬದುಕುವಂತಹ ರೀತಿ ಅನುಕಂಪ ಹುಟ್ಟಿಸುತ್ತದೆ. ಅವಳ ವೃತ್ತಿ ಹಾಗೂ ತನ್ನ ಕುದುರೆ ರೇಸಿನ ಚಟ ಎರಡು ಕೂಡ ಬದುಕನ್ನು ನಾಶ ಮಾಡುತ್ತವೆ ಎಂಬುವುದರ ಅರಿವಿದೆ. ಸಿನಿಮಾ ವೃತ್ತಿಯನ್ನು 'ಹಲ್ಕಟ್' ಕೆಲಸ ಎಂದು ದೂರುವ ಕ್ಯಾತ ಆ ವೃತ್ತಿಗೆ ಸೇರಿದ ಪದ್ದಿಯನ್ನು ದೂಷಿಸದೆ ಅವಳನ್ನು ಆ ಕೆಲಸಕ್ಕೆ ಸೇರಿಸಿರುವ ಶಂಕರನಾರಾಯಣನನ್ನು ಮತ್ತು ಆತನ ಸಂಗಡಿಗರನ್ನು ದೂರುತ್ತಾನೆ. ಆದರೆ ಖಡವರೊಂದಿಗೆ ಸೇರಿಕೊಂಡಿರುವ ತನ್ನಕ್ಕನನ್ನು ನೋಡಲು ಅಸಹ್ಯವಾಗುತ್ತದೆ ಎಂದು ಹೇಳುತ್ತಲೆ ಅವಳ ಒಳ್ಳೆಯತನವನ್ನು ಹೊಗಳುತ್ತಾನೆ. ಕ್ಯಾತ ಇನ್ನೂ ಚಿಕ್ಕವನಾಗಿರುವ ಕಾರಣಕ್ಕೆ ಅಕ್ಕನ ಸ್ಥಿತಿಗಳು ಆತನಿಗೆ ಅರ್ಥವಾಗುತ್ತಿಲ್ಲ ಎಂದಾದರೆ, ಅದೇ ವೇಳೆ ಪದ್ದಿಯನ್ನು ಹೇಗೆ ಅರ್ಥಮಾಡಿಕೊಳ್ಳಬಲ್ಲ? ಎಂಬ ಪ್ರಶ್ನೆಯೂ ಮೂಡುತ್ತದೆ. ಹೀಗೆ ಕ್ಯಾತನು ದೇವೀರಿ ಪದ್ದಿಯ ಬಗ್ಗೆ ತನ್ನದೆ ಆದ ಅಭಿಪ್ರಾಯವನ್ನಿಟ್ಟುಕೊಂಡು ಬದುಕುತ್ತಿರುತ್ತಾನೆ.

ಶಾಂತ, ಸುವರ್ಣ, ಶಾಂತಳ ತಾಯಿಯ ಮನಸ್ಥಿತಿಯ ಬಗ್ಗೆ ಯೋಚಿಸುವ ಬಸವರಾಜು ಎಲ್ಲರನ್ನು ಸಂಶಯದಿಂದಲೆ ಕಾಣುತ್ತಾನೆ. ಶಾಂತಳ ತಾಯಿಯ ಬಾಹ್ಯ ಸ್ವರೂಪವನ್ನು ಚಿತ್ರಿಸುತ್ತಾ ಅವಳ ನಡವಳಿಕೆಗಳು ತನ್ನ ಲೈಂಗಿಕ ಆಮಿಷಗಳನ್ನು ತೀರಿಸಿಕೊಳ್ಳುವುದಕ್ಕೆ ಆತನನ್ನು ಬಳಸಿಕೊಳ್ಳುವ ಪ್ರಯತ್ನಮಾಡುತ್ತಿದ್ದಾಳೆ ಅಂದುಕೊಳ್ಳುತ್ತಾನೆ. ಒಂದು ಬಗೆಯ ಸಂಶಯವನ್ನಿಟ್ಟುಕೊಂಡೇ ಆಕೆಯೊಂದಿಗೆ ವ್ಯವಹರಿಸುತ್ತಾನೆ ಅದೇ ರೀತಿಯಲ್ಲಿ ಶಾಂತಳ ಬಗ್ಗೆ ಪ್ರೀತಿ ಇಟ್ಟುಕೊಳ್ಳುವ ಬಸವರಾಜ ಕೊನೆಗೆ ಆಕೆ ದಕ್ಕುತ್ತಾಳೆ ಎಂದು ಅರಿವಾದಾಗ ಆಕೆಯ ಬಗೆಗೂ ಸಂಶಯ ತಾಳುತ್ತಾನೆ. ಅವಳನ್ನು ಅಕ್ಕ ತಂಗಿಯಂತೆ ಎಂದು ಸಂಬೋಧಿಸುತ್ತಾ ದೂರ ಸರಿಸುತ್ತಾನೆ. ಹೀಗೆ ಲಂಕೇಶರ ಕಾದಂಬರಿಯಲ್ಲಿ ಕೆಲವು ಪುರುಷವರ್ಗ ಸ್ತ್ರೀಯರನ್ನು, ಅವರ ನಡಾವಳಿಕೆಯನ್ನು ಸಂಶಯದಿಂದಲೆ ಕಾಣುತ್ತಾರೆ. ಇದಕ್ಕೆ ಮುಖ್ಯ ಕಾರಣ ಸ್ವತಃ ಅವರು ಸಾಮರ್ಥ್ಯ ಹೀನರಾಗಿರುವುದೆ ಆಗಿದೆ. ಈ ಮೂಲಕ ಸ್ತ್ರೀಯರ ವ್ಯಕ್ತಿತ್ವವನ್ನು ಎತ್ತಿ ಹಿಡಿಯುತ್ತಾರೆ.

ಲಂಕೇಶರ ಮೂರು ಕಾದಂಬರಿಗಳೂ ಆಧುನಿಕತೆಗೆ ತೆರೆಯುತ್ತಿರುವ ಮತ್ತು ಆಧುನಿಕತೆಯಲ್ಲಿರುವ ಊರಿನ ಚಿತ್ರಣವಿರುವ ಕಾದಂಬರಿಗಳು. ಈ ಕಾದಂಬರಿಗಳ ನೇತ್ಯಾತ್ಮಕ ಅಂಶವೆಂದರೆ ಮಹತ್ವಾಕಾಂಕ್ಷೆಯುಳ್ಳ ವಿದ್ಯಾವಂತ ಆಧುನಿಕ ಹೆಣ್ಣಿನ ಚಿತ್ರ ಅಪರೂಪವಾಗಿರುವುದು. ಶಿವಿ, ಸಾವಂತ್ರಿ, ಶಾಂತ, ಸುವರ್ಣ ವಿದ್ಯಾವಂತ ಸ್ತ್ರೀಯರು ಆದರೆ ಶಿವಿಯ ಅಕ್ಷರ ಜ್ಞಾನವೆ ಆಕೆಯನ್ನು ಸೀಮಿತ ಚೌಕಟ್ಟಿನಲ್ಲಿ ಬದುಕುವ ಹಾಗೆ ಮಾಡಿ ಆಕೆಯ ದುರಂತ ಸಾವಿಗೆ ಕಾರಣವಾಗುತ್ತದೆ. ಅನೇಕ ಪುಸ್ತಕಗಳನ್ನು ಓದಿರುವ ಶಿವಿ ಆ ಕಾದಂಬರಿಗಳಲ್ಲಿ ಬಂದಿರುವ ಪ್ರೀತಿ ಪ್ರೇಮಗಳನ್ನು ತಲೆಯಲ್ಲಿ ತುಂಬಿಸಿಕೊಂಡಿರುತ್ತಾಳೆ ಹೊರತು ಅಲ್ಲಿನ ಕೇಂದ್ರ ತತ್ವಗಳತ್ತ ಮನಸ್ಸನ್ನು ಹರಿಸುವುದಿಲ್ಲ. ಜೊತೆಗೆ ಸಾಂವತ್ರಿಯಲ್ಲಿನ ಲವಲವಿಕೆಯಾಗಲಿ, ಧೈರ್ಯವಾಗಲಿ ಆಕೆಯ ಮೇಲೆ ಪ್ರಭಾವ ಬೀರುವುದಿಲ್ಲ. ಶಿವಿ ತಮ್ಮ ಹೊಲಗದ್ದೆಯಲ್ಲಿ ತಾಯಿ ಕೆಲಸ ಮಾಡುವಾಗ ಗದ್ದೆಯ ಮೇಲೆ ನಿಂತು ನಗುತ್ತಾಳೆ. ಆದರೆ ಸಾವಂತ್ರಿ ರಂಗವ್ವನೊಂದಿಗೆ ಸೇರಿ ದುಡಿಯುತ್ತಾಳೆ. ಶಿವಿ ಇಡೀ ಊರಿನಲ್ಲಿ ಹೈಸ್ಕೂಲ್‌ವರೆಗೆ ಓದಿದವಳು ಜೊತೆಗೆ ಇಂಗ್ಲೀಷ್ ಓದಬಲ್ಲ ಏಕಮಾತ್ರ ಹುಡುಗಿ. ಹಾಗಾಗಿ ಹೊಲಗದ್ದೆಗಳಲ್ಲಿ ಗೇಯುವುದು ಆಕೆಯ ಸ್ವಾಭಿಮಾನಕ್ಕೆ ದಕ್ಕೆ ಬಂದಂತೆ ಎಂದು ತಿಳಿದಿದ್ದಳು. ವಿದ್ಯಾವಂತಳಾದ ಶಿವಿಗೆ ನಗರ ವಾಸಿಯೂ ಹಾಗೂ ವಿದ್ಯಾವಂತನೂ ಆದ ವರನನ್ನು ಹುಡುಕುವ ಪ್ರಯತ್ನದಲ್ಲಿರುವ ತಂದೆ-ತಾಯಿಯರನ್ನು ನೋಯಿಸಬಾರದು ಎಂಬ ಕಾರಣದಿಂದ ದತ್ತಣ್ಣನ ತಂದೆಯ ವರದಕ್ಷಣೆಯ ಆಮಿಷದಿಂದ ಶಿವಿ ಸಾವಿಗೆ ಶರಣಾಗುತ್ತಾಳೆ. ಕೊನೆಯ ಕ್ಷಣದಲ್ಲಿಯೂ ಶಿವಿ ತನಗೆ ಆರೋಗ್ಯ ಸರಿ ಇರದೆ ಇದ್ದುದನ್ನು ಸಾವಂತ್ರಿಗೆ ಬಿಟ್ಟು ಇನ್ಯಾರಿಗೂ ಹೇಳುವುದಿಲ್ಲ. ಶಿವಿಯ ವಿದ್ಯೆಯೆ ಆಕೆಯ ಸಾವಿಗೆ ಕಾರಣವಾಗುವುದು ಕಾದಂಬರಿಯ ದುರಂತ. ಶಾಂತ ಪದವಿ ಪಡೆದ ವಿದ್ಯಾವಂತ ಸ್ತ್ರೀ ಎಲ್ಲದರ ಬಗ್ಗೆ ಆಸಕ್ತಿವಹಿಸಿ ಎಲ್ಲರ ತಪ್ಪುಗಳನ್ನು ಕಂಡುಕೊಳ್ಳುತ್ತಾಳೆ. ತನ್ನ ತಂದೆ-ತಾಯಿಯ ವಿಭಿನ್ನ ನಡವಳಿಕೆಗಳ ಬಗ್ಗೆ ಆಕೆಗೆ ಅರಿವಿದೆ. ಆದರೆ ಶಾಂತ ಎಂದೂ ಯಾರೊಂದಿಗೂ ಕೂಡಾ ಅವರ ತಪ್ಪುಗಳನ್ನು ಎತ್ತಿತೋರಿಸಿದವಳಲ್ಲ, ವಿದ್ಯಾವಂತೆಯಾದರೂ ಯಾರನ್ನೂ ದೂಷಿಸದೆ ಅವರನ್ನು ತಿದ್ದುವ ಕಾರ್ಯವನ್ನು ಮಾಡುವುದಿಲ್ಲ. ಉಡುಪನ ಹೆಂಡತಿ ಮಮ್ತಾಜ್ ಪಟ್ಟಣದ ವಿದ್ಯಾವಂತ ಸ್ತ್ರೀ ಧರ್ಮದ ಚೌಕಟ್ಟನ್ನು ಮೀರಿ

[illegible]

ಉಡುಪನನ್ನು ಮದುವೆಯಾದರೂ, ಜಾತಿರಾಜಕೀಯ ಮನಸ್ತಾಪದ ಬಗ್ಗೆ ಕೊಂಚವೂ ಗೊತ್ತಿಲ್ಲದವಳು. ಈಕೆಗೆ ಜಾತಿ-ಜಾತಿಗಳ ನಡುವೆ ಉಂಟಾಗಿರುವ ವೈಮನಸ್ಸಿನ ಅರಿವಿದ್ದು ಜಾತಿಗಳ ದ್ವೇಷ ತಾರತಮ್ಯ ನಾಶವಾಗಬೇಕು ಎಂಬ ಯೋಚನೆಯಿದ್ದಿದ್ದರೆ ಮಂಜ-ಸಾವಂತ್ರಿ ಮದುವೆಯಾಗುವಾಗ ಅವರನ್ನು ಪ್ರೋತ್ಸಾಹಿಸುತ್ತಿದ್ದಳು. ಅವಳ ಬಗ್ಗೆ ಗೌರವನ್ನಿಟ್ಟುಕೊಂಡಿರುವ ಊರ ಜನರಿಗೆ ಬುದ್ದಿ ಹೇಳಬಹುದಿತ್ತು. ಆದರೆ ಅದ್ಯಾವುದರ ಬಗ್ಗೆಯೂ ಮಮ್ತಾಜ್‌ಳಿಗೆ ಅರಿವಿರಲಿಲ್ಲ. ಲಂಕೇಶರು ಆಧುನಿಕ ಸ್ತ್ರೀಯರನ್ನು ಹೇಗೆ ಚಿತ್ರಿಸಿದ್ದಾರೆಂದರೆ ಅತ್ಯಾಧುನಿಕ ರೀತಿಯಲ್ಲಿ ಅಲಂಕಾರ ಮಾಡಿಕೊಳ್ಳುವ ಮತ್ತು ಪಾರ್ಟಿಗಳಲ್ಲಿ ಪಾಲ್ಗೊಳ್ಳುವ ಸ್ತ್ರೀಯರು, ಇವರಿಗೆ ತಮ್ಮ ಅಂತಸ್ತನ್ನು ಕಾಪಾಡಿಕೊಳ್ಳುವುದರಲ್ಲಿ ಮಾತ್ರ ಆಸಕ್ತಿ. ಇಂತಹ ವಿದ್ಯಾವಂತ ಸ್ತ್ರೀಯರೆ ಲಂಕೇಶರ ಬಿರುಕು, ಮುಸ್ಸಂಜೆಯ ಕಥಾ ಪ್ರಸಂಗ ಕಾದಂಬರಿಯಲ್ಲಿ ಕಂಡು ಬರುತ್ತಾರೆ.

ರಂಗವ್ವನ ಬದುಕಿನ ತುಡಿತದಲ್ಲಿ ಬದಲಾವಣೆಯನ್ನು ಗುರುತಿಸಬಹುದು. ಈ ಬದಲಾವಣೆ ಜೀವಂತ ಪ್ರಕ್ರಿಯೆಯನ್ನು ಧಮನಗೊಳಿಸುವ ಎಲ್ಲ ದುಷ್ಟತೆಯನ್ನು ವಿರೋಧಿಸುತ್ತದೆ ಎಂಬ ನೆಲೆಯಲ್ಲಿ ಅವಳು ಸಾವಂತ್ರಿ ಮತ್ತು ಮಂಜರ ಮದುವೆಯನ್ನು ಮಾಡುವುದು ಭರ್ಮಣ್ಣ ಮತ್ತು ಇತರರ ಮೇಲೆ ವಿಜಯ ಸಾಧಿಸುವುದಕ್ಕಾಗಿ ಇರಬಹುದು, ತನ್ನ ಹಟಮಾರಿತನದಿಂದಿರಬಹುದು ಅಥವಾ ಪರಿಸ್ಥಿತಿಯ ಒತ್ತಡದಲ್ಲಿ ಮಾಡಿದ ತಕ್ಷಣದ ನಿರ್ಧಾರ ಎಂದಾದರೂ ಕೂಡಾಮಗಳ ಬಗ್ಗೆ ಇದ್ದ ಅತೀವ ಪ್ರೀತಿಯಿಂದಾಗಿ ಎಂಬುವುದು ಸ್ಪಷ್ಟ. ಇದರಿಂದಾಗಿ ಕಾದಂಬರಿ ಬದುಕಿನ ತುಡಿತದ ಪರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ರಂಗವ್ವ ಮತ್ತು ಸಾವಂತ್ರಿಯರ ನಡುವಿನ ಬಾಂಧವ್ಯ ಎಲ್ಲ ತಾಯಿ ಮಗಳ ಸಂಬಂಧದಂತೆ ಗಟ್ಟಿಯಾಗಿರುವುದು ಇವರಿಬ್ಬರು ಪರಸ್ಪರರ ಬಗ್ಗೆ ಕೋಪ, ಪ್ರೀತಿ, ವಾತ್ಸಲ್ಯ, ಮೆಚ್ಚುಗೆಯನ್ನು ಇಟ್ಟುಕೊಳ್ಳುತ್ತಲೆ ಜೀವಿಸುತ್ತಿರುತ್ತಾರೆ, ಒಬ್ಬರಿಗೊಬ್ಬರು ಹತ್ತಿರವಾಗುತ್ತಾರೆ. ಸಾವಂತ್ರಿಗೆ ತಾಯಿಯನ್ನು ಅರ್ಥಮಾಡಿಕೊಳ್ಳುವುದು ಆಕೆಯ ತಿಳುವಳಿಕೆಯನ್ನು ಹಿರಿದುಗೊಳಿಸುತ್ತದೆ. ಅದೇ ರೀತಿ ರಂಗವ್ವನಿಗೆ ತನ್ನ ಮಗಳನ್ನು ಅರ್ಥ ಮಾಡಿಕೊಳ್ಳುವ ಪ್ರಾಯಸ್ಥಳಾಗಿರುವ ಅವಳನ್ನು ಸರಿದಾರಿಗೆ ತರುವ ನಿರಂತರ ಸವಾಲು ಮತ್ತು ಪ್ರಯತ್ನ ಒಂದೇ ಬಾರಿ ಇಡೀ ಸಾಮಾಜಿಕ ವ್ಯವಸ್ಥೆ,

ಜಾತಿ ಮತ್ತು ನೀತಿಯ ಮಿತಿಯನ್ನು ಮೀರುವಂತೆ ಮಾಡುತ್ತದೆ. ರಂಗವ್ವ ಈ ಮೂಲಕ ನಿಜವಾದ ತಾಯಿಯಾಗಿ ರೂಪುಗೊಂಡಿದ್ದಾಳೆ.

ಕುವೆಂಪು 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಹೂವಯ್ಯನಂತಹ ಆದರ್ಶ ವ್ಯಕ್ತಿಯನ್ನಿಟ್ಟುಕೊಂಡು ಪ್ರಕೃತಿಯನ್ನು ಆರಾಧಿಸುವುದು, ಮಲೆನಾಡಿನ ಪುರೋಹಿತಶಾಹಿ ವರ್ಗದವರ ಕಂದಾಚಾರಗಳನ್ನು ಬಯಲಿಗೆಳೆಯುವುದಕ್ಕೂ, ಯು.ಆರ್.ಅನಂತಮೂರ್ತಿ 'ಭಾರತೀಪುರ' ಕಾದಂಬರಿಯಲ್ಲಿ ವಿದೇಶದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಊರಿಗೆ ಹಿಂತಿರುಗಿದ ಜಗನ್ನಾಥನಂತಹ ವ್ಯಕ್ತಿಗಳನ್ನು ಇಟ್ಟುಕೊಂಡು ಕಾದಂಬರಿಯನ್ನು ಪೋಷಿಸುವುದಕ್ಕೂ, ಲಂಕೇಶ್ ಜಗಳಗಂಟಿಯಾಗಿರುವ ವಿದ್ಯಾಭ್ಯಾಸವಿಲ್ಲದ ತೀರಾ ಹಳ್ಳಿಯಲ್ಲಿ ಬದುಕುತ್ತಿರುವ ರಂಗವ್ವ, ರಾಮಿ, ರುದ್ರಿಯರನ್ನು ಇಟ್ಟುಕೊಂಡು ಕಾದಂಬರಿಯನ್ನು ಪೋಷಿಸುವುದು ದೊಡ್ಡ ಸವಾಲಾಗಿದೆ.

ಕುವೆಂಪುರವರ ಹೂವಯ್ಯ, ಅನಂತಮೂರ್ತಿಯವರ ಜಗನ್ನಾಥ ಹಳ್ಳಿಯಿಂದ ಪಟ್ಟಣಕ್ಕೆ ತೆರಳಿ ಆಧುನಿಕ ಶಿಕ್ಷಣವನ್ನು ಪಡೆದುಕೊಂಡು ಕೆಲವೊಂದು ಆದರ್ಶ ತತ್ವಗಳನ್ನು ಇಟ್ಟುಕೊಂಡು ಹಳ್ಳಿಗೆ ಮರಳುತ್ತಾರೆ. ತಮ್ಮ ಆದರ್ಶಕ್ಕೆ ಸಂಪೂರ್ಣ ವಿರುದ್ಧವಾಗಿರುವ ವರ್ಗ ಅಸಮಾನತೆ, ಜಾತಿ ಅಸಮಾನತೆ, ಮೂಢನಂಬಿಕೆಗಳನ್ನು ನಾಶಮಾಡುವ ಪ್ರಯತ್ನವನ್ನು ಮಾಡುತ್ತಾರೆ. ಜಗನ್ನಾಥ ಹರಿಜನರನ್ನು ದೇವಸ್ಥಾನದ ಒಳಗೆ ಪ್ರವೇಶ ಮಾಡಿಸುವ ವಿಶೇಷ ಆಂದೋಲವನ್ನು ಮಾಡುತ್ತಾನೆ. ಇದಕ್ಕೆ ಪತ್ರಿಕಾ ಪ್ರಚಾರವೂ ಸಿಗುತ್ತದೆ ಮತ್ತು ಮಾರ್ಗರೆಟ್‌ಗೆ ಪತ್ರದ ಮೂಲಕ ತನ್ನ ಸುಧಾರಣೆಯ ಬಗ್ಗೆ ಮಾಹಿತಿ ನೀಡುತ್ತಿರುತ್ತಾನೆ. ಕೆಲವರೊಂದಿಗೆ ಆ ಬಗ್ಗೆ ಚರ್ಚಿಸುತ್ತಾನೆ. ವಿದ್ಯಾವಂತ ಜನ ಅವನಿಗೆ ಪ್ರೋತ್ಸಾಹ ನೀಡುತ್ತಾರೆ ಆದರೆ 'ಮುಸ್ಸಂಜೆಯ ಕಥಾ ಪ್ರಸಂಗ'ದ ರಂಗವ್ವ, ಹಳ್ಳಿಗಾಡಿನ ಅನಕ್ಷರಸ್ಥೆ, 'ಅಕ್ಕ' ಕಾದಂಬರಿಯ 'ದೇವೀರಿ' ಪಟ್ಟಣದೊಳಗಿರುವ ಅನಕ್ಷರಸ್ಥೆ. ಅಪಾರ ಸಿಟ್ಟು, ದ್ವೇಷ, ಪ್ರೀತಿ ಮುಂತಾದ ಗುಣಗಳಿರುವ ರಂಗವ್ವ ಕಾದಂಬರಿಯ ಆರಂಭದಲ್ಲಿ ಗೊಂದಲ, ಭಯ, ಜಾತೀಯತೆಯ ಕಟ್ಟುಪಾಡು ಮುಂತಾದವುಗಳನ್ನು ಎದುರಿಗಿಟ್ಟುಕೊಂಡು ಯಾರಿಗೂ ಅಂಜದೆ ಕಾಲಕ್ಕೆ ತಕ್ಕಂತೆ ಆಗುತ್ತಿರುವ ಬದಲಾವಣೆಗೆ ಸ್ಪಂದಿಸುತ್ತಾ ಕೊನೆಯಲ್ಲಿ ಎಲ್ಲಾ ಚೌಕಟ್ಟನ್ನು ತೊರೆದು ಜಾತೀಯತೆ, ಮನಸ್ಸಿನ ಸಣ್ಣತನವನ್ನು

ಕಳಚಿ 'ತನ್ನ ಬದುಕು' ಎಂಬ ಗೋಡೆಯನ್ನು ತೊಡೆದುಹಾಕಿ ಬೇರೆ ಬದುಕನ್ನು ನೇರ ದೃಷ್ಟಿಯಿಂದ ನೋಡುವ, ಅನುಭವಿಸುವಷ್ಟರ ಮಟ್ಟಿಗೆ ಅವಳ ವ್ಯಕ್ತಿತ್ವದಲ್ಲಿ ಬದಲಾವಣೆಗಳು ಆಗಿರುತ್ತವೆ. ಇಂತಹ ರಂಗವ್ವನನ್ನು ಕಾದಂಬರಿಯಲ್ಲಿ ಬೆಳೆಸಿರುವ ಲಂಕೇಶರ ಬರವಣಿಗೆ ಒಂದು ಸವಾಲೆ ಸರಿ. ಕೊಳಗೇರಿ ಪ್ರದೇಶದಲ್ಲಿ ಖಡವಾ, ನಾಗ್ರರೊಂದಿಗೆ ಸೇರಿಕೊಂಡು ವೇಶ್ಯಾವೃತ್ತಿಯನ್ನು ಮಾಡುತ್ತಿರುವ ಹೆಣ್ಣೊಬ್ಬಳನ್ನು ಇಟ್ಟುಕೊಂಡು ಅವಳ ಸುತ್ತ ಕಾದಂಬರಿ ಹೆಣೆದಿರುವುದು ಲಂಕೇಶರ ಬರವಣಿಯ ಮತ್ತೊಂದು ಸವಾಲಾಗಿದೆ.

ಹೀಗೆ ಲಂಕೇಶರು ತಮ್ಮ ಕಾದಂಬರಿಯಲ್ಲಿ ಸ್ತ್ರೀಯನ್ನು ಕೇಂದ್ರವಾಗಿಟ್ಟುಕೊಂಡು ಮಾನವ ಬದುಕಿನ ಅನೇಕ ಮಜಲುಗಳನ್ನು ಬಯಲಿಗೆಳೆಯುತ್ತಾರೆ. ಕಾದಂಬರಿಕಾರನ ಜೀವನ ದೃಷ್ಟಿ, ಜೀವಂತವಾದ ಬದುಕಿನ ಕಡೆಗೆ ತುಡಿಯುವುದನ್ನು ಕಾಣುತ್ತೇವೆ. ನಿಜವಾದ ಜೀವಂತಿಕೆಯನ್ನು, ಲಂಕೇಶರು ವಿದ್ಯಾವಂತರಲ್ಲದ ಗ್ರಾಮೀಣ ಪ್ರದೇಶದಲ್ಲಿ ಬದುಕುತ್ತಿರುವ ಸ್ತ್ರೀಯರಲ್ಲಿ ಕಾಣುತ್ತಾರೆ. ಇಂತಹ ಸ್ತ್ರೀಯರಲ್ಲಿ ಆದರ್ಶದ ಸೋಂಕಿಲ್ಲದ ಬದುಕಿನ ತುಡಿತ ಹೋರಾಟಗಳನ್ನು ಚಿತ್ರಿಸುವುದು ಲಂಕೇಶ್ ಕಾದಂಬರಿಯ ವಿಶಿಷ್ಟತೆ.

ಅಡಿ ಟಿಪ್ಪಣಿಗಳು

೧. ಮುಸ್ಸಂಜೆಯ ಕಥಾ ಪ್ರಸಂಗ

ಪಿ. ಲಂಕೇಶ್

ಮೂರನೇ ಮುದ್ರಣ ೧೯೮೭

'ಪತ್ರಿಕೆ' ಪ್ರಕಾಶನ

೨. ಮುಸ್ಸಂಜೆಯ ಕಥಾ ಪ್ರಸಂಗ

೩. ಅಕ್ಕ – ಪಿ. ಲಂಕೇಶ್

ಎರಡನೇ ಮುದ್ರಣ ೧೯೯೪

'ಪತ್ರಿಕೆ' ಪ್ರಕಾಶನ

೪. 'ಬಿರುಕು' – ಪಿ.ಲಂಕೇಶ್

ಎರಡನೇ ಮುದ್ರಣ ೧೯೯೬

ಪತ್ರಿಕೆ ಪ್ರಕಾಶನ

೫. ಮುಸ್ಸಂಜೆಯ ಕಥಾ ಪ್ರಸಂಗ

೬. ಯಾರ ಜಪ್ತಿಗೂ ಸಿಗದ ನವಿಲುಗಳು

[ದೇವನೂರು ಮಹಾದೇವರ ಸಾಹಿತ್ಯ ಕುರಿತು]

'ಒಡಲಾಳದ ಆಧ್ಯಾತ್ಮಿಕ ಜಯ' – ಯು.ಆರ್. ಅನಂತಮೂರ್ತಿ

೭. ಮುಸ್ಸಂಜೆಯ ಕಥಾ ಪ್ರಸಂಗ

೮. ಮುಸ್ಸಂಜೆಯ ಕಥಾ ಪ್ರಸಂಗ

೯. ಮುಸ್ಸಂಜೆಯ ಕಥಾ ಪ್ರಸಂಗ

೧೦. ಅಕ್ಕ

೧೧. ಅಕ್ಕ

೧೨. ೧೩. 'ಬಿರುಕು'

೧೪. ಮುಸ್ಸಂಜೆಯ ಕಥಾ ಪ್ರಸಂಗ

ಅಧ್ಯಾಯ ೩

ಸ್ತ್ರೀವಾದಿ ದೃಷ್ಟಿಕೋನದಿಂದ ಲಂಕೇಶ್ ಕಾದಂಬರಿಗಳ ಅಧ್ಯಯನ

ಅಧ್ಯಾಯ ೩

ಸ್ತ್ರೀವಾದಿ ದೃಷ್ಟಿಕೋನದಿಂದ ಲಂಕೇಶ್ ಕಾದಂಬರಿಗಳ ಅಧ್ಯಯನ

ಲಂಕೇಶರ 'ಬಿರುಕು', 'ಮುಸ್ಸಂಜೆಯ ಕಥಾ ಪ್ರಸಂಗ', 'ಅಕ್ಕ', ಈ ಕಾದಂಬರಿಗಳು ಸ್ತ್ರೀ ಕೇಂದ್ರಿತ ನೆಲೆಯ ಕಾದಂಬರಿಗಳು ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ಗುರುತಿಸಿದ್ದೇವೆ. ಲಂಕೇಶರ ಕಾದಂಬರಿಗಳು ಸ್ತ್ರೀ ಕೇಂದ್ರಿತ ನೆಲೆಯಲ್ಲಿದ್ದಾವೆ ಎನ್ನುವಾಗಲೂ ಯಾವ ರೀತಿಯಲ್ಲಿ ಸ್ತ್ರೀ ಕೇಂದ್ರಿತ? ಎಂಬ ಪ್ರಶ್ನೆ ಮೂಡುತ್ತದೆ. ಲಂಕೇಶ್ ಒಬ್ಬ ಬರಹಗಾರನಾಗಿ ಸ್ತ್ರೀಯರ ಬದುಕಿನ ನಾನಾ ಮಜಲುಗಳನ್ನು ಸೂಕ್ಷ್ಮವಾಗಿ, ತೀವ್ರವಾಗಿ ಗಮನಿಸಿದ್ದಾರೆ. ಇವರ ಕಾದಂಬರಿಗಳಲ್ಲಿ ಸಹಜವಾದ ಸಂವೇದನೆಯನ್ನು ಇಟ್ಟುಕೊಂಡ ಸ್ತ್ರೀ ಕಂಡುಬರುತ್ತಾಳೊ ಅಥವಾ ಸ್ತ್ರೀಯ ಮನಸ್ಸಿನ ಭಾವನೆಯನ್ನು ಹೊರ ಗೆಡಹುವಾಗ ಪುರುಷ ಮೌಲ್ಯಗಳು ಕಂಡೂಕಾಣದಂತೆ ಹೇಗೆ ಅನಾವರಣಗೊಂಡಿದೆ? ಎಂಬುದು ಮುಖ್ಯವಾಗುತ್ತದೆ. ಈ ಪ್ರಶ್ನೆಯನ್ನು ಇಟ್ಟುಕೊಂಡು ಸ್ತ್ರೀವಾದಿ ದೃಷ್ಟಿಕೋನದಿಂದ ಲಂಕೇಶ್ ಕಾದಂಬರಿಗಳ ಅಧ್ಯಯನವನ್ನು ಮಾಡಬಹುದು.

ಮೂರು ಕಾದಂಬರಿಗಳಲ್ಲಿ ವ್ಯಕ್ತಿಗಳ ಆಸೆ, ಆಕಾಂಕ್ಷೆಗಳನ್ನು ಹೊಂದಿರುವ ಎರಡು ರೀತಿಯ ಸ್ತ್ರೀಯರು ಕಂಡು ಬರುತ್ತಾರೆ.

೧. ಪುರುಷ ವರ್ಗಗಳಿಗೆ ಹೆದರದೆ ತಮ್ಮ ಆಯ್ಕೆಯನ್ನು ಆಸೆಯನ್ನು, ಧೈರ್ಯವಾಗಿ ಪೂರೈಸಿಕೊಳ್ಳುವ ಸ್ತ್ರೀಯರು.

೨. ಪುರುಷ ಸಮುದಾಯದ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಲು ಬಯಸಿದವರೂ ಕೂಡ ಮತ್ತೆ ಆ ವ್ಯವಸ್ಥೆಯ ಒಳಗೆ ಬದುಕು ನಡೆಸುವ ಸ್ತ್ರೀಯರು.

ಇದನ್ನು ನಾವು 'ರಾಮಿ'ಯ ಚಿತ್ರಣದಲ್ಲಿ ಕಾಣಬಹುದು.

ಮೊದಲ ವರ್ಗದ ಸ್ತ್ರೀಯರಲ್ಲಿ ರಂಗವ್ವ, ಸಾವಂತ್ರಿ, ದೇವೀರಿ, ಶಾಂತಳನ್ನು ಕಾಣಬಹುದು. ರಂಗವ್ವ, ಜೀವನ ಸಾಗಿಸಲು ಬಡ್ಡಿ ವ್ಯವಹಾರಕ್ಕೆ ಕೈ ಹಾಕುತ್ತಾಳೆ. ಆದರೆ ಭರ್ಮಣ್ಣನಂತಹ ಪುರುಷರು ಸ್ತ್ರೀಯೊಬ್ಬಳು ಏಕಾಂಗಿಯಾಗಿ ಬದುಕನ್ನು ನಡೆಸುತ್ತಿರುವುದರ ಲಾಭವನ್ನು ಪಡೆಯಲು ಹೊಂಚುಹಾಕುತ್ತಾರೆ. ಯಾವ ಸಂದರ್ಭದಲ್ಲೂ ಧೃತಿಗೆಡದ ರಂಗವ್ವ ಮುಂದೆ ಬ್ಯಾಡರ ಮಂಜನಿಗೆ

ತನ್ನ ಮಗಳನ್ನು ಮದುವೆ ಮಾಡಿ ಸಮಾಜದ ಜನರ ದ್ವೇಷವನ್ನು ಕಟ್ಟಿಕೊಳ್ಳುತ್ತಾಳೆ. ಯಾವುದಕ್ಕೂ ಹೆದರದ ರಂಗವ್ವ "ದೊಡ್ಡ ಮನೆ ಭದ್ರವ್ವನ ಮಗಳಾ ನಾನು ?"[೧] (ಪು.ಸಂ. ೩೪)

ಎನ್ನುತ್ತಾ ತಾಯಿಯನ್ನೇ ನೆನಪುಮಾಡಿಕೊಳ್ಳುತ್ತಾಳೆ. ಹೀಗೆ ಗ್ರಾಮೀಣ ಪ್ರದೇಶದಲ್ಲಿ ನೈಜವಾಗಿ ಕಂಡುಬರುವ ಬದುಕಿಗಾಗಿ ಎಂತಹ ಹೋರಾಟಕ್ಕೂ ಸಿದ್ದರಿರುವ ರಂಗವ್ವನಂತಹ ಸ್ತ್ರೀಯರನ್ನು ಚಿತ್ರಿಸುವ ಲಂಕೇಶರು ಅವರ ಮನದಾಳದಲ್ಲಿ ಆಗಾಗ ಗಂಡನ ಆಶ್ರಯವನ್ನು ಅಥವಾ ಒಬ್ಬ ಗಂಡು ದಿಕ್ಕು ತನಗೆ ಬೇಕು ಎಂದು ಆಸೆ ಪಡುವುದನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಸ್ತ್ರೀಯರ ಅಸ್ತಿತ್ವಕ್ಕೆ ಗಂಡೊಬ್ಬನು ಬೇಕೇ-ಬೇಕು ಎಂಬ ಪುರುಷ ಸಮಾಜದ ನಿಲುವನ್ನು ಲಂಕೇಶರು ಬಿಂಬಿಸುತ್ತಾರೆ.

ಆದರೆ ತಕ್ಷಣವೆ ಮಾತೃಕುಟುಂಬದಲ್ಲಿ ಬೆಳೆದು ಬಂದಿರುವ ಸಾವಂತ್ರಿಯನ್ನು ಚಿತ್ರಿಸುತ್ತಾ ಗಂಡಸರ ಆಶ್ರಯವಿಲ್ಲದೆಯೆ ಬದುಕು ನಡೆಸಬಹುದು ಎಂಬುದನ್ನು ಸ್ಪಷ್ಟಿಕರಿಸುತ್ತಾರೆ. ಸಾವಂತ್ರಿ ಎಲ್ಲಿಯೂ ಕೂಡ ತಂದೆಗಾಗಿ ಮತ್ತು ಮಂಜನಿಗಾಗಿ ಹಂಬಲಿಸುವುದಿಲ್ಲ, ಕೊರಗುವುದಿಲ್ಲ, ಆತನನ್ನು ಬಿಟ್ಟು ಬದುಕು ನಡೆಸುವ ಧೈರ್ಯ ಅವಳಲ್ಲಿದೆ. ತನ್ನ ಜಾತಿಯವನಲ್ಲದ ಮಂಜನನ್ನು ಪ್ರೀತಿಸಲು ಸಾವಂತ್ರಿ ಬದುಕುತ್ತಿರುವ ಸಮಾಜದ ಗಂಡಸರೆ ಕಾರಣರಾಗಿದ್ದಾರೆ. ತನ್ನ ಅವ್ವ ಹೊಟ್ಟೆಯ ಪಾಡಿಗೆ ಪರದಾಡುತ್ತಿದ್ದಾಗ ಅವಳ ಮೇಲೆ ವ್ಯಭಿಚಾರದ ಅಪಾದನೆ ಹೊರಿಸಿದ್ದ ಲಿಂಗಾಯಿತರ ಬಗ್ಗೆ ಅವಳಿಗೆ ಪ್ರೀತಿ ಹುಟ್ಟುವುದು ಸಾಧ್ಯವಿರಲಿಲ್ಲ.

"ಎಲ್ಲಕ್ಕಿಂತ ಹೆಚ್ಚಾಗಿ ರಂಗವ್ವ, ತನ್ನ ತಮ್ಮನನ್ನು ಹಾಡಿ ಹೊಗಳಿದಂತೆಲ್ಲ ಆಕೆ ತನ್ನನ್ನು ಅವರಿಗೆ ಕೊಡಬೇಕೆಂದು ಒಳಗೊಳಗೇ ತೀರ್ಮಾನಿಸಿರುವುದು ಗೊತ್ತಾಗಿ ಸಾವಂತ್ರಿ ಹೆಚ್ಚು ಹೆಚ್ಚು ಮಂಜನತ್ತ ಸರಿದಿದ್ದಳು."[೨] (ಪು.ಸಂ ೧೧೮)

ಹಾಗೆಯೇ ತನಗೆ ಒಲ್ಲದ ಗಂಡನ್ನು ತಾಯಿ ಮದುವೆ ಮಾಡಬೇಕೆಂದಾಗ ಅದನ್ನು ವಿರೋಧಿಸಿ ಸಾವಂತ್ರಿ ಮಂಜನನ್ನು ಪ್ರೀತಿಸುತ್ತಾಳೆ.

ಭರ್ಮಣ್ಣ ಹೆಂಡತಿಯರಾದ ರಾಮಿ, ರುದ್ರಿಯರು ಮುಖ್ಯವಾಗಿ ಬಯಸುವುದು ದಾಂಪತ್ಯ ಸುಖ ಮತ್ತು ಗಂಡನ ಸಹಜ ಪ್ರೀತಿ, ಆದರೆ ಇವರ ಬೇಡಿಕೆಗಳಿಗೆ ಅಡ್ಡಿ ಇರುವ ಅಂಶಗಳನ್ನು ಸ್ತ್ರೀಪರ ಅನುಭೂತಿಯಿಂದಲೆ ಗಮನಿಸಬಹುದು. ಲಂಕೇಶ್‌ರ ಕಾದಂಬರಿಯಲ್ಲಿ ಬರುವ ಸ್ತ್ರೀಯರು ದಾಂಪತ್ಯ ಸುಖದಿಂದ ವಂಚಿತರಾಗಲು ಅನೇಕ ಕಾರಣಗಳಿವೆ. ಒಮ್ಮೆ ಮದುವೆಯಾಗಿದ್ದರು, ಇನ್ನೊಂದು ಮದುವೆಯಾಗುವ ಹಂಬಲ. ದಂಪತಿಗಳ ನಡುವಿನ ಮನಸ್ಥಿತಿಯಲ್ಲಿ ಬಹಳ ಅಂತರವಿರುವುದು ಹಾಗೂ ಹಣ ಅಧಿಕಾರವೆ ಜೀವನಕ್ಕೆ ಮುಖ್ಯ ಎಂದುಕೊಂಡ ಗಂಡಂದಿರ ನಿರ್ಲಕ್ಷ್ಯಕ್ಕೆ ಗುರಿಯಾಗಿರುವುದು. ಹೆಂಡತಿಯ ವಯಸ್ಸು ಹಾಗೂ ಬಯಕೆಗಳನ್ನು ಗಂಡ ಅರ್ಥಮಾಡಿಕೊಳ್ಳದೆ ಇರುವುದನ್ನು ಕಾಣಬಹುದು. ಹೀಗಿದ್ದರೂ ಊರವರ ಮುಂದೆ ಭರ್ಮಣ್ಣನು ತನ್ನ ಅಸಮರ್ಥತೆಯನ್ನು ತೋರಿಸಿಕೊಳ್ಳುವುದಿಲ್ಲ. ಬದಲಿಗೆ ರುದ್ರಿಗೆ ಮಕ್ಕಳಾಗದೆ ಇರಲು ಅವಳಲ್ಲಿ ಇರುವ ದೋಷವೆ ಕಾರಣ ಎಂದು ಜನ ಮಾತನಾಡಿಕೊಳ್ಳುತ್ತಾರೆ.

ಲಂಕೇಶರ ಮೂರು ಕಾದಂಬರಿಗಳು ನಿರೂಪಣೆಯ ದಾಟಿಯಲ್ಲಿದೆ. ಕಾದಂಬರಿಯ ಎಲ್ಲ ವಿವರಗಳನ್ನು ನಿರೂಪಿಸುವವನು 'ಪುರುಷನೆ' ಆಗಿದ್ದಾನೆ. ಹಾಗಾಗಿ ನಿರೂಪಕ ತನ್ನ ಮಾತುಗಳನ್ನೆ ಪುಷ್ಟಿಕರಿಸುತ್ತಾ ಸಾಗುತ್ತಾನೆ. 'ಅಕ್ಕ' ಕಾದಂಬರಿಯಲ್ಲಿ 'ದೇವೀರಿ'ಯ ಬಗ್ಗೆ ಮಾತನಾಡುವ ಕ್ಯಾತ ಆಕೆಯ ಮನಸ್ಥಿತಿಯನ್ನು ಕೆಲವೆ ಕೆಲವು ಸೀಮಿತ ಸಂದರ್ಭದಲ್ಲಿ ಅವಳ ಮಾತಿನಲ್ಲಿ ವಿವರಿಸುತ್ತಾನೆ. ಮತ್ತು ಆಕೆಯ ಬದುಕಿನ ಬಗ್ಗೆ ತಾನು ಕಂಡ ಮತ್ತು ಕೇಳಿದ ಘಟನೆಯಿಂದ ಹೇಳುತ್ತಾ ಸಾಗುತ್ತಾನೆ. ದೇವೀರಿ, ಖಡವಾ, ನಾಗ್ರರ ಬಲೆಗೆ ಬೀಳಬೇಕಾದರೆ ಆಕೆಯ ಮನಸ್ಥಿತಿ ಹೇಗಿತ್ತು ಎಂಬುದನ್ನು ಎಲ್ಲಿಯು ಹೇಳುವುದಿಲ್ಲ. ಒಂದು ಸಂದರ್ಭದಲ್ಲಿ ಚಲನಚಿತ್ರ ನೋಡುವಾಗ ಯಾರೋ ಆಕೆಯ ಪಕ್ಕಕ್ಕೆ ಬಂದು ಪಿಸಪಿಸ ಮಾತನಾಡಿದಾಗ ಕೂಡಲೇ ಚಪ್ಪಲಿ ತೆಗೆದು ನಿಂತಿದ್ದ ದೇವೀರಿ ಕೊನೆಗೆ ಪ್ರೀತಿಯ ತಮ್ಮನನ್ನು ಬಿಟ್ಟು ಖಡವಾ, ನಾಗ್ರ ನೊಂದಿಗೆ ಹೋಗಬೇಕಾದ ಸಂದರ್ಭದಲ್ಲಿ ಪಟ್ಟಿರಬಹುದಾದ ವೇದನೆ, ತಳಮಳಗಳು ವ್ಯಕ್ತವಾಗುವುದೆ ಇಲ್ಲ. ಆಯಾಯ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗಬೇಕಾದ ಪ್ರಮೇಯ ಬಂದಾಗ ಸ್ತ್ರೀ ಮನಸ್ಸಿನ ಹೊಯ್ದಾಟಗಳನ್ನು ಎಲ್ಲಿಯೂ ಬಿಚ್ಚಿಡದ ಪುರುಷ ನಿರೂಪಕರನ್ನು ಕಾಣಬಹುದು.

ಮೂರು ಕಾದಂಬರಿಗಳಲ್ಲಿಯೂ ಕೆಲವು ಗಂಡಸರು ಸ್ತ್ರೀಯರನ್ನು ಭೋಗದ ವಸ್ತುಗಳಾಗಿ ನೋಡುವುದನ್ನು ಕಾಣಬಹುದು. "ಭರ್ಮಣ್ಣನ ಮಡದಿ ರಾಮಿ ಮಳೆಯಲ್ಲಿ ನೆನೆಯುವ ಘಟನೆ, ಹಾಲುಮಠದ ಸ್ವಾಮಿಗಳು ತನ್ನ ಮನೆಯಲ್ಲಿ ನೈವೇದ್ಯ ಸ್ವೀಕರಿಸುತ್ತಿರುವಾಗ ಅದೇ ರಾಮಿ ಬಚ್ಚಲ ಬಳಿಯಲ್ಲಿ ತುಂಡುಡುಗೆಯಲ್ಲಿ ಕೂತು, ಸ್ವಾಮಿಗಳಿಗೆ ಆಕೆ ಪ್ರಕಟಕೊಂಡ ಸಂದರ್ಭ. 'ಅಕ್ಕ' ಕಾದಂಬರಿಯಲ್ಲಿ ದೇವೀರಿ ಹತ್ತು-ಹದಿನಾಲ್ಕರ ಹರೆಯದ ಕ್ಯಾತನ ಅಸ್ತಿತ್ವವನ್ನೇ ಉಪೇಕ್ಷಿಸಿ ಉಡುಪು ಬದಲಾಯಿಸುವ ಘಟನೆ ಇವುಗಳ ಚಿತ್ರಣದಲ್ಲಿ ಸ್ತ್ರೀಯರ ಮನದ ಹೊಯ್ದಾಟ ಪ್ರಧಾನವಾಗದೆ ಅವರ ಅಂಗಾಂಗಳ ವರ್ಣನೆಯ ವಿವರಗಳೆ ಪ್ರಧಾನವಾಗಿ ಮೂಡಿವೆ. ಈ ಎಲ್ಲ ಪಾತ್ರಗಳ ಉಡುಗೆ-ತೊಡುಗೆ, ಹಾವ-ಭಾವ, ವರ್ತನೆಗಳು ನಿರ್ದಿಷ್ಟ ಪುರುಷವರ್ಗದ ಸುಖ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡೆ ಚಿತ್ರಣಗೊಂಡಿವೆ ಎಂಬುದರಲ್ಲಿ ಅನುಮಾನ ಉಳಿಯುವುದಿಲ್ಲ. ಎಂದರೆ ಇಲ್ಲಿ ಸ್ತ್ರೀಯರು ಸಂವೇದನೆಯುಳ್ಳ ವ್ಯಕ್ತಿಗಳಾಗದೆ ಗಂಡಿನ ಭೋಗಾಕಾಂಕ್ಷೆಯನ್ನು ಈಡೇರಿಸಲೆಂದೇ ನಿರ್ಮಾಣಗೊಂಡ ಸರಕುಗಳಾಗಿ ಚಿತ್ರಿತರಾಗಿದ್ದಾರೆ."[೩] (ಪು.ಸಂ.೧೦೭)

ಲಂಕೇಶರು, ತಮ್ಮ ಕಾದಂಬರಿಗಳಲ್ಲಿ ಅಕ್ಕ-ತಮ್ಮ, ತಾಯಿ-ಮಗನ ಸಂಬಂಧಗಳಿಗೆ ಹೆಚ್ಚು ಮಹತ್ವ ಕೊಡುತ್ತಾರಾದರೂ, ಶಾಂತಳ ಮೇಲೆ ಪ್ರೀತಿಯಿಟ್ಟುಕೊಂಡಿರುವ ಬಸವರಾಜು, ಅವಳ ದೇಹವನ್ನು ಕಾಮದ ದೃಷ್ಟಿಯಿಂದ ನೋಡಿ ಕೊನೆಗೆ 'ನೀನು ನನ್ನ ತಂಗಿಯಂತೆ' ಎನ್ನುವುದು ಹಾಗೂ ಶಾಂತಳ ತಾಯಿಯ ಬಾಹ್ಯ ಸ್ವರೂಪವನ್ನು ಚಿತ್ರಿಸುತ್ತಾ, ಅವಳನ್ನು 'ತಾಯಿ'ಯೆಂದು ಕರೆಯುತ್ತಾನೆ. ಇಲ್ಲೆಲ್ಲ ಒಂದು ಹೆಣ್ಣನ್ನು ನೋಡಿದರೆ ಉಂಟಾಗುವ 'ಅಕ್ಕ-ತಂಗಿ', 'ಅಮ್ಮ' ಎಂಬ ಭಾವನೆಯು ಕೃತಕವಾದುದು ಎಂಬಲ್ಲಿಗೆ ಬಂದು ನಿಲ್ಲುವ ನಿಲುವು ಅಪಾಯಕಾರಿಯಾದುದು. "ವಿಚಾರವಾದಿ ಲೇಖಕನಿಗೆ ಸಮಾಜವು ಲೈಂಗಿಕ ಜೀವನಕ್ಕೆ ಸಂಬಂಧಿಸಿದಂತೆ ಆರೋಗ್ಯಕರ ವ್ಯವಸ್ಥೆಗೆ ಒಳಪಡಬೇಕು ಎಂಬ ಆಶಯವು ಅವಾಸ್ತವಿಕವಾದ ಆದರ್ಶ ಎನ್ನಿಸುವುದು ಆಶ್ಚರ್ಯದ ಸಂಗತಿ". [೪] (ಪು.ಸಂ.೧೨೪)

ಅಕ್ಕ, ಅಣ್ಣ, ತಮ್ಮ, ತಂಗಿ, ತಾಯಿ ಎಂಬ ಭಾವನೆಗಳು ಕೇವಲ ರಕ್ತ ಸಂಬಂಧದಿಂದ ಮಾತ್ರ ಉಂಟಾಗಬೇಕೆ? ರಕ್ತ ಸಂಬಂಧವನ್ನು ಮೀರಿದ ಹೃದಯ ಸಂಬಂಧದಿಂದ, ಅಂತಹ ಸುಮಧುರ ಬಂಧಗಳು ಉಂಟಾದರೆ ಸಮಾಜ ಕೋಮುಗಲಭೆ, ವರ್ಗ, ವರ್ಣ ಮುಂತಾದ ಎಲ್ಲ ಭೇದಭಾವವನ್ನು ತೊರೆದು ಮಾನವೀಯ ಅನುಬಂಧದಿಂದ ಆರೋಗ್ಯಕರವಾಗಿ ಸೃಷ್ಟಿಗೊಳ್ಳಬಹುದು. ಪ್ರಸ್ತುತ ಮನುಷ್ಯನ ಮನಸ್ಸು ಎಷ್ಟು ವಿಕೃತಗೊಳ್ಳುತ್ತಿದೆಯೆಂದರೆ, ಎರಡು-ಮೂರು ವರ್ಷದ ಹೆಣ್ಣು ಮಗುವನ್ನು ಮೂವತ್ತು-ನಲವತ್ತು ವರ್ಷದ ಗಂಡಸು ಅತ್ಯಾಚಾರ ಮಾಡುವುದು ಹಾಗೂ ತಂದೆ-ಮಗಳನ್ನೆ ಕಾಮಿಸುವಷ್ಟರ ಮಟ್ಟಿಗೆ ಮನಸ್ಸುಗಳು ವಿಕಲಗೊಳ್ಳುತ್ತಿವೆ. ಇಂತಹ ವಿಕಲತೆಗಳು ನಾಶವಾಗಬೇಕಾದರೆ 'ಭ್ರಾತೃತ್ವ'ದಂತಹ ನಿಷ್ಕಳಂಕ ಭಾವನೆಗಳು ಪ್ರತಿ ಹೃದಯಗಳಲ್ಲಿಯೂ ನೆಲೆಗೊಳ್ಳಬೇಕು. ಇಂತಹ ಭಾವವನ್ನು ಸಹೃದಯರಲ್ಲಿ ಉಂಟುಮಾಡುವುದು ಜವಾಬ್ದಾರಿಯುತ ಲೇಖಕನ ಕರ್ತವ್ಯ.

ಕ್ಯಾತ ಮತ್ತು ಕರಿಯನಂತಹ ಚಿಕ್ಕ ಬಾಲಕರು ಕೂಡ ಹೆಣ್ಣನ್ನು ನೋಡುತ್ತಿದ್ದಂತೆ ಅವರ ಮನಸ್ಸಿನಲ್ಲಿ ಉಂಟಾಗುವ ಭಾವ ಲೈಂಗಿಕತೆಗೆ ಸಂಬಂಧಿಸಿದೆ ಆಗಿದೆ. "ದೇವೀರಿ ಈಗ ಅನ್ನಕ್ಕೆ ಉಪ್ಪು ಕಲಸಿ ಗೊಣಗುತ್ತಲೇ ತನ್ನ ಹರಕಲು ಕುಪ್ಪಸ ತೆಗೆದು ಒಳ್ಳೆಯ ಜಾಕೀಟಿಗಾಗಿ ಹುಡುಕುತ್ತಿದ್ದಳು. ಅಕ್ಕನ ಕಡೆ ಹೀಗೆ ನೋಡಬಾರದೆಂದು ಎಷ್ಟು ಬೈದುಕೊಂಡರೂ 'ನೋಡಿದರೇನಾತು' ಎಂದುಕೊಂಡು ಕಣ್ಣಂಚಿನಲ್ಲಿ ನೋಡಿದ. ಆಕೆ ಬೇಗ ಜಾಕೀಟು ಸಿಕ್ಕಬಹುದೆಂದು ಹಾಗೆ ತೆಗೆದು ಸೆರಗನ್ನು ಕೂಡ ಎದೆಗೆ ಹಾಕಿಕೊಳ್ಳದೆ ಹಳೆಯ ಪೆಟ್ಟಿಗೆಯಲ್ಲಿ ತಡಕಾಡಿದಳು. ಅವಳ ಎದೆ ಕುಂಬಳ ಗಾತ್ರದ ಕುರುವಿನಂತಿತ್ತು, ಅದರ ತುದಿಯಲ್ಲಿ ಒಂಚೂರು ಕೆಂಪಾಗಿತ್ತು".[೫] (ಪು.ಸಂ.೬).

ಹೀಗೆ ತನ್ನ ಅಕ್ಕ ಮತ್ತು ತಾಯಿಯಂತೆ ಸಾಕುತ್ತಿರುವ ದೇವೀರಿ ಉಡುಪನ್ನು ಬದಲಾಯಿಸುವಾಗ ಕದ್ದು ಮುಚ್ಚಿ ನೋಡುವುದು, ಅವಳ ದೇಹದ ಭಾಗವನ್ನು ಒಬ್ಬ ತಮ್ಮನ ಕಣ್ಣಿನ ಮೂಲಕ ವರ್ಣಿಸುವುದನ್ನು ಗಮನಿಸಿದಾಗ ಸ್ತ್ರೀಯರ ಅಂಗಾಂಗಗಳ ವರ್ಣನೆಗೆ ಹೆಚ್ಚು

ಬೆಲೆ ಕೊಡುತ್ತಾರೆಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಪುರುಷರಲ್ಲಿ ಬಾಲ್ಯದಿಂದಲೂ ಹೆಣ್ಣಿನ ಬಗ್ಗೆ ಆಕೆಯ ಅಂಗಾಂಗದ ಬಗ್ಗೆ ಕಾಮಭಾವನೆ ಉಂಟಾಗುತ್ತದೆ ಎಂಬುದರ ಅರಿವಾಗುತ್ತದೆ.

ಸಂಸ್ಕೃತ ಸಾಹಿತ್ಯ ಮತ್ತು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅಷ್ಟಾದಶ ವರ್ಣನೆಗಳ ಅಂಗವಾಗಿ ಚಿತ್ರಿತವಾಗುವ ಸನ್ನಿವೇಶಗಳಲ್ಲೆಲ್ಲ ಹೆಣ್ಣಿನ ಪ್ರತಿಯೊಂದು ಅಂಗವನ್ನು ಹಾಗೆಯೇ ವರ್ಣಯಿಸುವ ಸನ್ನಿವೇಶ ಪ್ರಾಚೀನ ಸನ್ನಿವೇಶದಲ್ಲಿ ನಡೆಯಿತು. ನವ್ಯ-ನವ್ಯೋತ್ತರ ಕಾಲಘಟ್ಟದಲ್ಲಿ ಲಂಕೇಶ್ ಅವರ ಕೃತಿಗಳಲ್ಲಿಯೂ ಸ್ತ್ರೀಯರ ಅಂಗಾಂಗ ವರ್ಣನೆ ಮುಖ್ಯವಾಗಿ ಕಂಡು ಬಂದಿತು.

ಕೆಲವು ಪುರುಷರು ಸ್ತ್ರೀಯರನ್ನು ಅವರ ಹಾವ ಭಾವಗಳನ್ನು ಸಂಶಯದಿಂದಲೆ ನೋಡುತ್ತಾರೆ. “ಅವಳು ತನ್ನ ರಟ್ಟೆಗಳನ್ನು ನನ್ನ ಬೆನ್ನಿನ ಹತ್ತಿರ ಇಟ್ಟುಕೊಂಡಿದ್ದಳು. ಅವು ಯಾವ ಕ್ಷಣದಲ್ಲಾದರೂ ನನ್ನನ್ನು ಬೆಳೆಸಬಹುದು ಎಂದೆನ್ನಿಸಿತು. ತೊಡೆ ಬೇರೆ ನನ್ನ ತೊಡೆಗೆ ತಾಗುತ್ತಿತ್ತು”. [೬] (ಪು.ಸಂ.೧೭-೧೮) ಎಂಬಲ್ಲಿ ಬಸವರಾಜುವಿನಂತಹ ವಿದ್ಯಾವಂತ ತನ್ನ ಗುರುವಿನ ಹೆಂಡತಿಯನ್ನು ಸಂಶಯದಿಂದ ಕಾಣುತ್ತಾನೆ. ಪ್ರೊಫೆಸರ್ ಹೆಂಡತಿ ವಿದ್ಯಾವಂತೆ ಮತ್ತು ಬಸವರಾಜನಷ್ಟೆ ವಯಸ್ಸಿನ ಮಗಳಿರುವ ತಾಯಿಯಾದ ಈಕೆ ಬಸವರಾಜನನ್ನು ಕಾಮದ ದೃಷ್ಟಿಯಿಂದ ನೋಡುವ ಅಗತ್ಯವೇನಿತ್ತು?. ಎಲ್ಲಿಯೂ ಕೂಡಾ ಶಾಂತಳ ತಾಯಿಯ ಮನಸ್ಸಿನ ಅಭಿಪ್ರಾಯವನ್ನು ಹೊರಗೆಡಹುದೆ ಇಲ್ಲ.

ಹಾಗೆಯೆ, ಶಿವನಂಜನು ರಂಗವ್ವನ ವ್ಯಭಿಚಾರ ತನಗೆ ಗೊತ್ತಿದ್ದದ್ದನ್ನು ಹೇಳುತ್ತಾನೆ. ಆದರೆ ಎಲ್ಲಿಯೂ ನೋಡಿರುವುದಿಲ್ಲ. ಭರ್ಮಣ್ಣನು ರಂಗವ್ವ ವ್ಯಭಿಚಾರ ಮಾಡುತ್ತಾಳೆ ಎಂದು ಭಾವಿಸುತ್ತಾನೆ. ಆದರೆ, ಲೈಂಗಿಕ ಚೌಕಟ್ಟನ್ನು ಮೀರದ ರಂಗವ್ವ ಶ್ರೇಷ್ಠಿಯ ಮೇಲೆ ಮನಸ್ಸಿದ್ದರೂ ಕೂಡ ಅಂತಹ ಕಾರ್ಯಕ್ಕೆ ಕೈಹಾಕುವುದಿಲ್ಲ.

ದೇವೀರಿಯ ತಮ್ಮ ಕ್ಯಾತ ತನ್ನ ಅಕ್ಕನನ್ನು ಸಂಶಯದಿಂದಲೆ ಕಾಣುತ್ತಾನೆ. ನರಸಿಂಹ ಮೇಸ್ತ್ರಿಯೊಂದಿಗೆ ಹೋಟೆಲ್‌ಗೆ ಬಂದಿರುವ ಆಂಧ್ರದ ಹುಡುಗಿಯನ್ನು ದೇವೀರಿ ಎಂದೇ ಭಾವಿಸುತ್ತಾನೆ. ಹೀಗೆ ಕಾದಂಬರಿಯಲ್ಲಿ ಗಂಡಸರು ಹೆಣ್ಣಿನ ಬಗ್ಗೆ ಸಂಶಯವಿಟ್ಟುಕೊಂಡೆ ಆಕೆಯನ್ನು ಲೈಂಗಿಕ ಸಾಮಗ್ರಿಯಂತೆ ಕಾಣುವ ಪ್ರವೃತ್ತಿಯನ್ನು ಗಮನಿಸಬಹುದು.

“ಪುರುಷ ಪ್ರಧಾನ ಸಮಾಜದ ಮೌಲ್ಯಗಳು ವ್ಯಕ್ತಿಗಳಲ್ಲಿ ಹೇಗೆ ಅಂತಸ್ಥವಾಗಿ ಪ್ರವಹಿಸುತ್ತಿರುತ್ತವೆ ಎಂಬುದನ್ನು ಲಂಕೇಶರು ಗುರುತಿಸಿದ್ದಾರೆ. ಕ್ಯಾತನಿಗೆ ಆತನ ವಯಸ್ಸಿನ ಕಾರಣಕ್ಕಾಗಿ ದೇವೀರಿಯ ಯೌವನದ ಸೆಳೆತ, ಒತ್ತಡಗಳು ಅರ್ಥವಾಗುವುದಿಲ್ಲ. ಆತನಿಗೆ ಮುಖ್ಯವಾಗುವುದು ದೇವೀರಿ ನೈತಿಕವಾಗಿ ಕುಸಿದಿದ್ದಾಳೋ ಇಲ್ಲವೊ ಎಂಬುದು ಜೊತಗೆ ಇಂತಹ ಪಾವಿತ್ರ್ಯದ ಕುರಿತು ತನ್ನನ್ನು ತಾನೇ ನಂಬಿಸಿಕೊಳ್ಳುವ ಪ್ರಯತ್ನ ಮಾಡುವುದು. ತನ್ನಲ್ಲಿ ಅಪನಂಬಿಕೆ ಬಲವಾದಾಗ ದೇವೀರಿಯ ಕುರಿತು ಸಿಟ್ಟು, ಹತಾಶೆ, ದ್ವೇಷಗಳನ್ನು ಪ್ರಕಟಿಸುವುದು ಗಮನಾರ್ಹವಾಗುತ್ತದೆ, ಇದು ಪದ್ದಿ ಮತ್ತು ಸಿನಿಮಾ ಡೈರಕ್ಟರ್ ಪ್ರಕರಣದಲ್ಲೂ ಪುನರಾವರ್ತನೆಗೊಳ್ಳುತ್ತದೆ. ಎಂದರೆ ಎಳೆಯ ಹುಡುಗನ ಮನದಲ್ಲೂ ಮನೆಯ ಹೆಣ್ಣು ಮಕ್ಕಳ ಲೈಂಗಿಕ ಬದುಕಿನ ಮೇಲೆ ನಿಯಂತ್ರಣ ಸ್ಥಾಪಿಸುವ ಬಯಕೆ ಹೇಗೆ ಅಂತರ್ಗತವಾಗಿರುತ್ತದೆ ಎಂಬುದನ್ನು ಕಾದಂಬರಿ ಗುರುತಿಸಿದೆ. ಇದೇ ಕ್ಯಾತನಿಗೆ ತನ್ನ ಮತ್ತು ಪದ್ದಿಯ ಸಂಬಂಧ ತನ್ನ ವಯೋಸಹಜ ಕನಸು-ಕುತೂಹಲಗಳು ಬಯಕೆಗಳು ಅಸಹಜ ಎಂದು ಅನ್ನಿಸುವುದೇ ಇಲ್ಲ”[೭] (ಪು.ಸಂ ೧೦೮).

ಕ್ಯಾತ ತನ್ನಕ್ಕ ನೈತಿಕವಾಗಿ ಕುಸಿಯಬಾರದು ಎಂಬ ಭಾವನೆಯನ್ನಿಟ್ಟುಕೊಂಡು, ಪ್ರತಿ ಸಂದರ್ಭದಲ್ಲೂ ಆಕೆಯ ಮೇಲೆ ಒಂದು ದೃಷ್ಟಿಯಿಟ್ಟುಕೊಂಡೆ ಆಕೆಯ ಪ್ರತಿ ಚಲನ-ವಲನವನ್ನು ಗಮನಿಸುತ್ತಾನೆ. ಇತ್ತೀಚೆಗೆ ದೇವೀರಿ ತಂದುಕೊಂಡುವ ಬ್ರೆಡ್ಡು, ಬಿಸ್ಕತ್ತು, ಆಕೆಯ ವ್ಯಭಿಚಾರದಿಂದ ಸಿಕ್ಕ ಹಣದಿಂದ ತಂದಿರುವಂತದ್ದು ಎಂದು ಬೇಸರ ಪಟ್ಟುಕೊಳ್ಳುತ್ತಾನೆ ಮತ್ತು ಈ ಹಿಂದೆ ದೇವೀರಿ ಕಷ್ಟಪಟ್ಟು ಗಾರೆ ಕೆಲಸ ಮಾಡಿ ತಂದು ಕೊಡುತ್ತಿದ್ದ ಒಣಕಲು ರೊಟ್ಟಿಯೆ ಸವಿಯಾಗಿರುತ್ತಿತ್ತು ಅನ್ನಿಸುತ್ತಿತ್ತು. ಹೀಗೆ ಕ್ಯಾತ ಸದಾ ದೇವೀರಿಯ ಶೀಲದ ಬಗ್ಗೆ ಗುಮಾನಿಯನ್ನು ವ್ಯಕ್ತಪಡಿಸುತ್ತಲೆ ಸಾಗುತ್ತಾನೆ. ಆಕೆಯನ್ನು ಆದರಿಂದ ಬಿಡಿಸುವ ಯೋಚನೆ ಮಾಡುತ್ತಾನೆ.

ಹೀಗೆ ಹೆಣ್ಣು ಮಕ್ಕಳ ಬದುಕಿನ ಮೇಲೆ ನಿಯಂತ್ರಣ ಹೊಂದುವ ಆಸೆ ಪುಟ್ಟ ಬಾಲಕರ ಮನಸ್ಸಿನಲ್ಲಿಯೂ ಇರುವುದನ್ನು ಗಮನಿಸಬಹುದು.

ಪುರುಷ ಕೇಂದ್ರಿತ ಪ್ರಜ್ಞೆ ಸ್ತ್ರೀಯರ ಮತ್ತು ಪುರುಷರ ಸ್ವಭಾವ ಪಾತ್ರಗಳನ್ನು ನಿಶ್ಚಯಿಸುತ್ತವೆ. ಸ್ತ್ರೀಯಾಗಿರುವ ಕಾರಣಕ್ಕಾಗಿಯೆ ಆಕೆಯ ಮೇಲೆ ಕೆಲವೊಂದು ನೀತಿ-ನಿಯಮಗಳನ್ನು ಹೇರಲಾಯಿತು ಮತ್ತು ಆಕೆಯ ವ್ಯಕ್ತಿತ್ವಕ್ಕೆ ಒಂದು ಸೀಮಿತ ಚೌಕಟ್ಟನ್ನು ನಿರ್ಮಿಸಲಾಯಿತು. ಆ ನೀತಿಯ ಚೌಕಟ್ಟಿನಿಂದ ಸ್ವಲ್ಪ ಜಾರಿದರು ಕೂಡಾ ಅವಳು ಜೀವನ ಪರ್ಯಂತ ದುಃಖಿಸಬೇಕಾದ ಪ್ರಮೇಯವು ಪುರುಷ ಪ್ರಧಾನ ಸಮಾಜದಲ್ಲಿ ನಿರ್ಮಿತವಾಯಿತು. ಇಂತಹ ನೀತಿ-ನಿಯಮಗಳು ಕ್ಯಾತನಂತಹ ಪುಟ್ಟ ಬಾಲಕನಲ್ಲಿಯು ಗಟ್ಟಿಗೊಂಡು ಬೆಳೆಯುವುದನ್ನು ಕಾಣಬಹುದು. ಹೆಣ್ಣಿಗೆ ಸೀಮಿತ ಚೌಕಟ್ಟು ಇರುವ ಕಾರಣಕ್ಕಾಗಿಯೆ ಮತ್ತು ಅದರಿಂದ ಜಾರಿಗೆ ಹೆಣ್ಣಿಗೆ ಸಮಾಜದಲ್ಲಿ ಒಳ್ಳೆಯ ಬದುಕು ನಡೆಸಲು ಸಾಧ್ಯವಾಗದೆ ಇರುವುದರಿಂದಲೆ ಭರ್ಮಣ್ಣ, ಅಂಜನಿ, ಶಿವನಂಜ, ಶಿವಾಜಿಯಂತವರು ರಂಗವ್ವನಿಗೆ ವ್ಯಭಿಚಾರದ ಆರೋಪವನ್ನು ಹೊರಿಸಿ ಸಾವಂತ್ರಿಯನ್ನು ಅತ್ಯಾಚಾರ ಮಾಡುವ ಪ್ರಯತ್ನ ಮಾಡುವುದು ಹಾಗೂ ಸಾವಂತ್ರಿ-ಮಂಜನ ಪ್ರೇಮ ದೈಹಿಕ ಮಟ್ಟದವರೆಗೂ ಹೋದಾಗ ಗಾಡಿಯಲ್ಲಿ ಕೂರಿಸಿ ಅವರನ್ನು ಮೆರವಣಿಗೆ ಮಾಡಿಸುವುದು. ಲಂಕೇಶ್ ಕಾದಂಬರಿಯಲ್ಲಿ ಬರುವ ಈ ಸಂದರ್ಭಗಳು ಪುರುಷ ಪ್ರಧಾನ ಸಮಾಜದ ನಿರ್ಮಿತಿಯಿಂದ ಉಂಟಾದ ನೀತಿ-ನಿಯಮಗಳನ್ನು ಬಳಸಿಕೊಂಡ ಸಮುದಾಯಗಳಾಗಿವೆ. ರಂಗವ್ವ, ಸಾವಂತ್ರಿ, ರಾಮಿಯರನ್ನು ತಮ್ಮ ಅಡಿಯಾಳಾಗಿ ಬಳಸಿಕೊಳ್ಳುತ್ತಾರೆ.

ಆಧುನಿಕ ಸಮಾಜದಲ್ಲಿ ಗಂಡಸರಂತೆ, ಹೆಂಗಸರು ಹೊರಗೆ ಹೋಗಿ ದುಡಿಯುವ ಅಗತ್ಯ ಕಂಡುಬರುತ್ತದೆ. ಈಗಾಗಲೇ ಪುರುಷರಿಗೆ ಮಾತ್ರ ಸೀಮಿತವಿದ್ದ ಅನೇಕ ಉದ್ಯೋಗಗಳನ್ನು ಸ್ತ್ರೀಯರು ಮಾಡುತ್ತಾ, ಗಂಡಸರಿಗಿಂತ ತಾವೇನು ಕಡಿಮೆ ಇಲ್ಲವೆಂಬುವುದನ್ನು ತೋರಿಸಿಕೊಡುತ್ತಿದ್ದಾರೆ. ದುರಂತವೆಂದರೆ ಮಹಿಳೆಯ ದೈಹಿಕ ರಚನೆಯಿಂದಾಗಿ ಆಕೆ ದುಡಿಯುವ ವಲಯದಲ್ಲಿ ಗಂಡಸರ ಆಮಿಷಗಳಿಗೆ ಬಲಿಯಾಗುತ್ತಾ ಜೀವಕಳೆದುಕೊಳ್ಳುತ್ತಿದ್ದಾಳೆ ಮತ್ತು ಆಕೆಯ ದುಡಿತಕ್ಕೆ ಕೆಲವೊಂದು ಬಾರಿ ಸರಿಯಾದ ವೇತನವೂ ದೊರಕುವುದಿಲ್ಲ. ದೇವೀರಿ ಮತ್ತು ಪದ್ದಿಯರ ಬದುಕು ಕೂಡ ಇಂತಹುದ್ದೆ, ಕೊಳಗೇರಿಯಲ್ಲಿ ಬದುಕು ನಡೆಸುತ್ತಿರುವ ದೇವೀರಿ

ಹೊರಗೆ ಹೋಗಿ ದುಡಿಯಬೇಕಾದ ಅನಿವಾರ್ಯತೆ ಇದೆ. ಆದರೆ ಅವಳೆ ದುಡಿದ ಹಣವನ್ನು ಕಸಿದುಕೊಳ್ಳಬೇಕಾದ ಸ್ಥಿತಿ ಅವಳಿಗಿದೆ. ಜೊತೆಗೆ ಆಕೆಯ ಒಬ್ಬಂಟಿತನವನ್ನು ಬಳಸಿಕೊಂಡು ಖಿಡವ, ನಾಗ್ರ ಆಕೆಯನ್ನು ವ್ಯಾಪಾರಕ್ಕಾಗಿ ಬಳಸಿಕೊಳ್ಳುತ್ತಾರೆ. ಹಾಗೆಯೆ ಪದ್ದಿಯು ಕೂಡ ಸಿನಿಮಾದಿಂದ ದೊರಕುವ ಹಣದ ಆಸೆ, ಕೀರ್ತಿಗೆ ಬಲಿಬಿದ್ದು ಶಂಕರ ನಾರಾಯಣನ ದೈಹಿಕ ಆಮಿಷಗಳಿಗೆ ಬಲಿಯಾಗುವ ಸಂದರ್ಭ ಉದ್ಯೋಗಸ್ಥ ಮಹಿಳೆಯರನ್ನು ಗಂಡಸು ತನ್ನ ಸ್ವಾರ್ಥಕ್ಕೆ ಬಳಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಹೀಗೆ ಲಂಕೇಶರು ಪದ್ದಿ ದೇವೀರಿಯ ಮೂಲಕ ಪುರುಷ ಜಗತ್ತು ಸ್ತ್ರೀಯರನ್ನು ದೂಷಿಸುತ್ತಿರುವ ಬಗೆಯನ್ನು ಅನಾವರಣಗೊಳಿಸುತ್ತಾರೆ. “ಹೊರಗಿನ ದುಡಿಮೆ, ದುಡಿಮೆಗೆ ತಕ್ಕ ಪ್ರತಿ ಫಲ ಮಹಿಳೆಯ ಹಕ್ಕು ಸ್ತ್ರೀ ವಿಮೋಚನೆಯ ಅತ್ಯಂತ ಮೂಲಭೂತ ಅಗತ್ಯ ಆರ್ಥಿಕ ಸ್ವಾವಲಂಬನೆಯೆಂಬುದು ಸ್ಪಷ್ಟ ಸಂಗತಿ. ಈ ಸಂಕ್ರಮಣಾವಸ್ಥೆಯಲ್ಲಿ ಹೊರಗೆ ದುಡಿಯುವ ಮಹಿಳೆ ಹಲವು ಒತ್ತಡಗಳ ನಡುವೆ ನರಳುತ್ತಿರುವುದು ಎದ್ದು ಕಾಣುವ ಅಂಶ. ಈ ಹೊರೆಗಳಲ್ಲಿ ಮಾನಸಿಕ ಸ್ವಾಸ್ಥ್ಯವನ್ನು ಉಳಿಸಿಕೊಳ್ಳಲು ಹೊಡೆದಾಡುತ್ತಾ ಇಲ್ಲವೆ ಸೃಜನ ಶೀಲತೆಯನ್ನು ಬಿಟ್ಟುಕೊಟ್ಟು ಜಡ್ಡಾಗಬೇಕಾದ ಪ್ರಸಂಗವಿದೆ.”[೮] [ಪು.ಸಂ. ೬೮]

ಇದನ್ನು ನಾವು ದೇವೀರಿಯಲ್ಲಿ ಕಾಣಬಹುದು. ಮೊದಲು ತಮ್ಮನ ಬಗ್ಗೆ ಕಾಳಜಿವಹಿಸುತ್ತಿದ್ದ ಈಕೆ ಬರುಬರುತ್ತಾ ತಮ್ಮನನ್ನು ಮರೆತು ಅವನನ್ನು ಅನಾಥನನ್ನಾಗಿ ಮಾಡಿ ಹೊರಟು ಹೋಗುತ್ತಾಳೆ. ಅವಳು ಮಾಡುತ್ತಿರುವ ಉದ್ಯೋಗ (ಇಲ್ಲಿ ದೇವೀರಿಯ ಕೆಲಸ ‘ವೇಶ್ಯಾ ವೃತ್ತಿ’ಯಾದರೂ ಅದು ಅಕೆಯ ಜೀವನ ನಿರ್ವಹಣೆಗೆ ಸಹಾಯಕವಾಗಿರುವುದರಿಂದ ಅದನ್ನು ‘ಉದ್ಯೋಗ’ವೆಂದು ಗುರುತಿಸಿಕೊಳ್ಳಬಹುದು). ಅವಳನ್ನು ಎಲ್ಲ ಸಂಬಂಧಗಳಿಂದಲೂ ದೂರ ಹೋಗುವಂತೆ ಮಾಡುತ್ತದೆ. ಹೀಗೆ ಹೊರಗೆ ದುಡಿಯುವ ಮಹಿಳೆಯನ್ನು ಅಲ್ಲಿನ ಪುರುಷ ವರ್ಗ ನಿಷ್ಕ್ರಿಯಗೊಳಿಸುವುದನ್ನು ಕಾಣಬಹುದು. ಹೆಣ್ಣಿನ ದುಡಿಮೆಗೆ ಹೆಚ್ಚು ಮಹತ್ವವನ್ನು ನೀಡುತ್ತಾ ಉದ್ಯೋಗ ವಲಯದಲ್ಲಿ ಅವಳ ಮೇಲೆ ನಡೆಯುತ್ತಿರುವ ಶೋಷಣೆಯ ಮಜಲುಗಳನ್ನು ಅನಾವರಣಗೊಳಿಸುತ್ತಾರೆ.

ಲಂಕೇಶರು ಸ್ತ್ರೀಯರನ್ನು ಕೇಂದ್ರದಲ್ಲಿಟ್ಟುಕೊಂಡು ಕುಟುಂಬ, ಸಮಾಜದ ವಿಚಾರಗಳನ್ನು ಹೇಳಹೊರಡುತ್ತಾರೆ. ಇವು ಮುಖ್ಯವಾಗಿ ಲೈಂಗಿಕತೆಯ ಆಯಾಮವನ್ನು ಹೊಂದಿದ್ದು ಅದರ ಬಗೆಯೆ ವಿಚಾರ ಮಾಡುತ್ತಾರೆ. ಅಮಾಯಕಳು ಮುಗ್ದೆಯು ಆದ ರುದ್ರಿಗೆ ಮಕ್ಕಳಾಗದೆ ಇರುವುದಕ್ಕೆ ಆಕೆಯಲ್ಲಿನ ದೋಷವೆ ಕಾರಣ ಎನ್ನುತ್ತಾ ಭರ್ಮಣ್ಣನ ಅಸಮರ್ಥತೆಯನ್ನು ಮುಚ್ಚಿಹಾಕುತ್ತಾರೆ. ತಾಯ್ತನಕ್ಕೆ ಹೆಚ್ಚು ಬೆಲೆ ಕೊಡುವ ಸಮಾಜ ಮಗು ಹುಟ್ಟದಿದ್ದರೆ ಅದಕ್ಕೆ ಹೆಣ್ಣಿನದೆ ದೋಷವೆಂದು ಆರೋಪಿಸುತ್ತದೆ. ರುದ್ರಿಯು ಕೂಡ ಅಂತಹ ಅಪಾದನೆಯನ್ನು ಸಹಿಸಿಕೊಂಡು ಬದುಕಬೇಕಾಗುತ್ತದೆ.

ರಾಮಿ ಶಿವಾಜಿಯೊಂದಿಗೆ ಓಡಿಹೋದಾಗ ಕಂಬಳ್ಳಿಯ ಜನ ಅವಳ ಬಗ್ಗೆ ಇಲ್ಲಸಲ್ಲದ ಮಾತುಗಳನ್ನು ಹೇಳುತ್ತಾರೆ. ಆದರೆ ಸಾವಂತ್ರಿ ಮಾತ್ರ ರಾಮಿಯ ಪರವಹಿಸಿಕೊಂಡು ಇಕ್ಬಾಲನಿಗೆ ಬೈಯುತ್ತಾಳೆ "ರಾಮಿ ಏನು ಗೊತ್ತು ನಿಂಗೆ ಇಕ್ಬಾಲ ಭಾಳ ಒಳ್ಳೇಳು ಗೊತ್ತ, ಆಕೆ ಗಂಡ ಭರ್ಮಣ್ಣನೇ ಕತ್ತೆ ಮನುಷ್ಯ ಅಷ್ಟು ಚಿಕ್ಕೋಳ್ನ ಯಾಕೆ ಮದುವ್ಯಾಗಬೇಕಿತ್ತು ಅವ್ನು? ಆಕೀ ಅಪ್ಪಗೆ ಕಾಸಿನ ಆಸೆ ತೋರಿಸಿ ಕಟ್ಟಿಗಂಡ ಅವಳ್ನೂಹಾಳೂ ಮಾಡ್ದ. ತಾನು ಕೆಟ್ಟ-ಕೆಟ್ಟಮೂಳ".[೯] (ಪು.ಸಂ.೩೨೭).

ಎಂದು ರಾಮಿಯ ಔದಾರ್ಯ, ಖುಷಿ, ಸ್ನೇಹ ಪರತೆಯ ಬಗ್ಗೆ ಇಕ್ಬಾಲನಿಗೆ ತಿಳಿ ಹೇಳುತ್ತಾಳೆ. ರಾಮಿಯನ್ನು ಎಲ್ಲರು ಕೀಳಾಗಿ ನೋಡುತ್ತಿರುವಾಗ ಅವಳನ್ನು ಅರ್ಥಮಾಡಿಕೊಂಡ ಏಕೈಕ ವ್ಯಕ್ತಿ ಸಾವಂತ್ರಿ, ಹೆಣ್ಣಿನ ಮನಸ್ಥಿತಿಯನ್ನು ಹೆಣ್ಣೆ ಅರ್ಥಮಾಡಿಕೊಳ್ಳಬಲ್ಲಳು ಎಂಬುದಕ್ಕೆ ಇದೊಂದು ನಿದರ್ಶನ.

ರಂಗವ್ವನಿಗೆ ಶ್ರೇಷ್ಠಿಯ ಬಗ್ಗೆ ಆಸೆಯಿದ್ದರೂ ಕೂಡ ಅದನ್ನು ಎಲ್ಲಿಯೂ ಬಿಚ್ಚಿಡಲಿಲ್ಲ ಎಂಬುದಾಗಿ ಹೇಳುತ್ತಲೆ, ರಂಗವ್ವನ ಬಗ್ಗೆ ಬಂದಿದ್ದ ಹಾದರದ ಫುಕಾರುಗಳಲ್ಲಿ ಕೆಲವು ನಿಜವಿದ್ದದ್ದು ಸಾವಂತ್ರಿಗೆ ಗೊತ್ತಿತ್ತು ಎನ್ನುವ ಮೂಲಕ ರಂಗವ್ವನು ಲೈಂಗಿಕ ಆಸೆಗೆ ಬಲಿಬಿದ್ದವಳು ಎಂಬುದನ್ನು ಸ್ಪಷ್ಟೀಕರಿಸುತ್ತಾರೆ.

ಹೀಗೆ ಪ್ರತಿಯೊಬ್ಬ ವ್ಯಕ್ತಿಯ ಬದುಕು ಲೈಂಗಿಕ ಸುಖವನ್ನು ಪಡೆಯುವುದಕ್ಕೆ ಹಾತೊರೆಯುತ್ತಿರುತ್ತದೆ ಎಂಬ ನಿಲುವಿಗೆ ಬರುವ ಲಂಕೇಶರು ಲೈಂಗಿಕತೆಯನ್ನು ಎತ್ತಿ ಹಿಡಿಯುತ್ತಾರೆ. ಆದರೆ, "ಬದುಕು ಕೇವಲ ಲೈಂಗಿಕ ಸುಖವನ್ನು ಪಡೆಯುವುದಕ್ಕೆ ಸೀಮಿತವಾಗಿಯೂ ಇಲ್ಲ. ಸ್ತ್ರೀ ಪುರುಷರಿಗೆ ಅವರದೇ ಆದ ವ್ಯಕ್ತಿತ್ವವಿರುತ್ತದೆ. ಆ ವ್ಯಕ್ತಿತ್ವಕ್ಕೆ ಅನುಗುಣವಾದ ಕನಸುಗಳಿರುತ್ತವೆ. ಆ ಕನಸುಗಳು ವೈಯಕ್ತಿಕ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ, ಕಲಾತ್ಮಕವಾಗಿ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ ಇತರರ ಕಷ್ಟ ಸುಖಗಳಿಗೆ ಸ್ಪಂದಿಸುವುದಕ್ಕೆ, ವೈಯಕ್ತಿಕ ಮತ್ತು ಸಾಮುದಾಯಕ ಸ್ವಾತಂತ್ರ್ಯ ಘನತೆಗಳನ್ನು ಎತ್ತಿ ಹಿಡಿಯುವುದಕ್ಕೆ, ಹೀಗೆ ಹತ್ತು ಹಲವು ಆಶಯಗಳ ಪ್ರತೀಕಗಳಾಗಿರುತ್ತವೆ."[೧೦] (ಪು.ಸಂ. ೧೨೪)

ಹೀಗೆ ತಮ್ಮ ವೈಯಕ್ತಿಕ ಬದುಕಿನ ಬಗ್ಗೆ ನಾನಾ ಕನಸುಗಳನ್ನು ಇಟ್ಟುಕೊಂಡು ಮುಂದುವರೆಯುತ್ತಿರುವ ಪ್ರತಿಯೊಬ್ಬರಿಗೂ ಲೈಂಗಿಕತೆ ಬದುಕಿನ ಒಂದು ಅಂಗವಾಗಿ ಬರುತ್ತದೆಯೆ ಹೊರತು ಅದೇ ಬದುಕಾಗುವುದಿಲ್ಲ.

ಲಂಕೇಶ್ ಕಾದಂಬರಿಯಲ್ಲಿ, ಗಂಡು ಕಾಮದೃಷ್ಟಿಯನ್ನಿಟ್ಟುಕೊಂಡೆ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಲು ಮುಂದಾಗುತ್ತಾನೆ. ಉಡುಪ, ಮಮ್ತಾಜ್‌ಳನ್ನು ಮದುವೆಯಾಗಿ ಧರ್ಮದ ಕಟ್ಟುಪಾಡುಗಳನ್ನು ಮೀರಿದರೂ ಕೂಡ ಮಮ್ತಾಜ್‌ಳಿಗೆ ಜಾತಿ, ಸಮಾಜದ ಬಗ್ಗೆ ಯಾವುದೇ ಅರಿವಿಲ್ಲ. ಉಡುಪನಿಗೆ ಮಮ್ತಾಜ್ ಹೆಂಡತಿಯಾಗಿ ಮಾತ್ರ ಮುಖ್ಯಳಾಗುತ್ತಾಳೆ. ಅದೇ ರೀತಿ ಮಂಜ ಸಾವಂತ್ರಿ ಪ್ರೇಮಿಗಳಾಗಿದ್ದರು, ಪ್ರತಿ ಹಂತದಲ್ಲೂ ಮಂಜ ಸಾವಂತ್ರಿಯ ದೇಹವನ್ನು ಆಸೆಯಿಂದಾ ನೋಡುವವನೆ ಆಗಿರುತ್ತಾನೆಯೆ ಹೊರತು, ದೈಹಿಕ ಆಸೆಯನ್ನು ಮೀರಿದ ಪ್ರೇಮ ಅವರದಾಗಿರಲಿಲ್ಲ. ಕರಿಯನು ಕೂಡ ಸಾವಂತ್ರಿಯನ್ನು ಕಾಮದ ದೃಷ್ಟಿಯಿಂದಲೆ ನೋಡುತ್ತಾನೆ ದೇವೀರಿಯನ್ನು ಕ್ಯಾತ ತಾಯಿಯೆಂದು ಸಂಬೋಧಿಸಿ ಮಾತೃತ್ವದ ವೈಭವಿಕರಣವನ್ನು ಮಾಡುತ್ತಾನೆ. ಆದರೂ ದೇವೀರಿಯ ದೈಹಿಕ ರಚನೆಯನ್ನು ಕೀಳು ಭಾವನೆಯಿಂದಲೆ ವಿವರಿಸುತ್ತಾನೆ.

ಯಜಮಾನ್ಯ ವ್ಯವಸ್ಥೆಯ ಒಳಗಿರುವ ಪುರುಷರು ರಂಗವ್ವ, ಸಾವಂತ್ರಿಯಂತಹ ಸ್ತ್ರೀಯರನ್ನು ತಮ್ಮ ಅಧೀನರನ್ನಾಗಿ ಮಾಡಲು ಹೊರಡುತ್ತಾರೆ. ಅವರ ಈ ಪ್ರಯತ್ನವೆ ರಂಗವ್ವನಂತಹ ಸ್ತ್ರೀಯರ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗಿ ಪರಿಣಮಿಸುತ್ತದೆ. ಇದರಿಂದಾಗಿಯೆ ರಂಗವ್ವ ಬ್ಯಾಡರ ಮಂಜನನ್ನು ತನ್ನ ಮಗಳಿಗೆ ಮದುವೆ ಮಾಡಿ ಬ್ಯಾಡರ ಹಟ್ಟಿಗಳಿಗೆ ಹೋಗಿ ಕುಳಿತು ಉಪ್ಪಿಟ್ಟು ತಿಂದು, ಕಾಫಿ ಕುಡಿದು ಬರುವಷ್ಟರ ಮಟ್ಟಿಗೆ ಆಕೆ ಬೌದ್ಧಿಕವಾಗಿ ವಿಕಾಸವಾಗಿರುವುದನ್ನು ಕಾಣಬಹುದು.

ಕುಟುಂಬದ ಒಳಗೆ ಸಂಗೋಪನೆಯ ಕಾರ್ಯವನ್ನು ನಿರ್ವಹಿಸುವ ರಂಗವ್ವ, ದೇವೀರಿ, ಅದೇ ಸಮಯಕ್ಕೆ ಸಾಮಾಜಿಕ ವಲಯದಲ್ಲಿ ಗಯ್ಯಾಳಿಯಾಗಿ, ಜಿಪುಣಿಯಾಗಿ ಕಂಡು ಬರುತ್ತಾರೆ.

ಪುರುಷ ಪ್ರಧಾನ ಸಮಾಜದ ಮೌಲ್ಯಗಳಿಗೆ ಭರ್ಮಣ್ಣನ ಹೆಂಡತಿಯರಾದ ರಾಮಿ, ರುದ್ರಿ, ಬಲಿಯಾಗುತ್ತಾರೆ. ಗಂಡಿಗೆ ವಿವಾಹದಲ್ಲಿ ಆಯ್ಕೆಯ ಮಾನದಂಡವಿರುತ್ತದೆ. ಆದರೆ ಸ್ತ್ರೀಗೆ ಅಂತಹ ಅವಕಾಶವಿರುವುದಿಲ್ಲ. ಬದಲಿಗೆ ಗಂಡನ ಬಗ್ಗೆ ನಿಷ್ಠೆ ಹೊಂದುವುದು ಮುಖ್ಯವಾಗುತ್ತದೆ. ರಾಮಿ ಮುದುಕನಾಗಿರುವ ಭರ್ಮಣ್ಣನನ್ನು ವಿರೋಧಿಸಿ ಶಿವಾಜಿಯೊಂದಿಗೆ ಓಡಿಹೋಗುತ್ತಾಳೆ. ಮತ್ತೆ ತಂದೆಯ ಮನೆಗೆ ಹೋಗಿರುವ ಅವಳನ್ನು ನಾನಾ ವಿಧದಲ್ಲಿ ಮನಃಪರಿವರ್ತನೆ ಮಾಡುವ ಕೆಲಸ ಆಕೆಯ ತಂದೆ ಮತ್ತು ರಾಚನಿಂದ ನಡೆಯುತ್ತದೆ. "ರಾಮವ್ವ, ನೀ ಉಡಾಫೆ ಹೊಡೆದು ತಪ್ಪಿಸಿ ಕೊಂಬಾಕೆ ಆಗಲ್ಲ; ನೋಡಿದ ಮಂದಿ ಇನ್ನು ಬದುಕಿದಾರೆ; ನಿನ್ನ ಮರ್ವಾದಿ ಉಳೀಬಕು ಅಂತಿದ್ರಿ ನಾಕು ದಿನ ಅಪ್ಪನ ಮನೆಯಾಗಿದ್ದು ಬಾಯಿ ಮುಚ್ಚಂಡು ಕಂಬಳ್ಳಿಗಿ ಬಾ- ಇಲ್ಲೋ, ಜಾರಿದ ಹೆಣ್ಣು ಅನ್ನಿಸ್ಕಂಡು ಇಲ್ಲೇ ಇರು".[೧೧] (ಪು.ಸಂ. ೨೧೨)

ಎಂದು ರಾಚ ಬುದ್ಧಿವಾದ ಹೇಳುತ್ತಾನೆ. ಕೊನೆಗೆ ತಂದೆಯೊಂದಿಗೆ ಗಂಡನ ಮನೆಗೆ ಬಂದು ಇಡೀ ಊರಿನವರು ಮೆಚ್ಚುವ ಹಾಗೆ ಪತಿವ್ರತೆಯ ರೀತಿಯಲ್ಲಿ ಬದುಕು ನಡೆಸುವ ರಾಮಿಯ ವ್ಯಕ್ತಿಗತ ಮೂಲಗುಣಗಳು ಸಾಂಪ್ರದಾಯಕ ವ್ಯವಸ್ಥೆಗೆ ಬಲಿಯಾಗಿ ಜಡವಾಗುವುದನ್ನು ಕಾಣಬಹುದು.

ವಿದ್ಯಾವಂತ ದತ್ತಣ್ಣ ಮತ್ತು ಆತನ ತಂದೆಯ ವರದಕ್ಷಿಣೆಯ ವ್ಯಾಮೋಹಕ್ಕೆ ಶಿವಿಯಂತಹ ಹಳ್ಳಿಗಾಡಿನ ಮುಗ್ದ ಯುವತಿಯರು ಬಲಿಯಾಗುವುದನ್ನು ಕಾಣಬಹುದು. ಈ ವರದಕ್ಷಿಣೆಯು ಕೂಡ ಪುರುಷ ವ್ಯವಸ್ಥೆಯು ಸ್ತ್ರೀಯನ್ನು ಅಧೀನಳನ್ನಾಗಿ ಮಾಡಲು ಬಳಸಿಕೊಂಡಿರುವ ಮಾರಕಾಸ್ತ್ರವಾಗಿ ಕಂಡು ಬರುತ್ತದೆ.

ಪದ್ದಿಯೂ ಸಿನಿಮಾ ಮೋಡಿಗೆ ಸಿಕ್ಕು ತನ್ನ ಸುಖ-ಸಂತೋಷದಿಂದ ದೂರ ಸರಿಯುತ್ತಿದ್ದಾಳೆ. ಸಿನಿಮಾದ ಆಮಿಷವನ್ನು ಒಡ್ಡಿ ಪದ್ದಿಯನ್ನು ತಮ್ಮ ದೈಹಿಕ ಸುಖಕ್ಕಾಗಿ ಬಳಸಿಕೊಳ್ಳುತ್ತಾರೆ. ಅಲ್ಲಿ ಅನೇಕ ದುಃಖಗಳಿದ್ದರೂ ಕೂಡ ನಗು ನಗುತ್ತಾ ಒಡಾಡಬೇಕಾದ ಸ್ಥಿತಿ ಪದ್ದಿಯದಾಗಿರುತ್ತದೆ. ಹೀಗೆ ಸಿನಿಮಾ ಎಂಬ ಮಾಯಾ ಜಗತ್ತು ಸ್ತ್ರೀಯರನ್ನು ಬಳಸಿಕೊಳ್ಳುವುದನ್ನು ಕಾಣಬಹುದು.

ಸೃಜನಶೀಲ ಕೃತಿಯಲ್ಲಿ ಸ್ತ್ರೀಯನ್ನು ಭೋಗದ ವಸ್ತುವಾಗಿ, ಗಂಡಿನ ಅಡಿಯಾಳಾಗಿ ಚಿತ್ರಿಸುವ ಲಂಕೇಶರು, ಅದೇ ಹೆಣ್ಣೆ, ಅದೇ ಗಂಡೆ? ಎಂಬ ಲೇಖನವೊಂದರಲ್ಲಿ ಬದಲಾಗುತ್ತಿರುವ ಕಾಲಕ್ಕೆ ಅನುಗುಣವಾಗಿ ಹೆಣ್ಣು-ಗಂಡೆಂಬ ಭೇದ ಭಾವಗಳು ತೊರೆದು ಹೋಗುತ್ತಿರುವ ಬಗೆಯನ್ನು ಹೀಗೆ ವಿವರಿಸುತ್ತಾರೆ, “ಆದರೆ ಕಳೆದ ನೂರು ವರ್ಷಗಳಿಂದ ಬಿದ್ದು ಹೋಗಿರುವ ಕೋಟೆಗಳು ಮತ್ತು ಮಾಯವಾಗಿರುವ ಗುಹೆಗಳು ಮತ್ತೆ ಬರುವುದಿಲ್ಲ ಮತ್ತೆ ಗಂಡು ಮತ್ತು ಹೆಣ್ಣು ಪ್ರೇಮ, ವ್ಯಾಮೋಹದ ಗೀತೆಗಳನ್ನು ಹಾಡುತ್ತ ಬದುಕನ್ನು ರೂಢಿಸಿಕೊಳ್ಳುವ ಕಾಲ ಹಿಂದಿರುಗುವುದಿಲ್ಲ. ಒಮ್ಮೆ ಕಲಿತ ವಿದ್ಯೆ, ಗಳಿಸಿಕೊಂಡ ವಿಜ್ಞಾನ ಚಿಂತಿಸುವ ಧಾಟಿ ಸುಲಭಕ್ಕೆ ನಮ್ಮನ್ನು ತ್ಯಜಿಸುವುದಿಲ್ಲ. ಇಂತಹಸ್ಥಿತಿಯಲ್ಲಿ ಗುಹೆಯಲ್ಲಿದ್ದ ಮಾನವನ ಸರಳತೆ, ಮುಗ್ದತೆ ಮತ್ತು ಆಧುನಿಕ ಮನುಷ್ಯನ ಜವಾಬ್ದಾರಿ ಮತ್ತು ಸೂಕ್ಷ್ಮತೆಯನ್ನು ಒಟ್ಟುಗೂಡಿಸಿ ಹೆಣ್ಣು ಗಂಡಿನ ಸಂಬಂಧದ ಬಗ್ಗೆ ಸಿನಿಕರಾಗದೆ ಮತ್ತು ಭ್ರಮೆಗಳನ್ನಿಟ್ಟುಕೊಳ್ಳದೆ ಮುನ್ನಡೆಯ ಬೇಕಾಗಿದೆ . . .”[೧೨]
[ಪು.ಸಂ.೨೬]

ಎನ್ನುತ್ತಾ ಲಂಕೇಶ್ ಸ್ತ್ರೀ ಪುರುಷರನ್ನು ಸಮಾನ ಪಾತಳಿಯಲ್ಲಿ ನೋಡಬೇಕು ಎಂಬ ಆಶಯವನ್ನು ವ್ಯಕ್ತಪಡಿಸುವುದು ಸ್ತ್ರೀವಾದಿ ನೆಲೆಯಲ್ಲಿ ಗಮನಾರ್ಹವಾದುದು.

ಒಟ್ಟಿನಲ್ಲಿ ಲಂಕೇಶ್ ಕಾದಂಬರಿಯಲ್ಲಿ ಗ್ರಾಮೀಣ ಪ್ರದೇಶದ ಅವಿದ್ಯಾವಂತ ಸ್ತ್ರೀಯರೆ ಹೆಚ್ಚಾಗಿ ಕಂಡು ಬರುತ್ತಾರೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದ ಸ್ತ್ರೀಯರು ಹೆಚ್ಚು ಗಮನಸೆಳೆಯುತ್ತಾರೆ. ವಿಭಿನ್ನ ಪರಿಸರ, ಜಾತಿ, ವರ್ಗಗಳಲ್ಲಿ ಇರುವ ಸ್ತ್ರೀಯರ ವ್ಯಕ್ತಿಗತ ಸಮಸ್ಯೆಗಳಿಗೆ ಹಾಗೂ ಅಲ್ಲಿ ಛಲದಿಂದ ಬದುಕು ನಡೆಸುತ್ತಿರುವ ಸ್ತ್ರೀಯರನ್ನು ಕೆಳಗಿಳಿಸುವ ಪ್ರಯತ್ನ ಪುರುಷರಿಂದ ನಡೆಯುವುದನ್ನು ಚಿತ್ರಿಸುತ್ತಾರೆ. ಹೀಗೆ, ಲಂಕೇಶರ ಸ್ವಂತ ಅನುಭವದ ಮೇಲೆ ಜೀವನ ದೃಷ್ಟಿ, ಸ್ತ್ರೀಯರ ಬಗೆಗಿನ ಸೂಕ್ಷ್ಮತೆಯನ್ನು ಕಾಣುವ ತೀಕ್ಷ್ಣತೆ ಇದರಿಂದಾಗಿಯೆ ಸ್ತ್ರೀ ಸಂವೇದನಾ ಚಿಂತನೆಯೂ ಭಿನ್ನ ನೆಲೆಯನ್ನು ಕಂಡುಕೊಂಡಿದೆ.

ಅಡಿ ಟಿಪ್ಪಣಿ

೧. ಮುಸ್ಸಂಜೆಯ ಕಥಾ ಪ್ರಸಂಗ

– ಪಿ. ಲಂಕೇಶ್

೨. ಮುಸ್ಸಂಜೆಯ ಕಥಾ ಪ್ರಸಂಗ

– ಪಿ. ಲಂಕೇಶ್

೩. ನಿಲುಮೆ – ಲಂಕೇಶರ ಕಾದಂಬರಿಗಳ ಮರುಓದು ೭೭

ಡಾ. ಸಬಿಹಾ ಭೂಮಿಗೌಡ

ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಬೆಂಗಳೂರು.

೪. ಬೋದಿಲೇರನ ಸಖ

ಲಂಕೇಶರ ಕಥೆಗಳು; ಒಂದು ಸ್ತ್ರೀವಾದೀ ಪ್ರವೇಶದ ಸಾಧ್ಯತೆ – ಪದ್ಮಿನಿ ಹೆಗಡೆ

೫. ಅಕ್ಕ

– ಪಿ. ಲಂಕೇಶ್

೬. ಬಿರುಕು

– ಪಿ. ಲಂಕೇಶ್

೭. ನಿಲುಮೆ

ಲಂಕೇಶರ ಕಾದಂಬರಿಗಳ ಮರುಓದು ೭೭

ಡಾ. ಸಬಿಹಾ ಭೂಮಿಗೌಡ

ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಬೆಂಗಳೂರು.

೮. ಮುಸ್ಸಂಜೆಯ ಕಥಾ ಪ್ರಸಂಗ

– ಪಿ. ಲಂಕೇಶ್

೯. ಬೋದಿಲೇರನ ಸಖ

ಲಂಕೇಶರ ಕಥೆಗಳು; ಒಂದು ಸ್ತ್ರೀವಾದಿ ಪ್ರವೇಶದ ಸಾಧ್ಯತೆ – ಪದ್ಮಿನಿ ಹೆಗಡೆ

೧೦. ಮುಸ್ಸಂಜೆಯ ಕಥಾ ಪ್ರಸಂಗ

– ಪಿ. ಲಂಕೇಶ್

೧೧. ಟೀಕೆ ಟಿಪ್ಪಣಿ – ಹತ್ತೂವರೆ ವರ್ಷದ ಕೆಲವು ಬರಹಗಳು

ಪಿ. ಲಂಕೇಶ್

ಪತ್ರಿಕೆ ಪ್ರಕಾಶನ

ಬೆಂಗಳೂರು

೧೨. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ

ವಿವಿಧ ಲೇಖಕರು

ಸ್ತ್ರೀ ವಾದ ಮತ್ತು ಸ್ತ್ರೀ ವಾದಿ ವಿಮರ್ಶೆ – ಡಾ. ವಿಜಯಾದಬ್ಬೆ

ಉಪಸಂಹಾರ

ಉಪಸಂಹಾರ

ಕನ್ನಡ ಸಾಹಿತ್ಯದಲ್ಲಿ ಬಹುಮುಖಿ ವ್ಯಕ್ತಿತ್ವವನ್ನು ಹೊಂದಿರುವ ಮಹತ್ವದ ಲೇಖಕರಲ್ಲಿ ಪಿ.ಲಂಕೇಶರು ಪ್ರಮುಖರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವೈವಿಧ್ಯಮಯವಾದ ಕೃತಿಗಳನ್ನು ರಚಿಸಿದ್ದರೂ ಅವರೊಳಗಿನ ಲೇಖಕನಲ್ಲಿ ಮಿಡಿಯುವುದು ಹೆಣ್ಣೊಬ್ಬಳ ಅಥವಾ ತಾಯಿಯೊಬ್ಬಳ ಅಂತಃಕರಣ ಹಾಗೂ ತುಳಿತಕ್ಕೊಳಗಾದವರ ನೋವು.

ಪುರುಷ ಪ್ರಧಾನ ಸಮಾಜ ಸ್ತ್ರೀಯನ್ನು ಎಲ್ಲ ಕ್ಷೇತ್ರಗಳಲ್ಲಿ ದೂರವಿರಿಸಿ ತಾತ್ಸಾರ ಭಾವನೆಯಿಂದ ನೋಡುತ್ತಿದ್ದ ಸಂದರ್ಭದಲ್ಲಿ ಲಂಕೇಶ್ ತಮ್ಮ ಸಾಹಿತ್ಯದಲ್ಲಿ ಹೆಣ್ಣಿಗೆ ವಿಶೇಷವಾದ ಅಸ್ತಿತ್ವವನ್ನು ನೀಡಿದ್ದು ಮಾತ್ರವಲ್ಲದೆ, ಸಮಕಾಲೀನ ಉದಯೋನ್ಮುಖ ಬರಹಗಾರ್ತಿಯರಿಗೆ, ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಟ್ಟ ಮತ್ತು ಪ್ರೋತ್ಸಾಹ ನೀಡಿದ ವಿಶಿಷ್ಟ ವ್ಯಕ್ತಿ.

"ಸಮಕಾಲೀನ ಲೇಖಕಿಯರನ್ನು ಗುರುತಿಸಿ ಬರೆಯಲು ಪತ್ರಿಕೆ ಪುಟ ಕೊಟ್ಟಿತು. ಈಕೆ ಮಹಿಳೆ ಅಂತಲ್ಲ, ಮುಸ್ಲಿ'ಂ ಅಂತಲ್ಲ, ದಲಿತಳು ಅಂತಲ್ಲ ಅಥವಾ ಅಂತಷ್ಟಕ್ಕೆ ಅಲ್ಲ, ಬರಹದಲ್ಲಿ ಆಕೆ ತನ್ನ ಅನುಭವದಲ್ಲಿ ನಿಜಗೊಂಡ ಏನನ್ನೋ ಹೇಳಲು ಯತ್ನಿಸುತ್ತಿದ್ದಾಳೆ, ಚಿಂತಿಸುತ್ತಿದ್ದಾಳೆ ಅಂತ ತುಸು ಕಂಡರೂ ಅದು ಪ್ರಕಟವಾಗುತ್ತಿತ್ತು. ಹೀಗೆ ಕನ್ನಡ ಸಾಹಿತ್ಯಕ್ಕೆ ಹೊಸ ದನಿ, ಸಂವೇದನೆ ಸೇರಿ ಬಂತು. ಬರವಣಿಗೆ ಎಂಬುದು ನಿಲುಕದ ನಕ್ಷತ್ರ ಎಂದು ದೂರವಿದ್ದ ಅನೇಕರು ಅದನ್ನು ನಿಲುಕಿಸಿಕೊಳ್ಳುವ ದಾರಿ ಹಿಡಿದರು. ಮಹಿಳೆಯರ ಮೇಲಿನ ದೌರ್ಜನ್ಯ ವರದಿಗಾಗಿ ಇಡೀ ಪುಟಗಳನ್ನೇ ಮೀಸಲಾಗಿಟ್ಟರು ಲಂಕೇಶ್. ಸ್ತ್ರೀ ಪರ ಅಥವಾ ದಲಿತಪರ ಮುಸ್ಲಿಂಪರ ಎಂಬ ಸೀಮಿತ ಚೌಕಟ್ಟು ಮೀರಿ ಜೀವ ಪರತೆಯಿಂದ, ಸ್ವಾತಂತ್ರ್ಯಪರ ಧೋರಣೆಯಿಂದ ಮಹಿಳೆಯರ ಕುರಿತ ಪ್ರಸಂಗಗಳಲ್ಲಿ ಪತ್ರಿಕೆಗಳಿಗೆ ಹಣ ತರುವ ಸರಕಾಗಿ ಓದುಗರೆಂಬ 'ಗ್ರಾಹಕರಿಗೆ ಒದಗಿಸುವ ರೋಚಕ ಗ್ರಾಸಗಳಾಗಿ ರೆಕ್ಕೆ ಪುಕ್ಕಗಳೊಂದಿಗೆ ಬೇಕಿದ್ದರೆ ಮುಖಪುಟದ ಸೆಳೆತಗಳಾಗಿಯೂ ಹೊರ ಜೀಳುವ ಸಂದರ್ಭದಲ್ಲಿ ನೈಜ ಮಾನವೀಯ ಕಾಳಜಿಯಿಂದ ಘಟನೆಗಳ ಅಂತರ್ಯ ಶೋಧಿಸಿ

ಬರೆಸಿ, ಒಂದು ಬಗೆಯ ಸೈದ್ಧಾಂತಿಕ ಹೋರಾಟವನ್ನು ಆ ಹೆಸರು ಕೊಡದೆಯೆ ನಡೆಸಿದರು ಲಂಕೇಶ್." ೧ [ಪು.ಸಂ೨೧].

ಎಂದು ಖ್ಯಾತ ಲೇಖಕಿ ವೈದೇಹಿಯವರು ಸಾಹಿತ್ಯದಲ್ಲಿ ಮಹಿಳೆಗೆ ಒದಗಿಸಿಕೊಟ್ಟ ಸ್ಥಾನಮಾನ, ನೊಂದ ಸ್ತ್ರೀಯ ಅಳಲನ್ನು ಮಾನವೀಯ ನೆಲೆಯಲ್ಲಿ ನೋಡಹೊರಟ ಲಂಕೇಶ್ ಆತ್ಮೀಯ ಸ್ನೇಹಿತೆಯಾಗಿ ಸಾಂತ್ವನ ನೀಡಿದವರು ಎಂಬುದನ್ನು ಹೇಳುತ್ತಾರೆ.

ಇಂತಹ ಲಂಕೇಶರ ಕಾದಂಬರಿಗಳು ಸ್ತ್ರೀಪರ ಕಾಳಜಿಯುಳ್ಳವು ಮತ್ತು ಮಹಿಳೆಯ ವಿಶಿಷ್ಟ ಗುಣದ ಬಗ್ಗೆ ಒತ್ತು ನೀಡಿದವು. ಲಂಕೇಶರ ಗಮನವಿದ್ದದ್ದು ಹಳ್ಳಿಯಲ್ಲಿ ಬದುಕುತ್ತಿರುವ ಅವಿದ್ಯಾವಂತ ಸ್ತ್ರೀಯರ ಪರ. ಹಾಗಾಗಿಯೆ ಗ್ರಾಮೀಣ ಮಹಿಳೆಯಲ್ಲಿರುವ ಸಹಜ ಮುಗ್ಧತೆಯನ್ನು, ಧೈರ್ಯಗಳನ್ನು ಕಾದಂಬರಿಯಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಲಂಕೇಶ್ ಹೆಣ್ಣು ಪ್ರಪಂಚವನ್ನು ವ್ಯವಸ್ಥೆಯು ಪೋಷಿಸಿಕೊಂಡು ಬಂದಿರುವ ಹಿನ್ನಲೆಯಲ್ಲೇ ಶೋಧಿಸುವ ಕಾಳಜಿ ವ್ಯಕ್ತಪಡಿಸುತ್ತಾರೆ.

"ಬದುಕಿನ ಸುಖಗಳ ಬಗೆಗಿನ ತೆರೆದ ಮನಸ್ಸು, ಆತ್ಮಗೌರವ ಮತ್ತು ಕ್ಷುಲ್ಲಕವಾದುದರ ಬಗೆಗಿನ ತಿರಸ್ಕಾರದ ಫಲವಾದ ಲಂಕೇಶರ ಸ್ತ್ರೀ ಪಾತ್ರಗಳು ಹೆಣ್ಣಿನ ತ್ಯಾಗ ಪರತೆಗೆ ಒತ್ತು ಕೊಡುತ್ತಿದ್ದ ಪಾರಂಪರಿಕ ಮಹಿಳೆಯರಿಗಿಂತ ಭಿನ್ನವಾಗಿದ್ದರೂ ಅವರ ಹಾಗೆಯೇ ಚೈತನ್ಯದ ಪೋಷಕ ಶಕ್ತಿಯ ಕೇಂದ್ರಗಳಾಗಿದ್ದಾರೆ". ೨ [ಪು.ಸಂ.೧೧೮]

ತನ್ನ ಮತ್ತು ತಮ್ಮ ಮಕ್ಕಳನ್ನು ಸಾಕುವುದಕ್ಕಾಗಿಯೆ ಮನುಷ್ಯನ ಪ್ರತಿ ದುಡಿತ–ಹೋರಾಟಗಳು ಕಂಡು ಬರುತ್ತವೆ. ಇಂತಹ ಪಾಲನೆಯ ಗುಣವಿರುವ ಸ್ತ್ರೀಯರು ಲಂಕೇಶ್ ಕಾದಂಬರಿಯ ಕೇಂದ್ರದಲ್ಲಿದ್ದಾರೆ.

ಆಧುನಿಕ ಸಮಾಜದಲ್ಲಿ ಬದುಕುತ್ತಿರುವ ಮನುಷ್ಯರು ಭ್ರಮೆ, ನಿಜ, ಸುಳ್ಳುಗಳ ನಡುವೆ ತಾವಿರುವ ಸಮಾಜದಲ್ಲಿ ಜೀವಿಸುತ್ತಿದ್ದಾರೆ. ಮಾನವೀಯತೆಯನ್ನು ಮರೆತು ದರ್ಪ, ಅಹಂಕಾರಗಳಿಂದ ಜೀವನ ಸಾಗಿಸುತ್ತಿದ್ದಾರೆ. ಇಂತಹ ವ್ಯವಸ್ಥೆಯ ಮಧ್ಯೆ ಯಾವುದೋ ಒತ್ತಡಗಳಿಗೆ ಒಳಗಾಗಿ ಸಹಜ ಪ್ರೀತಿಯನ್ನು ವ್ಯಕ್ತಪಡಿಸಲು ಸಾಧ್ಯವಾಗದೆ ಇರುವ ಸ್ತ್ರೀಯರನ್ನು ಲಂಕೇಶ್ ಕಾದಂಬರಿಯಲ್ಲಿ ಕಾಣಬಹುದು.

ಅವಿದ್ಯಾವಂತಳಾದ ಸ್ತ್ರೀಯೊಬ್ಬಳು ಪರಂಪರಾಗತವಾದ ಜಾತಿ ವ್ಯವಸ್ಥೆಯಲ್ಲಿಯೆ ಹುಟ್ಟಿ, ಅಲ್ಲಿಯೆ ಬೆಳೆದು ಜೀವನವನ್ನು ನಿರ್ವಹಿಸುತ್ತಿರುತ್ತಾಳೆ. ಇಂತಹ ಸಂದರ್ಭದಲ್ಲಿ ಬದುಕಿನಲ್ಲಿ ಬರುವ ಎಲ್ಲ ಅಡೆ–ತಡೆಗಳನ್ನು ಸಹಜವೆಂದು ಕೊಂಡು ಅವುಗಳಿಗೆ ಅನುಗುಣವಾಗಿ ಗಟ್ಟಿಯಾಗಿ ಬೇರೂರಿರುವ ಜಾತಿಯನ್ನು ಮೀರಿನಿಲ್ಲುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಸಾಂಪ್ರದಾಯಿಕತೆಯನ್ನು ಮುರಿಯುವುದು ಒಬ್ಬ ಸಾಮಾನ್ಯ ಸ್ತ್ರೀಯಿಂದ ಸಾಧ್ಯ ಎನ್ನುತ್ತಾ ಮಹಿಳೆಗಿರುವ ಸಾಮರ್ಥ್ಯವನ್ನು ಗುರುತಿಸುತ್ತಾರೆ.

ಕಾಮ ನಿಸರ್ಗ ಸಹಜವಾದ ಅಪೇಕ್ಷೆ, ಆದರೆ ಗಂಡು ಸದಾ ಹೆಣ್ಣನ್ನು ಭೋಗದ ವಸ್ತುವಾಗಿಯೆ ಕಾಣುತ್ತಾನೆ. ಮೇರಿ ವೂಲಸ್ಟನ್ ಕ್ರಾಫ್ಟ್ ತನ್ನ ಐತಿಹಾಸಿಕ ಬರವಣಿಗೆ 'The indication of the rights of women' ದಲ್ಲಿ ಹೀಗೆ ಹೇಳುತ್ತಾಳೆ 'ಮಹಿಳೆಯನ್ನು ದೇವರು ಪುರುಷನ ಮನರಂಜನೆಗೆಂದು ಆತನ ಕಾಮ ತೃಪ್ತಿಗೆಂದು ಸೃಷ್ಟಿಸಿಲ್ಲ. ಆಕೆಗೂ ತನ್ನದೇ ಆದ ವ್ಯಕ್ತಿತ್ವವಿದೆ ಗೊತ್ತು ಗುರಿಗಳಿವೆ'.

ಆದರೆ ಲಂಕೇಶ್ ತಮ್ಮ ಸಾಹಿತ್ಯದಲ್ಲಿ ಸ್ತ್ರೀಯನ್ನು ಭೋಗದ ವಸ್ತುವಾಗಿ ಕಾಣುತ್ತಾರೆ. ಇದು ಅವರ ಮಿತಿಯೆಂದು ಪರಿಗಣಿಸಬಹುದು.

ಸಮಾಜದಲ್ಲಿ ಏನ್ರೆ ಹೋರಾಟಗಳು ನಡೆದರೂ ಜಾತಿ ಪದ್ದತಿಯನ್ನು ನಿರ್ಮೂಲನಗೊಳಿಸಲು ಹೇಗೆ ಸಾಧ್ಯವಿಲ್ಲವೊ ಹಾಗೆ, ಪುರುಷನ ಮನಸ್ಸಿನಲ್ಲಿರುವ ಸ್ತ್ರೀಯ ಬಗೆಗಿನ ಕೀಳರಿಮೆಯನ್ನು ನಾಶ ಮಾಡಲು ಸಾಧ್ಯವಿಲ್ಲ. ಆದರೆ, ಸ್ತ್ರೀಯೆ ಎಲ್ಲ ಬಂಧನಗಳಿಂದ ಬಿಡಿಸಿಕೊಂಡು ಕಟ್ಟು ಪಾಡುಗಳನ್ನು ತೊರೆದು ಸ್ವಾತಂತ್ರ್ಯಳಾಗಬೇಕು ಎಂಬುದು ಈ ಅಧ್ಯಯನದ ಆಶಯ.

ಈ ಅಧ್ಯಯನದ ಕೆಲವು ಕಡೆಯಲ್ಲಿ ಪ್ರಸ್ತುತ ಸ್ತ್ರೀಯರು ಕೆಲವು ಕ್ಷೇತ್ರಗಳಲ್ಲಿ ಎದುರಿಸುತ್ತಿರುವ ಸಮಸ್ಯೆಯ ಬಗ್ಗೆ ಒತ್ತು ನೀಡಲಾಗಿದೆ. ಇದರಲ್ಲಿ ಮುಖ್ಯವಾಗಿ 'ದುಡಿಮೆ' ಯ ವಲಯಕ್ಕೆ ಪ್ರಾಮುಖ್ಯತೆ ನೀಡಿದೆ. ಯಾವುದೇ ಅಧ್ಯಯನ ಪ್ರಸ್ತುತ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಅತಿಮುಖ್ಯ ಇಲ್ಲವಾದರೆ ಆ ಅಧ್ಯಯನಗಳು ಸಮಾಜಕ್ಕೆ ಉಪಯುಕ್ತವಾಗುವುದಿಲ್ಲ.

ಅಂತಿಮವಾಗಿ, ರಾಜೇಂದ್ರ ಚೆನ್ನಿಯವರು ಹೇಳುವಂತೆ 'ಮನುಷ್ಯತ್ವವನ್ನು ಭ್ರಷ್ಟಗೊಳಿಸುವ ಅಸ್ತಿತ್ವವನ್ನು ಇಡಿಯಾಗಿ ದಾಖಲಿಸುತ್ತಲೇ ಜೀವನೋನ್ಮುಖತೆಯನ್ನು ಸಮರ್ಥಿಸಬೇಕೆನ್ನುವ ಲಂಕೇಶರ ಆಶಯ ರಂಗಪ್ಪ, ಸಾವಂತ್ರಿಯಂಥ ಪಾತ್ರಗಳಲ್ಲಿ ಈಡೇರಿದೆ' ಎಂಬುದು ಸ್ಪಷ್ಟ.

ಸ್ತ್ರೀಯರು ಹೊಸ ನೆಲೆಗಳಲ್ಲಿ ಆಲೋಚನೆಯನ್ನು ಮಾಡುತ್ತಾ ಸಂಪ್ರದಾಯಗಳಿಂದ ಮುಕ್ತರಾಗಬೇಕು. ಇಂಥ ಶಕ್ತಿ ಅವರಲ್ಲಿಯೆ ಹುಟ್ಟಿ ಬೆಳೆಯಬೇಕು. ಇದಕ್ಕಾಗಿ ಬಾಹ್ಯ ಜಗತ್ತಿನ ಬದಲಾವಣೆಯೊಂದಿಗೆ ಮಾನಸಿಕ ಜಗತ್ತಿನ ಪರಿವರ್ತನೆಯೂ ಮಹತ್ವದ್ದಾಗುತ್ತದೆ. ಈ ಮೂಲಕ ಪರಂಪರಗತವಾದ ಪ್ರಗತಿ ವಿರೋಧಿ, ಜೀವ ವಿರೋಧಿಗಳನ್ನು ನಾಶಮಾಡಿ ಸ್ತ್ರೀ ಎಲ್ಲಾ ಬಂಧನಗಳಿಂದ ಮುಕ್ತಳಾಗಿ ಹೊಸ ಮಾದರಿಯಾಗಿ ರೂಪುಗೊಳ್ಳಬೇಕು ಎಂಬುದು ಈ ಅಧ್ಯಯನದ ಮುಖ್ಯ ಆಶಯವಾಗಿದೆ.

ಅಡಿ ಟಿಪ್ಪಣಿಗಳು

೧. ಬೊದಿಲೇರನ ಸಖ

ಸಂ. ರಾಘವೇಂದ್ರ ಪಾಟೀಲ

ಗೆಳತಿ : ಲಂಕೇಶ್; ವೈದೇಹಿ

೨. ಬೋದಿಲೇರನ ಸಖ

ಸಂ. ರಾಘವೇಂದ್ರ ಪಾಟೀಲ

ಲಂಕೇಶರ ಕಥೆಗಳು

ಡಾ.ಹೆಚ್.ಎಸ್. ರಾಘವೇಂದ್ರ ರಾವ್

ಅನುಬಂಧ

ಆಕರ ಕೃತಿಗಳು

೧. ಬಿರುಕು – ೧೯೮೬ : ಪಿ.ಲಂಕೇಶ್
ಪತ್ರಿಕೆ ಪ್ರಕಾಶನ
ಬಸವನಗುಡಿ, ಬೆಂಗಳೂರು

೨. ಮುಸ್ಸಂಜೆಯ ಕಥಾ ಪ್ರಸಂಗ – ೧೯೮೭ : ಪಿ.ಲಂಕೇಶ್
ಪತ್ರಿಕೆ ಪ್ರಕಾಶನ
ಬಸವನಗುಡಿ, ಬೆಂಗಳೂರು

೩. ಅಕ್ಕ – ೧೯೯೪ : ಪಿ.ಲಂಕೇಶ್
ಪತ್ರಿಕೆ ಪ್ರಕಾಶನ
ಬಸವನಗುಡಿ, ಬೆಂಗಳೂರು

೪. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ
(೧೯೯೩) : ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು
ಪ್ರಧಾನ ಸಂಪಾದಕರು,
ಬರಗೂರು ರಾಮಚಂದ್ರಪ್ಪ

೫. ಅಭಿನವ ಮಾಲಿಕೆ – ೮ ;
ಯಾರ ಜಪ್ತಿಗೂ ಸಿಗದ ನವಿಲುಗಳು : ಸಂ. ಪಿ. ಚಂದ್ರಿಕಾ
(ದೇವನೂರು ಮಹಾದೇವರ ಸಾಹಿತ್ಯ ಕುರಿತು) ರಾಜಾಜಿನಗರ ಎರಡನೇ ಹಂತ
(೧೯೯೯) ಬಿ ವಿಭಾಗ, ಬೆಂಗಳೂರು.

೬. ಬೋದಿಲೇರನ ಸಖ : ಸಂ. ರಾಘವೇಂದ್ರ ಪಾಟೀಲ

ಲಂಕೇಶ್ ನೆನಪಿನ ಸಂಪುಟ ೨೦೦೧ : ಸಂವಾದ ಪ್ರಕಾಶನ

ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

೭. ಸ್ತ್ರೀವಾದ ನೆಲೆಗಳು ಮತ್ತು ನಿಲುವುಗಳು : ಡಾ. ಕಿಶೊರಿ ನಾಯಕ್ ಕೆ.

(೧೯೯೯) ಪ್ರಸಾರಾಂಗ

ಮಂಗಳೂರು ವಿಶ್ವವಿದ್ಯಾಲಯ

೮. ನಿಲುಮೆ : ಡಾ. ಸಬಿಹಾ ಭೂಮಿಗೌಡ

ಶಕ್ತಿ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್

ಬೆಂಗಳೂರು.

೯. ಪಿ. ಲಂಕೇಶ್

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು: ಸಂ. ಪ್ರಧಾನ್ ಗುರುದತ್ತ

ನವ ಕರ್ನಾಟಕ ಪಬ್ಲಿಕೇಷನ್

೧೦. ಟೀಕೆ – ಟಿಪ್ಪಣಿ : ಪಿ. ಲಂಕೇಶ್

ಹತ್ತೂವರೆ ವರ್ಷದ ಕೆಲವು ಬರಹಗಳು : ಪತ್ರಿಕೆ ಪ್ರಕಾಶನ

(೧೯೯೧) : ಬಸವನಗುಡಿ, ಬೆಂಗಳೂರು.

೧೧. ಬಯಲು ರೂಪ – ಸಂಪುಟ ೨ : ಪ್ರೊ. ಸಿ.ಎನ್.ರಾಮಚಂದ್ರನ್

[ಆಯ್ದ ವಿಮರ್ಶಾ ಲೇಖನಗಳ ಸಂಗ್ರಹ] ಸಪ್ನ ಬುಕ್ ಹೌಸ್

ಬೆಂಗಳೂರು.

ಪರಾಮರ್ಶನ ಗ್ರಂಥಗಳು

೧.	ಕನ್ನಡ ನಾಟಕಗಳಲ್ಲಿ ಸ್ತ್ರೀ ಲೋಕ:	ಡಾ. ಹೇಮಪಟ್ಟಣ ಶೆಟ್ಟಿ
	೨೦೦೫	ಅನನ್ಯ ಪ್ರಕಾಶನ, ಶ್ರೀದೇವಿ ನಗರ ವಿದ್ಯಾಗಿರಿ ಧಾರವಾಡ.
೨.	ಸ್ತ್ರೀ ಕಥನ :	ಡಾ. ಶೈಲಜಾ ಹಿರೇಮಠ
	೨೦೦೩	ಭುವನ ಪ್ರಕಾಶನ ಹೊಸಪೇಟೆ.
೩.	ನವ್ಯ ಸಾಹಿತ್ಯ ದರ್ಶನ :	ಡಾ. ಶಾಂತಿನಾಥ ದೇಸಾಯಿ
	೧೯೯೦	ಪರಿಸರ ಸಾಹಿತ್ಯ ಪ್ರಕಾಶನ ಶಿವಮೊಗ್ಗ.
೪.	ಕಾದಂಬರಿ ವಸ್ತು ಮತ್ತು ತಂತ್ರ :	ಗಿರಡ್ಡಿ ಗೋವಿಂದರಾಜ್
	೧೯೮೭	ಸ್ನೇಹ ಪ್ರಕಾಶನ ವಿಜಯನಗರ, ಬೆಂಗಳೂರು.
೫.	ನವ್ಯತೆ :	ಲೇಖಕರು; ನರಹಳ್ಳಿ ಬಾಲಸುಬ್ರಹ್ಮಣ್ಯ
	೧೯೯೨	ಸಂ. ಗಿರಡ್ಡಿ ಗೋವಿಂದರಾಜ್ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
೬.	ಮಹಿಳೆ ಮತ್ತು ಸಮಾಜ :	ಡಾ. ವಿಜಯಕುಮಾರಿ. ಎಸ್. ಕರಿಕಲ್
	೨೦೦೭ :	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ